ಅಧ್ಯಕ್ಷರು:– ಮಾನ್ಯ ಸಚಿವರು ಈಗ ವಿಧೇಯಕವನ್ನು ಮಂಡಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ

(ವಿಧೇಯವನ್ನು ಮಂಡಿಸಲಾಗಿದೆ

(ಅನುಬಂಧ–3)

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಮುಂದುವರಿದ ಚರ್ಚೆ.

ವಿಷಯ: ರಾಜ್ಯದಲ್ಲಿ ಇತ್ತಿಚಿನ ದಿನಗಳಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು ಅದನ್ನು ತಡೆಯುವಲ್ಲಿ ರಾಜ್ಯಸರ್ಕಾರ ವಿಫಲವಾಗಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಮತ್ತು ರಾಜ್ಯದಲ್ಲಿ ನಡೆಯುತ್ತಿರುವಂಥ ಘಟನೆಗಳಿಂದ ರಾಜ್ಯದಲ್ಲಿ ಕೇವಲ ಭಯಭೀತ ವಾತಾವರಣವಲ್ಲ, ಇಡೀ ರಾಷ್ಟ್ರದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಬೆಂಗಳೂರಿಗೆ ಸುಂದರ ನಗರ, ಅತ್ಯಂತ ಶಾಂತಿಯುತವಾದ ನಗರ ಎನ್ನುವ ಹೆಗ್ಗಳಿಕೆ ಏನಿತ್ತು, ಅದಕ್ಕೆ ವ್ಯತಿರಿಕ್ತವಾಗಿ ಬೆಂಗಳೂರಿಗೆ ಕೆಟ್ಟ ಹೆಸರು ಬರುವಂಥ ಘಟನೆಗಳು ಇತ್ತೀಚೆಗೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಬೆಂಗಳೂರಿನಲ್ಲಿ ಯಾವುದೇ ಘಟನೆ ನಡೆದಾಗ, ಅದು ಕಸದ ಸಮಸ್ಯೆ ಬಂದಾಗಲೂ ಅದು ಕೇವಲ ರಾಜ್ಯ ಮಟ್ಟದಲ್ಲಿ ಸುದ್ಧಿಯಾಗುವುದಿಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ಧಿಯಾಗುತ್ತದೆ. ಅಂದರೆ ಬೆಂಗಳೂರು

ಅಂತರರಾಷ್ಟ್ರೀಯ ನಗರ. ಬೆಂಗಳೂರಿಗೆ ತನ್ನದೆ ಆದಂಥ ಒಂದು ಗೌರವವಿದೆ, ತನ್ನದೇ ಆದಂಥ ಒಂದು ವ್ಯವಸ್ಥೆಯಿದೆ. ಬೆಂಗಳೂರಿನ ಜನ, ಕರ್ನಾಟಕದ ಜನ ಬಹಳ ಶಾಂತ ರೀತಿಯಿಂದ ಇರುವಂಥವರು. ಎಲ್ಲದಕ್ಕೂ ಒಂದು discipline ಇರುವಂಥ ಜನರು. ಇಂಥ ಸಂದರ್ಭದಲ್ಲಿ, ಇತ್ತೀಚಿನ ಘಟನೆಗಳನ್ನು ನಾವು ನೋಡಿದಾಗ, ನಾವು ಪ್ರತಿದಿವಸ ಪತ್ರಿಕೆಗಳನ್ನು ತೆಗೆದು ನೋಡಿದರೆ, ಟಿ.ವಿ.ಗಳನ್ನು ನೋಡಿದರೆ, ಎಲ್ಲಿ ನೋಡಿದರೂ ಅತ್ಯಾಚಾರ, ದೌರ್ಜನ್ಯ,, ಮಹಿಳೆಯರ ಮೇಲೆ ಅತ್ಯಾಚಾರ ಮಾಡುವಂಥಾದ್ದು, ರಸ್ತೆಯಲ್ಲಿ ಹೋಗುವಂಥ ಮಹಿಳೆಯರನ್ನು ಕಾರಿನಲ್ಲಿ ಹಾಕಿಕೊಂಡು ಹೋಗಿ ಅವರ ಮೇಲೆ ಅತ್ಯಾಚಾರ ಮಾಡುವಂಥಾದ್ದು, ದೌರ್ಜನ್ಯ ಎಸಗುವಂಥಾದ್ದು ನಡೆಯುತ್ತಿದೆ. ಇದು ಎಲ್ಲಿಯವರೆಗೆ ಬಂದಿದೆ ಎಂದರೆ, ದುರ್ದೈವದ ಸಂಗತಿ ಎಂದರೆ ಚಿಕ್ಕಚಿಕ್ಕ ಬಾಲಕಿಯರ ಮೇಲೆ ದೌರ್ಜನ್ಯ ಅತ್ಯಾಚಾರಗಳು ನಡೆಯುತ್ತಿರುವಂಥ ಘಟನೆಗಳನ್ನು ನಾವು ನೋಡಿದಾಗ ಇಲ್ಲಿ ಮಾನವೀಯತೆ ಇದೆಯೇ, ಇಲ್ಲವೇ ಎನ್ನುವ ಪ್ರಶ್ನೆ ಮೂಡುತ್ತದೆ. ಒಂದು ರಾಕ್ಷಸೀ ಮನೋಪ್ರವೃತ್ತಿ ಪ್ರಾರಂಭವಾಗಿದೆ. ಆ ದುಷ್ಕೃತ್ಯಗಳನ್ನು ಮಾಡುವಂಥ ವ್ಯಕ್ತಿಗಳು ಯಾವ ಹಂತಕ್ಕೆ ಹೋಗಿದ್ದಾರೆ ಎನ್ನುವುದನ್ನು ನೋಡಿದಾಗ ನಾವೆಲ್ಲರೂ ನಾಚಿಕೆ ಪಡುವಂಥ, ತಲೆತಗ್ಗಿಸುವಂಥ ಘಟನೆಗಳು ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಭಾರತ ದೇಶ ಒಂದು ಸಂಸ್ಕೃತಿ, ಒಂದು ಪರಂಪರೆಗೆ ಹೆಸರುವಾಸಿಯಾದಂಥ ನಾಡು. ಅಂಥ ಕಡೆ ಇವತ್ತು ಮಹಿಳೆಯರ ಮೇಲೆ ಇಷ್ಟೊಂದು ದೌರ್ಜನ್ಯ ನಡೆಯುತ್ತಿರುವುದನ್ನು ನಾವು ನೋಡಿದರೆ ಎಲ್ಲೋ ಒಂದು ಕಡೆ ಕಂಟ್ರೋಲ್ ತಪ್ಪುತ್ತಿದೆ, ಆಡಳಿತದಲ್ಲಿ ಬಿಗಿ ಹಿಡಿತ ತಪ್ಪುತ್ತಿದೆ ಎಂದು ಅನಿಸುತ್ತದೆ. ನಾನು 2–3 ಘಟನೆಗಳನ್ನು ಉದಾಹರಿಸುತ್ತೇನೆ. ಕಳೆದವಾರವೂ ನಾವು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆವು. 22 ವರ್ಷದ ಯುವತಿ ತನ್ನ ಅಪಾರ್ಟ್‌ಮೆಂಟ್ ಮುಂದೆ ಮಾತನಾಡಿಕೊಂಡು ನಿಂತಂಥ ಸಂದರ್ಭದಲ್ಲಿ, ಕಾರಿನಲ್ಲಿ ಬಂದ ಕೆಲವು ದುಷ್ಕರ್ಮಿಗಳು ಅವಳನ್ನು ಎಳೆದುಕೊಂಡು ಹೋಗಿ ಕಾರಿನಲ್ಲಿ ಕೂರಿಸಿಕೊಂಡು ಕಾರನ್ನು ಇಡೀ ಊರಿನಲ್ಲಿ ಸುತ್ತಾಡಿಸಿ, ಅವಳ ಮೇಲೆ

ಅತ್ಯಾಚಾರ ಮಾಡುವಂಥಾದ್ದು, ದೌರ್ಜನ್ಯ ಮಾಡುವಂಥಾದ್ದನ್ನು ನಾವು ನೋಡಿದಾಗ ಇದು ನಿಜಕ್ಕೂ ತಲೆತಗ್ಗಿಸುವಂಥ ವಿಚಾರ. ಆ ಮಹಿಳೆಗೆ ಯಾವ ರೀತಿಯಾದಂಥ ಮಾನಸಿಕ ಕ್ಲೇಶ ಆಗಿರಬಹುದೆಂದು ನಾವು ಅರ್ಥಮಾಡಿಕೊಳ್ಳಬೇಕು. ಆ complaint ನ copy ನನಗೆ ಸಿಕ್ಕಿದೆ. ಆ complaint ನಲ್ಲಿ ಇದ್ದಂಥ ವಿಚಾರಗಳನ್ನು ನಾವು ಇಲ್ಲಿ disclose ಮಾಡುವುದಕ್ಕೆ ಆಗುವುದಿಲ್ಲ. ಆ complaint ನಲ್ಲಿರುವಂಥ ವಿಚಾರವನ್ನು ನೋಡಿದಾಗ ಮನಸ್ಸಿಗೆ ಬಹಳಷ್ಟು ಬೇಜಾರು ಆಗುತ್ತದೆ. ಆ complaint ನಲ್ಲಿರುವಂಥ ಕೆಲವೊಂದು ಘಟನೆಗಳನ್ನು ವಿವರಣೆ ಮಾಡಿದಂಥ ಆ ಯುವತಿಯ ಹೇಳಿಕೆಯನ್ನು ನೋಡಿದಾಗ ಬಹಳಷ್ಟು ಸಂಕಟವಾಗುತ್ತದೆ. ಹೀಗಾಗಿ ಇದನ್ನೆಲ್ಲ ನೋಡಿದಾಗ ಇಂಥ ದೌರ್ಜನ್ಯವನ್ನು ನಾವು ಸಹಿಸಿಕೊಳ್ಳಬೇಕೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಆ ರೀತಿಯಾದಂಥ ದೌರ್ಜನ್ಯ, ಆ ರೀತಿಯಾದಂಥ ಅತ್ಯಾಚಾರ ಆ complaint ನಲ್ಲಿದ್ದಂಥ ಹೇಳಿಕೆಗಳನ್ನು ನೋಡಿಬಿಟ್ಟರೆ ಅದನ್ನು ಬಹುಶಃ ರಾಕ್ಷಸ ಹಾಗೆ ಇದ್ದಂಥವರು ಸಹಿತ ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ನನಗನ್ನಿಸುತ್ತದೆ. ಮಾನವೀಯತೆ ಇದ್ದಂಥವರು ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲ. ಆ ರೀತಿಯ ರಾಕ್ಷಸಿ ಪ್ರವೃತ್ತಿ ಇದ್ದಂಥವರಿಗೆ ನಾವೇನು ಕಡಿವಾಣ ಹಾಕಿದ್ದೇವೆ? ಆ ಮಹಿಳೆಯ ಪರಿಸ್ಥಿತಿ ಏನಾಗಿರಬಹುದು? ಮಹಿಳೆ ಸಮಾಜದ ಮುಂದೆ ಯಾವ ರೀತಿ ತಲೆ ಎತ್ತಿ ನಿಲ್ಲಬೇಕು? ಇವೆಲ್ಲ ನೋಡಿದಾಗ ಬಹಳ ಮುಜುಗರವಾಗುವಂಥ ಸನ್ನಿವೇಶಗಳನ್ನು ನಾವು ನೋಡುತ್ತಿದ್ದೇವೆ. ಹಾಗೆಯೇ ಶಾಲೆಯಲ್ಲಿದ್ದಂಥ 6 ವರ್ಷದ ಬಾಲಕಿ ಮೇಲೆ ಅದೇ ಶಾಲೆಯ skatting instructor ಯಾರಿದ್ದಾರೆ, ಆತನೇ ಅವಳನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಿ ಅವಳ ಮೇಲೆ ದೌರ್ಜನ್ಯ ಮಾಡುತ್ತಾನೆಂದರೆ ಅಂಥವರಿಗೆಲ್ಲ ಶಿಕ್ಷಕರು ಎಂದು ಏಕೆ ಕರೆಯಬೇಕು? ಎನ್ನುವಂಥ ವಿಚಾರ ಬರುತ್ತದೆ. ಇವತ್ತು ಶಿಕ್ಷಕರೇ ಶಾಲೆಗಳಲ್ಲಿ ಮಕ್ಕಳ ರಕ್ಷಣೆಗೆ, ಇನ್ನು ಯಾರು ರಕ್ಷಣೆಗೆ ನಿಲ್ಲುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಇನ್ನೊಬ್ಬಳು 15 ವರ್ಷದ ಯುವತಿ, Christian Missionary ಆ ಒಂದು ಸಂಸ್ಥೆಯಲ್ಲಿ ಅವಳ ಮೇಲೆ

ಅತ್ಯಾಚಾರವಾಗುತ್ತದೆ. ಹಾಗೆಯೇ ಬೀದರ್‌ನಲ್ಲಿ ನಿನ್ನೆ ಸಾಮೂಹಿಕ ಅತ್ಯಾಚಾರ ಘಟನೆ ನಡೆಯಿತು. ಮೈಸೂರಿನಲ್ಲಿ ಅತ್ಯಾಚಾರ ಘಟನೆ ನಡೆದಿದೆ. ದಿನನಿತ್ಯ ಒಂದಲ್ಲೊಂದು ಘಟನೆ ನಡೆಯುತ್ತಿದೆ. ಮೊನ್ನೆ ನಾನು ಹೇಳಿದೆ. ಎಷ್ಟೋ ಘಟನೆಗಳು ನಡೆಯುತ್ತವೆ. ಆದರೆ, ನಮ್ಮ ಮಹಿಳೆಯರು, ಹೆಣ್ಣುಮಕ್ಕಳು, ಯುವತಿಯರು, ಬಾಲಕಿಯರು ಇವರೆಲ್ಲ ಏನೋ ಒಂದು ಮುಜುಗರದಿಂದ ತಮ್ಮ parentಗೆ ಹೇಳುವುದಿಲ್ಲ. ಅದರಿಂದ ನನ್ನ ವ್ಯಕ್ತಿತ್ವಕ್ಕೆ ಏನಾಗುತ್ತದೋ ಏನೋ? ಮಾನಸಿಕ ಕ್ಷೋಭೆ ಆಗುತ್ತದೆ. ಆದ್ದರಿಂದ, ಈ ಎಲ್ಲಾ ವಿಚಾರಗಳಿಂದ complaint ಕೊಟುವುದಕ್ಕೆ ಹೋಗುವುದಿಲ್ಲ. ಕೆಲವೊಂದು ಮಹಿಳೆಯರ ಮೇಲೆ ಆದಂಥ ದೌರ್ಜನ್ಯಗಳ ಬಗ್ಗೆ ಎಷ್ಟೋ ಕಡೆ ನಾನು ನೋಡಿದ್ದೇನೆ. ಮೊದಲನೇ ಮಾತು ಆ complaint file ಆಗುವುದಿಲ್ಲ. complaint ಕೊಡಲಿಕ್ಕೆ ಬರುವುದಿಲ್ಲ. ಆದರೆ, ಇವತ್ತು ಯಾರು complaint ಕೊಡುತ್ತಾರೆ ಮಾನಸಿಕವಾಗಿ ಗಟ್ಟಿಯಾಗಿ ಹೊರಗೆ ಬರುತ್ತಾರೆ. ಆಗಿದ್ದು ಆಗಲಿ ಇದನ್ನು ನಾವು face ಮಾಡಬೇಕು, ಇವತ್ತು ಸಮಾಜವನ್ನು ಎದುರಿಸಬೇಕು, ಇಂಥ ದುಷ್ಟ ಪ್ರವೃತ್ತಿ ಇರುವಂಥ ವ್ಯಕ್ತಿಗಳನ್ನು ಎದುರಿಸಬೇಕೆನ್ನುವಂಥ ಒಂದು ದೃಢ ನಿರ್ಧಾರದಿಂದ ಅವರು complaint ಕೊಡುವುದಕ್ಕೆ ಬರುತ್ತಾರೆ. ಈ ರೀತಿ complaint ಕೊಡುವುದಕ್ಕೆ ಬಂದಂಥವರಿಗೆ ನಾವು ಮನೋಸ್ಥೈರ್ಯವನ್ನು ತುಂಬಬೇಕಾಗುತ್ತದೆ. ಅವರಿಗೆ ಧೈರ್ಯವನ್ನು ಕೊಡಬೇಕಾಗುತ್ತದೆ. ಆತ್ಮವಿಶ್ವಾಸವನ್ನು ಕೊಡಬೇಕಾಗುತ್ತದೆ. ಆದರೆ ಅದು ಆಗುತ್ತಿಲ್ಲ, ಆ ಕೊರತೆ ಕಾಣುತ್ತಿದೆ. ಹೀಗಾಗಿ ಎಷ್ಟೋ complaints file ಆಗುವುದಿಲ್ಲ. ಇವತ್ತು police station ಗೆ complaint ಹೋಗುವಂಥವು, police station ನಲ್ಲಿ ಸೌಜನ್ಯದಿಂದ ನಡೆದುಕೊಳ್ಳಬೇಕು. ಯಾರು complaint ಕೊಡುವುದಕ್ಕೆ ಹೋಗುತ್ತಾರೋ, ಅವರನ್ನು ಕರೆದು ಕುಳ್ಳಿರಿಸಿ ಅವರಿಗೆ ಆತ್ಮವಿಶ್ವಾಸ ತುಂಬುವಂಥ ಕೆಲಸ, ಅವರಿಗೆ ಇನ್ನೂ ಹೆಚ್ಚಿಗೆ ನೆರವನ್ನು ಕೊಡುವ ಕೆಲಸ ಇದೆಲ್ಲ ಆಗಬೇಕಾಗಿದೆ. ಇವತ್ತು ದರೋಡೆಕೋರರನ್ನು ಹಿಡಿಯುವುದಿಲ್ಲ. Illegal activities ಮಾಡುವವರನ್ನು ಹಿಡಿಯುವುದಿಲ್ಲ. ಅವರಿಗೆ ಇನ್ನೂ encouragement ಮಾಡುವಂಥದ್ದನ್ನು police ವ್ಯವಸ್ಥೆಯಲ್ಲಿ

ಮಡುತ್ತಿದ್ದಾರೆ. ಆದರೆ, ಈ ರೀತಿ ಯಾರಿಗೆ ಅನ್ಯಾಯವಾಗಿದೆ, ಯಾರಿಗೆ ದೌರ್ಜನ್ಯವಾಗಿದೆ ಅವರು ಬಂದಾಗ ಅವರ ಜೊತೆಯಲ್ಲಿ ಗೌರವ ರೀತಿಯಿಂದ ಮಾತನಾಡುವಂಥದ್ದು, ಗೌರವ ರೀತಿಯಿಂದ ಅವರ ಸಮಸ್ಯೆಯನ್ನು ಕೇಳುವಂಥದ್ದು ಅದು ಇವತ್ತು police station ಗಳಲ್ಲಿ ಮಾಯವಾಗುತ್ತಿದೆ. ಇದು ಏಕೆ ಮಾಯವಾಗುತ್ತಿದೆ ಎನ್ನುವಂಥದ್ದರ ಬಗ್ಗೆ ನಾವು ಸಮಾಲೋಚನೆ ಮಾಡಬೇಕಾಗಿದೆ. ಇವತ್ತು Home Minister ರವರಾಗಲಿ, ಮಾನ್ಯ ಮುಖ್ಯಮಂತ್ರಿಯವರಾಗಲಿ ಮಾಡಬೇಕಾಗುತ್ತದೆ. ಏಕೆ ಈ ಒಂದು ವ್ಯವಸ್ಥೆಗೆ ಹೋಗುತ್ತಿದ್ದೇವೆ, Police Statin ನಲ್ಲಿ ಏನಾಗುತ್ತಿದೆ? ಏಕೆ ಅವರು demoralize ಆಗಿದ್ದಾರೆ? ಇಂಥವನ್ನು ಆ ಘಟನೆ ಬಂದಾಗ ಅದನ್ನು ಎದುರಿಸಲಿಕ್ಕೆ ಸಾಧ್ಯವಿಲ್ಲದಂಥ ಕಠಿಣ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು? ಇದರ ಬಗ್ಗೆ ಎಲ್ಲಾ ರೀತಿಯಾದಂಥ ಆಲೋಚನೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಯಾರು ಏನು ಬೇಕಾದರೂ ಮಾಡಿದರೂ ನಡೆಯುತ್ತದೆ! ಆ ಯುವತಿ ಉದಾಹರಣೆಯನ್ನೇ ತೆಗೆದುಕೊಳ್ಳಿ. ಆ area ದಲ್ಲಿದ್ದಂಥವರು Police ರಿಗೆ ಮಾಹಿತಿ ಕೊಡುತ್ತಾರೆ, ಎಲ್ಲಾ ಕೊಡುತ್ತಾರೆ. ಇವರಿಗೆಲ್ಲ ಮಾಹಿತಿ ಬಂದಿರುತ್ತದೆ. ಇಷ್ಟೆಲ್ಲ ಘಟನೆ ನಡೆದ ಮೇಲೆ voluntary ಆಗಿ complaint ತೆಗೆದುಕೊಳ್ಳಬೇಕಾಗಿತ್ತು. ಆದರೆ ತೆಗೆದುಕೊಳ್ಳುವುದಿಲ್ಲ. ಆಮೇಲೆ ಅವಳೇ ಹೋದಾಗಲೂ ಸಹಿತ ಅದಕ್ಕೆ encourage ಮಾಡಿ ಅವಳಿಂದ statement ತೆಗೆದುಕೊಳ್ಳುವಂಥ ಕೆಲಸ ಆಗಬೇಕಾಗಿತ್ತು. ಅದೂ ಆಗುವುದಿಲ್ಲ. ಅದನ್ನು ತಿರುಚಿ ಬೇರೆ ರೀತಿಯಾದಂಥ statement ತೆಗೆದುಕೊಳ್ಳುವಂಥ ಪ್ರಯತ್ನ ಆಗುತ್ತದೆ. ಇಷ್ಟಾದಮೇಲೂ ಸಹಿತ ಆ ಒಂದು ಕೇಸ್ ಅನ್ನು ದಾಖಲಾತಿ ಮಾಡಲಿಕ್ಕೆ ಹಿಂದೇಟು ಹಾಕುವಂಥದ್ದು, ಬೇರೆ ರೂಪದಲ್ಲಿ complaint ತೆಗೆದುಕೊಳ್ಳುವಂಥದ್ದು, ಇವೆಲ್ಲದರಿಂದ ಮಾನಸಿಕ ಆಘಾತ ಇನ್ನೂ ಜಾಸ್ತಿಯಾಗುತ್ತದೆ. ಕೊನೆಗೆ ಆ ಯುವತಿ Police Commissioner, ಹಿರಿಯ ಅಧಿಕಾರಿಗಳನ್ನು ಭೇಟಿಯಾದಾಗ ಆ complaint ಅನ್ನು lodge ಆಗುವಂಥದ್ದು ಆಗುತ್ತದೆ. ಅವಳ statement ತೆಗೆದುಕೊಳ್ಳುವಂಥದ್ದು ಆಗುತ್ತದೆ. ಇವೆಲ್ಲ ಆದಮೇಲೆ ಮೇಲಿಂದ pressure

ಬರುತ್ತದೆ. ಆದರೆ ಅಲ್ಲಿ ಇದಂಥ Inspector, responsible officer, ಇದಕ್ಕೆ ತಕ್ಷಣವೇ ಸ್ಪಂದನ ಮಾಡಿ ಆರೋಪದಲ್ಲಿರುವವರನ್ನು ಹಿಡಿಯುವಂಥ ಕೆಲಸ ಆಗಬೇಕಾಗಿತ್ತು. ಅದು ಆಗಲಿಲ್ಲ. ಇದರಿಂದ ಏನಗುತ್ತಿದೆ ಎಂದರೆ, ಯಾರೋ complaint ಕೊಡುವುದಕ್ಕೆ ಬಂದಂಥವರೂ ಸಹಿತ ಇಲ್ಲಪ್ಪ, ನಾನು complaint ಕೊಟ್ಟರೆ ಏನೂ ಆಗುವುದಿಲ್ಲ, ಇದರಿಂದ ಏನೂ ಸಾಧನೆ ಮಾಡಲಿಕ್ಕೆ ಸಾಧ್ಯವಿಲ್ಲ, ನಮಗೆ ರಕ್ಷಣೆ ಇಲ್ಲ ಎನ್ನುವಂಥ ಒಂದು ವಾತಾವರಣ ನಿರ್ಮಾಣವಾದರೆ ಇಡೀ ಒಂದು ವ್ಯವಸ್ಥೆಯಲ್ಲಿ ಆ ವಾತಾವರಣ ನಿರ್ಮಾಣವಾಗುತ್ತದೆ. ಮೊದಲು ಅಷ್ಟು ದಿವಸ ಆರೋಪಿಯನ್ನು ಹಿಡಿದಿರಲಿಲ್ಲ, ಆಮೇಲೆ ಹಿಡಿದಿರಿ. ಮಧ್ಯೆ 2-3 ಜನ ಆರೋಪಿಗಳನ್ನು ಹಿಡಿದುಕೊಂಡು ಬಂದಾಗ, ಅವರಲ್ಲ ಎನ್ನುವಂಥಾದ್ದಾಯಿತು. ಮೊದಲನೇ ಆರೋಪಿ ಏನಿದ್ದ, ಅವನು ಹೆಸರು ಹೇಳಿದ ಎಂದು ಕರೆದುಕೊಂಡು ಬಂದಿರಿ. Verify ಮಾಡಲಿಲ್ಲ. ಮುಂದೆ ಅವರಲ್ಲ ಎಂದು ಆಯಿತು. ಮತ್ತೆ ಬೇರೆ ಯಾರೋ ಒಬ್ಬರನ್ನು ಹಿಡಿದಿದ್ದೀರಿ, ಈಗ arrest ಮಾಡಿದ್ದೀರಿ. ಅಂದರೆ, ಎಲ್ಲೋ ಒಂದು ಕಡೆ ತಪ್ಪಾಗುತ್ತಿದೆ, fault ಆಗುತ್ತಿದೆ. Police ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ mistake ಆಗುತ್ತಿದೆ. Police ಅಧಿಕಾರಿಗಳು ಎಷ್ಟು Zeal ಆಗಿ ಕೆಲಸ ಮಾಡಬೇಕಗಿತ್ತೋ ಅದು ಆಗುತ್ತಿಲ್ಲ ಎನ್ನುವಂಥ ಕೊರಗು ಇಲ್ಲಿ ಕಾಣುತ್ತಿದೆ. ಇದರ ಜೊತೆಗೆ ಆ ಶಾಲೆ, ಶಾಲೆಯಲ್ಲಿ ಇವತ್ತು Management ನವರು ಹೇಗೆ ಇದ್ದಾರೆಂದರೆ, ಆ parents ಕಡೆಯಿಂದ ಬರೆಸಿಕೊಳ್ಳುತ್ತಾರೆ. ಶಾಲೆಯಲ್ಲಿದ್ದಂಥ ಮಕ್ಕಳಿಗೆ ಏನಾದರೂ ಆದರೆ ನಾವು ಜವಾಬ್ದಾರರಲ್ಲ ಎನ್ನುವುದನ್ನು ಅವರು admission ಕಾಲದಲ್ಲಿಯೇ from ನೊಳಗೆ ಬರೆಸಿಕೊಳ್ಳುತ್ತಾರೆ. ಶಿಕ್ಷಣ ಇಲಾಖೆ ಇದನ್ನೆಲ್ಲ ಗಮನಹರಿಸಬೇಕು. ಅವರು private school, ಏನೋ ನಡೆಸುತ್ತಿದ್ದಾರೆ, ಮಕ್ಕಳನ್ನು parents ಖಾಸಗಿ ಶಾಲೆಗೆ ಕಳುಹಿಸುತ್ತಿದ್ದಾರೆ, ಏನೋ ಅವರಿಗೆ ಬಿಟ್ಟಂಥ ವಿಚಾರ ಎಂದು ಸುಮ್ಮನಿರಬಾರದು. ಇನ್ನು ಮುಂದೆ ಅಲ್ಲಿ ಏನಾದರೂ ಮಕ್ಕಳಿಗೆ ಆದರೆ ಅದು ಸಂಬಂಧಪಟ್ಟ ಶಾಲೆಯದೇ ಜವಾಬ್ದಾರಿ ಎಂದು ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇಷ್ಟು ಹೇಳಿಕೆ

ಕೊಟ್ಟುಕೊಂಡು ಕುಳಿತರೆ ಆಗುವುದಿಲ್ಲ. ಇವತ್ತು ಅವರು ಸರಿಯಾದಂಥ ಉಸ್ತುವಾರಿ ಮಾಡುತ್ತಿದ್ದಾರೋ, ಇಲ್ಲವೋ, ಮಕ್ಕಳಿಗೆ ರಕ್ಷಣೆ ಕೊಡುತ್ತಿದ್ದಾರೋ ಇಲ್ಲವೋ, ಇದನ್ನು ನೋಡುವಂಥ ಜವಾಬ್ದಾರಿ ಶಿಕ್ಷಣ ಇಲಾಖೆಯದ್ದೂ ಇದೆ, ಅದೇ ರೀತಿ police department ಗೂ ಇದೆ. ನಾವು ಅವರ ಮೇಲೆ ಜವಾಬ್ದಾರಿ shift ಮಾಡುವುದರಿಂದ ಏನೂ ಆಗಲಿಕ್ಕೆ ಸಾಧ್ಯವಿಲ್ಲ. ಅವರು ಏನೋ ಒಂದು ನೆಪ ಹೇಳುತ್ತಾರೆ. ಎಲ್ಲಿಯವರೆಗೆ ಎಂದರೆ ಆ Management ನವರು ಆ 6 ವರ್ಷದ ಬಾಲಕಿ ಮೇಲೆ ದೌರ್ಜನ್ಯವಾದಾಗ ಅವರು ಕೆಲವು ದಿವಸ statement ಕೊಡಲಿಲ್ಲ. ಆ ಬಾಲಕಿ ಮಾನಸಿಕ ಕ್ಷೋಭೆಗೊಳಗಾದಳು. ಒಂದು ವಾರವಾಯಿತು. ಮುಂದೆ ಹಂತ ಹಂತವಾಗಿ ಅವಳಿಂದ ಇವೆಲ್ಲ ಬೆಳಕಿಗೆ ಬಂತು. ಒಂದು ವಾರ 10 ದಿವಸಗಳಾದ ಮೇಲೆ ಈ complaint ತೆಗೆದುಕೊಳ್ಳುವಂತೆ ಆಯಿತು. ಅಲ್ಲಿಯವರೆಗೆ ಕೊಡಲೇ ಇಲ್ಲ. ಆ ಬಾಲಕಿ ಹೇಗೆ ಕೊಡುತ್ತಾಳೆ? ಆ ಹೇಳಿಕೆ ಎಲ್ಲ ಬಾಲಕಿಗೆ ಮುಜುಗರವಾಗುವಂಥದ್ದು. ಹೀಗಾಗಿ ಇತ್ತೀಚೆಗೆ ಅವೆಲ್ಲವೂ ಹೊರಗೆ ಬಂದವು. ಎಲ್ಲಿ ಶಿಕ್ಷಕ ಕೆಲಸ ಮಾಡುವಂಥದ್ದು, ಆತ ಎಲ್ಲಿಯವರೆಗೆ ಎಂದರೆ agitation ಆಗುವವರೆಗೆ ಆತನ arrest ಆಗಲಿಲ್ಲ. ಆ School ನ Management ನವರು statement ಏನು ಕೊಡುತ್ತಾರೆಂದರೆ, ಇಂಥ ಘಟನೆಯೇ, ದೌರ್ಜನ್ಯ ಆಗಿಲ್ಲವೆಂದು ಹಾರಿಕೆಯಾಗಿ ಹೇಳುತ್ತಾರೆ. ನಮ್ಮ school ನಲ್ಲಿ ಯಾರೂ ಇಂಥ ಘಟನೆಯಲ್ಲಿ ಭಾಗವಹಿಸಿಲ್ಲ, ಈ ದೌರ್ಜನ್ಯ ಮಾಡಿಲ್ಲ ಎಂದು ಒಂದು ಕಡೆ Management ನವರು ಹೇಳುತ್ತಾರೆ. ಇದು ನಮ್ಮ ಜವಾಬ್ದಾರಿ ಅಲ್ಲ ಎಂದು ಆಮೇಲೆ ಹೇಳುತ್ತಾರೆ. ಕಡೆಗೆ Human Rights Commission ನ ಸದಸ್ಯರು ಅಲ್ಲಿಗೆ ಹೋಗಿ ಭೇಟಿಯಾದಾಗ ಅವರ ಮುಂದೆ, ಆ ಬಾಲಕಿ ಅಸ್ವಸ್ಥ ಬಾಲಕಿ, ಮಾನಸಿಕವಾಗಿ ಅಸ್ವಸ್ಥವಾಗಿರುವಂಥ ಬಾಲಕಿ ಎಂದು ಹೇಳಿ shift ಮಾಡುವಂಥದ್ದನ್ನು ಹೇಳುತ್ತಾರೆ. ಆ ಬಾಲಕಿಯದೇ ತಪ್ಪಿದೆ, ನಮ್ಮದೇನೂ ಜವಾಬ್ದಾರಿ ಇಲ್ಲ, ನಮ್ಮ ಶಿಕ್ಷಕರದ್ದು ಏನೂ ಜವಾಬ್ದಾರಿ ಇಲ್ಲ ಎನ್ನುವಂಥ ರೀತಿಯಲ್ಲಿ ಅವರು statement ಕೊಟ್ಟಾಗ ಜನರು ದಂಗೆ ಏಳುತ್ತಾರೆ. ನೀವು ನೋಡಿದಿರಿ. 5 ರಿಂದ 10 ಸಾವಿರ ಜನ ದಂಗೆ ಎದ್ದರು. ಇವತ್ತು

ಬೆಂಗಳೂರಿನಲ್ಲಿ ಯಾವ ಒಂದು political connection ಇಲ್ಲದಂಥ non political persons, citizens of the city ಅವರು ಬೀದಿಗೆ ಇಳಿದು ಹೋರಾಟ ಮಾಡುತ್ತಾರೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆದುದರ ವಿರುದ್ಧವಾಗಿ ಪ್ರತಿಭಟನೆ ಮಾಡುತ್ತಾರೆ. ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಈ emotional feelings ಏಕೆ ಬಂತು? ಈ ರೀತಿ ದೌರ್ಜನ್ಯವಾಗುತ್ತಿದೆ, ಇವತ್ತು ಎಲ್ಲೋ ಒಂದು incident ಹೊರಗೆ ಬಂದಿದೆ. ಈ ತರಹದ ದೌರ್ಜನ್ಯಗಳು ನಡೆಯುತ್ತಿರುತ್ತವೆ, ಪ್ರತಿಭಟನೆ ಮಾಡುವಂಥದ್ದು, complaint file ಮಾಡುವಂಥದ್ದು ಆಗಿರುವುದಿಲ್ಲ. ಎಷ್ಟೋ case ಗಳು ಮುಚ್ಚಿಕೊಂಡು ಹೋಗುತ್ತವೆ. ಆದರೆ, ಯಾವಾಗ ಒಂದು case ಹೊರಗೆ ಬರುತ್ತದೆ, ಯಾವ parents complaint ಕೊಡಲಿಕ್ಕೆ ready ಆಗುತ್ತಾರೆ, ಆ ಸಂದರ್ಭದಲ್ಲಿ ಇಡೀ ಜನರ ಬೆಂಬಲ ಅವರಿಗೆ ಸಿಗಲಿಕ್ಕೆ ಸಾಧ್ಯತೆ ಇದೆ. ಅದು ಇವತ್ತು 5–10 ಸಾವಿರಕಿಂತ ಹೆಚ್ಚು ಜನ ಇವತ್ತು ಬೀದಿಗೆ ಬಿದ್ದರು. ಹೋರಾಟ ಮಾಡುವಂಥ ಆ ಘಟನೆ ನೋಡಿದಾಗ ಆ ಜನರ emotional feelings ನೋಡಿದಾಗ ಇವತ್ತು ಮಹಿಳೆಯರ ಮೇಲೆ, ಬಾಲಕಿಯರ ಮೇಲೆ ಏನು ಅತ್ಯಾಚಾರವಾಗುತ್ತಿದೆ, ಇದೆಲ್ಲ ಇವತ್ತು ಆ ಜನರ emotional feelings ಮೇಲೆ ನಮಗೆ ಗುರುತು ಆಗುವಂಥದ್ದು. ಇವೆಲ್ಲ ನಾವು ತಲೆತಗ್ಗಿಸುವಂಥ ವಿಚಾರ. ಹೀಗಾಗಿ ಇಂಥದಕ್ಕೆ ಆ management ನವರ ಮೇಲೆ ಏನು ಕ್ರಮ? ಅಲ್ಲಿಯ Management ನ chairman ಬೇಜವಾಬ್ದಾರಿಯಾದ statement ಕೊಡುತ್ತಾನೆ. ನಿಜವಾಗಿ ಆತನನ್ನೂ ಆರೋಪಿ ಮಾಡಬೇಕು. ಆತನೂ ಒಬ್ಬ ಆರೋಪಿ. ಮೊದಲು ಆ ಶಿಕ್ಷಕನನ್ನು protection ಮಾಡಲಿಕ್ಕೆ ಅವನನ್ನು ರಕ್ಷಣೆ ಮಾಡಲಿಕ್ಕೆ ಹೋಗುತ್ತಾನೆ. ಆಮೇಲೆ ಆ ಬಾಲಕಿಯ ಮೇಲೆ ಬಾಲಕಿ ಮಾನಸಿಕ ಅಸ್ವಸ್ಥ ಬಾಲಕಿ ಎಂದು ಸಿಟ್ಟು ಮಾಡಲಿಕ್ಕೆ ಹೋಗುತ್ತಾನೆ. ಈ ರೀತಿ ತಮ್ಮ ಜವಾಬ್ದಾರಿಯಿಂದ ಹಾರಿಸಿಕೊಳ್ಳುವ ಕೆಲಸವನ್ನು ಆ managementನ Chairman ಮಾಡುತ್ತಾರಲ್ಲ, ಆತನೂ ಸಹ ಇವತ್ತು ಆರೋಪಿ. ಆತನನ್ನೂ ಸಹ ನೀವು ಆರೋಪಿ ಸ್ಥಾನದಲ್ಲಿ ನಿಲ್ಲಿಸಬೇಕಾಗುತ್ತದೆ. FIR ನಲ್ಲಿ ಆತನನ್ನೂ ಆರೋಪಿ ಮಾಡಬೇಕಾಗುತ್ತದೆ. ಅವನ ಮೇಲೂ ಸಹ action

ತೆಗೆದುಕೊಂಡು ಅವನನ್ನೂ arrest ಮಾಡಬೇಕಾಗುತ್ತದೆ. ಇವತ್ತು ಹಲವಾರು ವಿಚಾರಗಳು ಹೊರಗೆ ಬಂದಿವೆ. ಯಾರು ಇವತ್ತು ಮೊದಲನೇ ಆರೋಪಿ ಇದ್ದಾನೆ, ಆ ಶಿಕ್ಷಕ, skating training ಕೊಡುವಂತಹ instructor, ಆತನ arrest ಆಗಿದೆ. ಇವತ್ತು Police Commissioner ರವರ statement ಅನ್ನು ನಾನು ನೋಡಿದೆ. ಆತನ mobile phone ನಲ್ಲಿ ಹಲವಾರು video clippings, sexual video clippings ಅನ್ನು ವಿದ್ಯಾರ್ಥಿಗೆ ತೋರಿಸುವಂಥದ್ದು ಇದೆಲ್ಲ ಮಾಡುವಂಥದ್ದು. ಇದೆಲ್ಲ management ನವರ ಗಮನಕ್ಕೆ ಬರಲಿಲ್ಲವೋ, ಹೇಗೆ? ಅಂದರೆ ಇಂಥ ವ್ಯಕ್ತಿಗಳು ಇರುವುದನ್ನು ನೋಡಿದರೆ ಇಡೀ ವ್ಯವಸ್ಥೆ ಕೆಟ್ಟುಹೋಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಬಾಲಕ, ಬಾಲಕಿಯರ ಮೇಲೆ ಕೆಟ್ಟದಾದ ಪರಿಣಾಮ ಬೀರಲಿಕ್ಕೆ ಸಾಧ್ಯವಿದೆ. ಹೀಗಾಗಿ, ಇಂಥವರ ಮೇಲೆ ಬಹಳ serious ಆಗಿ, severe ಆದಂಥ action ಅನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಬೆಂಗಳೂರು ಏನಾಗಿದೆ ಎಂದರೆ, ಬೆಂಗಳೂರು ನಿಜವಾದ ಶಾಂತಿಯುತ ಜನ ಇರುವಂಥದ್ದು, ಸಂಸ್ಕೃತಿಗೆ ಹೆಸರಾದ ಜನ ಇಡೀ ರಾಜ್ಯದಲ್ಲಿ ಇವತ್ತೇನು ಘಟನೆಗಳು ನಡೆಯುತ್ತಿವೆ, ಇದೂ ಸಹ ನಮ್ಮ ಸಂಸ್ಕೃತಿಗೆ ತಕ್ಕುದಾದ ಘಟನೆಗಳಲ್ಲ. ನಾಚಿಕೆಪಡುವಂಥ ಘಟನೆ. ಇದರಿಂದ ಮಹಿಳೆಯರ ಆತ್ಮಸ್ಥೈರ್ಯ ಕುಗ್ಗುತ್ತಿದೆ. ಅವರು ಇನ್ನೂ ದೌರ್ಬಲ್ಯರಾಗಿ ಹೋಗುತ್ತಿದ್ದಾರೆ. ಈ ಒಂದು ಘಟನೆಯ ಮುಖಾಂತರ, ಮಹಿಳೆಯರಿಗೆ ಗೌರವವಿಲ್ಲದಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇತ್ತೀಚೆಗೆ ಒಂದು ಸಂಸ್ಥೆಯವರ ಪ್ರಕಾರ ಇಡೀ ರಾಷ್ಟ್ರದಲ್ಲಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿಯವರು 2013ರಲ್ಲಿ ಒಂದು report ಕೊಟ್ಟಿದ್ದಾರೆ. ಆ report ನ ಅನ್ವಯ ಇವತ್ತು ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಈ ರೀತಿ ಮಹಿಳೆಯರ ಮೇಲೆ ದೌರ್ಜನ್ಯವಾಗುವಂಥ ನಗರಗಳಲ್ಲಿ ದೆಹಲಿ, ಬಾಂಬೆ ಬಿಟ್ಟು ನಂತರ ಬೆಂಗಳೂರು ಹೆಚ್ಚು ಮಹಿಳೆಯರ ಮೇಲೆ ದೌರ್ಜನ್ಯವಾಗುತ್ತಿದೆ ಮತ್ತು ಅತ್ಯಾಚಾರವಾಗುತ್ತಿದೆ ಎನ್ನುವ ವರದಿಯನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಇದ್ದಂಥ ಸಂದರ್ಭದಲ್ಲಿ ಬೆಂಗಳೂರಿಗೆ

ಸುಂದರ ನಗರ, ಬಹಳ ಶಾಂತಿಯುತ ನಗರ ಎನ್ನುವ ಹೆಸರಿತ್ತು. ಈಗ ಅದು ಹೋಗಿ ಹಂತಕರ ನಗರ, ಅತ್ಯಾಚಾರಿಗಳ ನಗರ ಎನ್ನುವುದು ಏನೊಂದು board ಸಿಗುತ್ತಿದೆ, ಒಂದು title ಸಿಗುತ್ತಿದೆ, ಇದು ನಮಗೆ ಗೌರವ ತರುವಂಥದ್ದಲ್ಲ ಎನ್ನುವ ಮಾತು ಹೇಳುತ್ತೇನೆ. ಹೀಗಾಗಿ, ನಿಮ್ಮ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅಲ್ಲಿ ಯಾರೋ ಈ ರೀತಿಯ ಅತ್ಯಾಚಾರ ನಡೆದಾಗ ಅದರ ಬಗ್ಗೆ ತಕ್ಷಣವೇ ಪ್ರಕರಣವನ್ನು ದಾಖಲು ಮಾಡಿಕೊಂಡು ಅದನ್ನು investigation ಮಾಡಿ ಅವರನ್ನು arrest ಮಾಡುವುದಕ್ಕೇನು ಮಾಡುತ್ತಾರೆ? ನಾವು Assembly ಯಲ್ಲಿ ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆಯೇ, ಜನ ಬೀದಿಗಿಳಿದು ದಂಗೆ ಏಳುವ ಮುಂಚೆಯೇ ಪೊಲೀಸ್ ಅಧಿಕಾರಿಗಳು ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲಪ್ಪ, ಎಲ್ಲಿ ಚರ್ಚೆಯಾದರೆ, ಎಲ್ಲಿ ನಾವು arrest ಮಾಡಿದ್ದೇವೆ ಎನ್ನುವಂಥ ಒಂದು ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ. ಇವತ್ತು ನಿಮ್ಮ ಚೀತಾ ಇದೆ, ಹೊಯ್ಸಳ ಎಂದು ಇದೆ. ಅವು ಏನು ಮಾಡುತ್ತಿವೆ? ರಾತ್ರಿ ಗಸ್ತು ಮಾಡುವಂತಹ ವ್ಯವಸ್ಥೆ ಇದೆ. 24 hours ಗಸ್ತು ಮಾಡುವಂಥ ವಾಹನಗಳಿವೆ. ಅಲ್ಲಿ ಅಡ್ಡಾಡುತ್ತಿದ್ದಾರೆ? ನೀವು ಕೆಲವು instructions ಕೊಟ್ಟಿದ್ದೀರಿ. Instructions ಅನ್ನು ಇವತ್ತು ಕೊಟ್ಟಿದ್ದೀರೋ, ಯಾವತ್ತು ಕೊಟ್ಟಿದ್ದೀರೋ? ಈ instructions ಮೊದಲಿನಿಂದಲೂ ಇರಬೇಕು. ಅಭಯ ಎನ್ನುವಂಥ ಒಂದು ವಿಶೇಷ ಗಸ್ತು ವಾಹನವಿದೆ. ಅಭಯ ಎನ್ನುವ ಗಸ್ತು ವಾಹನ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅಭಯ ಎನ್ನುವ ವಾಹನವನ್ನು ನಾನಂತೂ ಎಲ್ಲಿಯೂ ನೋಡಿಲ್ಲ. ಚೀತಾ ಎನ್ನುವಂಥದ್ದು, ಹೊಯ್ಸಳ ಎಲ್ಲಿವೆ ಎಂದು ನನಗೆ ಗೊತ್ತಾಗುತ್ತಿಲ್ಲ. ಇವತ್ತು ಹೆಚ್ಚಿನ ರೀತಿಯ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗಿದೆ. ಹೆಚ್ಚು ವಾಹನಗಳನ್ನು ಕೊಡಬೇಕಾಗಿದೆ. ಬೆಂಗಳೂರು ನಗರದ ಜನಸಂಖ್ಯೆ near 1 ಕೋಟಿ ಇದೆ. ಇಲ್ಲಿ ಎಷ್ಟು ಸಿಬ್ಬಂದಿ ಬೇಕಾಗುತ್ತದೆ, ಎಷ್ಟು ವಾಹನಗಳು ಬೇಕಾಗುತ್ತವೆ, ಎಷ್ಟು ಆಧುನಿಕವಾದಂಥ ಶಸ್ತ್ರಾಸ್ತ್ರಗಳು ಬೇಕಾಗುತ್ತವೆ, ಅವುಗಳನ್ನೇನಾದರೂ ಕೊಟ್ಟಿರೋ ಹೇಗೆ? 24 hours beat ಮಾಡುವ ಕೆಲಸ

ಆಗುತ್ತದೋ, ಇಲ್ಲವೋ? ಇವೆಲ್ಲ ಯಾರು ನೋಡುವಂಥದ್ದು? ಹಿರಿಯ ಪೊಲೀಸ್ ಅಧಿಕಾರಿಗಳು ನೋಡಬೇಕು. ಅಲ್ಲಿನ DCP, ACP ನೋಡುವಂಥದ್ದು, ಇವೆಲ್ಲ ನೋಡಬೇಕಾಗಿತ್ತು. ವ್ಯವಸ್ಥೆ ಎಲ್ಲ ಎಲ್ಲಿ ಹೋಯಿತು? ಇಷ್ಟೆಲ್ಲಾ ವ್ಯವಸ್ಥೆ ಇದ್ದಾಗ್ಯೂ ಸಹ ಇದನ್ನು ನಿಯಂತ್ರಣ ಮಾಡಲಿಕ್ಕೆ ಏಕಾಗಲಿಲ್ಲ? ಎಲ್ಲೋ ಮನೆಯಲ್ಲಿ ಅತ್ಯಾಚಾರವಾದರೆ, ಇವತ್ತು ಎಷ್ಟೋ ಕಡೆ ಆಗಿರುವುದನ್ನು ಪತ್ರಿಕೆಗಳಲ್ಲಿ ಓದುತ್ತೇವೆ. ತಂದೆಯೇ ಮಗಳ ಮೇಲೆ ಅತ್ಯಾಚಾರ ಮಾಡಿದ, ಮನೆಯಲ್ಲಿ ಅತ್ಯಾಚಾರ ನಡೆಯಿತು ಎಂದು ಓದುತ್ತೇವೆ. ಸಂಬಂಧಿಕರಲ್ಲಿ ನಡೆಯಿತು ಎನ್ನುವುದನ್ನು ಓದುತ್ತೇವೆ. ಆಗ ನೀವು ಅಸಹಾಯಕರಾಗಬಹುದು. ಪೊಲೀಸರು, ಮನೆಯಲ್ಲಿ ನಡೆಯಿತು, ನಾವೇನು ಮಾಡುವುದು ಎನ್ನಬಹುದು. ಬಿಡಿ ಅದನ್ನು. ಆದರೆ, ಇವತ್ತು ಬೀದಿಯಲ್ಲಿರುವ ಯುವತಿಯನ್ನು ಕಾರ್‌ನಲ್ಲಿ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡುತ್ತಾರೆ. ಬೀದಿಯಲ್ಲಿ ನಿಂತ ಹೆಣ್ಣುಮಕ್ಕಳಿಗೆ tease ಮಾಡುತ್ತಾರೆ, ಅವರನ್ನು ಚುಡಾಯಿಸುವುದನ್ನು ಮಾಡುತ್ತಾರೆ, ಅವರ ಮೇಲೆ ಎಲ್ಲಾ ರೀತಿಯಾದಂಥ ದೌರ್ಜನ್ಯ ಮಾಡುತ್ತಾರೆ. Ragging ಮಾಡುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ನಿಯಂತ್ರಣ ಹೇರಬಹುದಲ್ಲವೇ? 24 hours beat, ಬಹುಶಃ ಅವತ್ತು ಆ apartment ಮುಂದೆ beat ಇದ್ದಿದ್ದರೆ, ಅಲ್ಲೇನಾದರೂ ಪೊಲೀಸ್ ವಾಹನಗಳು ಓಡಾಡುತ್ತಿದ್ದರೆ, ಬಹುಶಃ ಈ ಘಟನೆ ನಡೆಯಲಿಕ್ಕೆ ಸಾಧ್ಯವಿರಲಿಲ್ಲ. ಈ ರೀತಿ private schools ಏನಿವೆ, managements ನವರು ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿದ್ದರೆ ಬಹುಶಃ ಇವೆಲ್ಲ ಘಟನೆ ನಡೆಯಲಿಕ್ಕೆ ಸಾಧ್ಯವಿರಲಿಲ್ಲ. ಹೀಗಾಗಿ, ಈ ರೀತಿಯಾದಂಥ ಘಟನೆಗಳು ನಡೆದಾಗ ಸರ್ಕಾರ ಹೆಚ್ಚು ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ಮೊನ್ನೆಯೂ ಹೇಳಿದೆ. ಇವತ್ತು ಇಲ್ಲಿ ರಾಜ್ಯದಲ್ಲಿ ಈ ರೀತಿಯಾದ ವ್ಯವಸ್ಥೆ ಹೋಗುತ್ತಿದೆ. ಪೊಲೀಸರ ಬಗ್ಗೆ ಜನರಲ್ಲಿ ನಂಬಿಕೆ ಇಲ್ಲ. ಇವತ್ತು ಮಹಿಳೆಯರು ಏನೂ ಹೆದರಿಕೆ ಇಲ್ಲದೆ, ಆತ್ಮ ವಿಶ್ವಾಸದಿಂದ ಒಬ್ಬಂಟಿಯಾಗಿ ಓಡಾಡುವಂಥ ವಾತಾವರಣ ರಾಜ್ಯದಲ್ಲಿ ಇವತ್ತು

ನಿರ್ಮಾಣವಾಗುತ್ತಿಲ್ಲ. ಇವತ್ತು ಬೆಂಗಳೂರಿನಲ್ಲಿ ಒಂದು ರೀತಿಯ ಭಯದ ವಾತಾವರಣ, ಹೆದರಿಕೆ ವಾತಾವರಣ ಇವತ್ತು ನಿರ್ಮಾಣವಾಗಿದೆ.

ಅಧ್ಯಕ್ಷರು:– ಹೇಳಿದಿರಿ.

ಶ್ರೀ ಜಗದೀಶ್ ಶೆಟ್ಟರ್:– ಹೀಗಾಗಿ, ಮೊಟ್ಟಮೊದಲು ನಾನು ಹೇಳುವಂಥದ್ದು, ಪೊಲೀಸರಲ್ಲಿ ಕೆಲಸ ಮಾಡುವಂಥ ಒಂದು zeal ಇರಬೇಕು. ಈ ರೀತಿ ಅಪರಾಧಿ ಮನೋಭಾವ ಇದ್ದಂಥವರಿಗೆ ಸರಿಯಾದ ಶಿಕ್ಷೆ ಕೊಡಬೇಕು. ಆ ಮನೋಭಾವನೆ ಬರಬೇಕಾಗುತ್ತದೆ. ಈ ರೀತಿ complaint ತೆಗೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕು... ನಾನು ಮೊನ್ನೆ dowry case ಬಗ್ಗೆ ಹೇಳಿದೆ. ಅಂಥವು ಬಹಳಷ್ಟು ಬಂದಿರುತ್ತವೆ. ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಾವು ಯಾವುದೋ ಒಂದು ಕೇಸ್ ಅನ್ನು refer ಮಾಡುತ್ತೇವೆ. 3, 6 ತಿಂಗಳಾದರೂ ಕೇಸ್ ದಾಖಲು ಮಾಡುವುದಿಲ್ಲ. ಯಾರು ಆರೋಪಿ ಇರುತ್ತಾನೆ, ಅವನನ್ನು arrest ಮಾಡುವುದಿಲ್ಲ. ಯಾರಾದರೂ influence ಮಾಡುವವರೆಗೆ ಪೊಲೀಸರು FIR ಗಳನ್ನು ದಾಖಲು ಮಾಡುವುದಿಲ್ಲ. ಇದರಿಂದ ಅವರ ಆತ್ಮಸ್ಥೈರ್ಯ ಇನ್ನೂ ಕುಗ್ಗಲಿಕ್ಕೆ ಸಾಧ್ಯವಿದೆ. ಹೀಗಾಗಿ, ಪೊಲೀಸರಲ್ಲಿ ಇವತ್ತು ನೈತಿಕ ಸ್ಥೈರ್ಯವನ್ನು ತುಂಬುವಂಥ ಕೆಲಸ ನಿಮ್ಮಿಂದಾಗಬೇಕು. ಅದು ಆಗುತ್ತಿಲ್ಲವೆನ್ನುವ ವಾತಾವರಣ ನಿರ್ಮಾಣವಾಗಿದೆ. ಬಹುಶಃ ಅದಕ್ಕೇನು ಕಾರಣವೆಂದು ನನಗರ್ಥವಾಗುತ್ತಿಲ್ಲ. ಯಾರದಾದರೂ intervention ಇದೆಯೋ ಏನೋ ನನಗೆ ಗೊತ್ತಾಗುತ್ತಿಲ್ಲ. ನಿಮ್ಮ ಪೋಲಿಸ್ ಅಧಿಕಾರಿಗಳ ದಿನನಿತ್ಯದ ಕೆಲಸಕ್ಕೆ ಏನೋ intervention ಆಗುತ್ತಿದೆ ಎನ್ನುವಂಥದ್ದು, ರಾಜಕೀಯ intervention ಎನ್ನುವಂಥದ್ದು ನನಗೆ ಸಂಶಯ ಬರುತ್ತಿದೆ. ಎಲ್ಲಿಯವರೆಗೆ ಎಂದರೆ, ವರ್ಗಾವಣೆಯಲ್ಲಂತೂ ಬಹಳಷ್ಟು influence ಇರುತ್ತವೆ. ಎಲ್ಲಿಯವರೆಗೆ ಎಂದರೆ, ಬೆಂಗಳೂರಿನ ಮಟ್ಟಿಗೆ ಹೇಳುವುದಾದರೆ, constable ಗಳನ್ನು ಒಂದು station ನಿಂದ ಇನ್ನೊಂದು station ಗೆ ಹಾಕುವುದು ಅದು ಹಿರಿಯ ಅಧಿಕಾರಿಗಳಿಗೆ ಬಿಟ್ಟಂಥ ವಿಚಾರ. ಆದರೆ, constable ಗಳನ್ನು transfer

ಮಾಡುವುದರಲ್ಲಿ ರಾಜಕೀಯ intervention ಶುರುವಾಗಿದೆ. ಈರೀತಿಯ constable ಗಳ transfer ಮಾಡುವುದರಲ್ಲಿ ರಾಜಕೀಯ intervention ಪ್ರಾರಂಭವಾದರೆ, ಬಹುಶಃ ಪೊಲೀಸ್ ವ್ಯವಸ್ಥೆ ಬಹಳ ಅಧೋಗತಿಗೆ ಹೋಗುತ್ತದೆ ಎನ್ನುವಂಥ ಮಾತು ಹೇಳುತ್ತೇನೆ. ಇದರಿಂದ ಬಹಳಷ್ಟು ದೊಡ್ಡ ರೀತಿಯ ಅನಾಹುತಗಳನ್ನು ನಾವು ಎದುರಿಸುವುದು ಆಗುತ್ತದೆ. ಅದಕ್ಕಾಗಿ ದಯವಿಟ್ಟು ನಾನು ಹೇಳುತ್ತೇನೆ, ಈ ಪೊಲೀಸ್ ವ್ಯವಸ್ಥೆಯನ್ನು strengthen ಮಾಡುವಂಥದ್ದು, ಅವರನ್ನು confidence ಗೆ ತೆಗೆದುಕೊಳ್ಳುವ ಕೆಲಸ ನಿಮ್ಮಿಂದಾಗಬೇಕಾಗಿದೆ. ಯಾರು ದೌರ್ಜನ್ಯಕ್ಕೊಳಗಾಗಿದ್ದಾರೆ, ಅವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ, complaint ದಾಖಲು ಮಾಡುವ ಕೆಲಸವಾಗಬೇಕಾಗಿದೆ. ಆದರೆ, ಅದರಲ್ಲಿ ನೀವು failure ಆಗಿದ್ದೀರಿ ಎನ್ನುವ ಮಾತು ಹೇಳುತ್ತೇನೆ. ನಾನು ಮೊನ್ನೆ ಹೇಳಿದ್ದೇನೆ. ಜಾರ್ಜ್‌ರವರೆ, ನೀವು ಇದರಲ್ಲಿ failure ಆಗಿದ್ದೀರಿ, ಈ ವ್ಯವಸ್ಥೆಯನ್ನು ಗಟ್ಟಿಮುಟ್ಟು ಮಾಡಲಿಕ್ಕೆ, ಆಡಳಿತ ಬಿಗಿ ಮಾಡಲಿಕ್ಕೆ, ಪೊಲೀಸ್ ವ್ಯವಸ್ಥೆ ಬಿಗಿ ಮಾಡಲಿಕ್ಕೆ ನೀವು failure ಆಗಿದ್ದೀರಿ. ಅದಕ್ಕಾಗಿ ನಾವು ಮೊನ್ನೆಯೂ ರಾಜೀನಾಮೆ ಕೊಡಬೇಕೆಂದು demand ಮಾಡಿದ್ದೆವು. ಇವತ್ತೂ ನಾನು ಹೇಳುತ್ತೇನೆ. ದಯವಿಟ್ಟು, ನೀವು ರಾಜೀನಾಮೆ ಕೊಡಿ. ಇವತ್ತು ಬೇರೆಯವರಿಗೆ ಅವಕಾಶ ಕೊಡಿ. Strengthen ಮಾಡುವ ಕೆಲಸವಾಗಬೇಕು. ಮಹಿಳೆಯರಿಗೆ ಇವತ್ತು ರಕ್ಷಣೆ ಸಿಗಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಮಹಿಳೆಯರಿಗೆ ವಿಶ್ವಾಸ ತುಂಬುವ ಕೆಲಸ ಮಾಡಬೇಕಾಗಿದೆ. ಅದಾಗುತ್ತಿಲ್ಲ. ನಿಮ್ಮ ರಾಜ್ಯ ಸರ್ಕಾರದ failure ಮತ್ತು ಮಾನ್ಯ ಮುಖ್ಯಮಂತ್ರಿಯವರೂ ಸಹ ಇದಕ್ಕೆ, ಮೊನ್ನೆ ಒಂದು ಸಭೆ ಕರೆದರು, ಒಂದು ಮೀಟಿಂಗ್ ಮಾಡಿ instructions ಕೊಟ್ಟರು. ಆದರೆ, ಅದು implement ಆಗುವುದಿಲ್ಲ. Instructions ಕೊಟ್ಟರು. ದಿನನಿತ್ಯ ಇದು ನಡೆಯಬೇಕಾಗುತ್ತದೆ. ಅದಾಗುತ್ತಿಲ್ಲ. ಹೀಗಾಗಿ, ಮಾನ್ಯ ಮುಖ್ಯಮಂತ್ರಿಯವರು ಸಹ ಇದನ್ನು ನಿಯಂತ್ರಣ ಹೇರುವುದರಲ್ಲಿ, ವಿಶ್ವಾಸ ತುಂಬುವಲ್ಲಿ ಅವರೂ ವಿಫಲರಾಗಿದ್ದಾರೆ, ಗೃಹ ಮಂತ್ರಿಗಳೂ ವಿಫಲರಾಗಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ಅಶೋಕ್:- ಪ್ರಾರಂಭದಲ್ಲಿ ಮೊನ್ನೆ ಹೇಳಿದ್ದೇನೆ. ಈಗಾಗಲೇ ನಮ್ಮ ನಾಯಕರಾದಂಥ ಜಗದೀಶ್ ಶೆಟ್ಟರ್ ಎಲ್ಲವನ್ನೂ ಹೇಳಿದ್ದಾರೆ. ಆದರೆ, ಇವತ್ತು ಇಡೀ ದೇಶದಲ್ಲಿ, ಇಡೀ ರಾಜ್ಯದಲ್ಲಿ ಕರ್ನಾಟಕದ ಬಗ್ಗೆ ವಿಶೇಷವಾದಂಥ ಅಪನಂಬಿಕೆ ಪ್ರಾರಂಭವಾಗಿದೆ. ಮಾಧ್ಯಮಗಳಲ್ಲಿ, channel ಗಳಲ್ಲಿ ಬರುತ್ತಿರತಕ್ಕಂಥದ್ದು, ಜನ ಮಾತನಾಡುತ್ತಿರುವುದು, ಜನ ಬೀದಿಗಿಳಿದು ಹೋರಾಟ ಮಾಡುತ್ತಿರುವಂಥದ್ದು ಆಗುತ್ತಿದೆ. ಇವೆಲ್ಲವನ್ನೂ ನೋಡಿದಾಗ ಜನರಿಗೆ ಎಲ್ಲೋ ಒಂದು ಕಡೆ ಅಪನಂಬಿಕೆ ಬರುವುದಕ್ಕೆ ಶುರುವಾಗಿದೆ.

ಅಧ್ಯಕ್ಷರು:- ಕರ್ನಾಟಕದ ಬಗ್ಗೆ?

ಶ್ರೀ ಆರ್. ಅಶೋಕ್:- ಹೌದು. Insecurity. ಹಾಗೆಂದು ಎಲ್ಲಿಯೂ ನಡೆಯುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಡೀ ಪ್ರಪಂಚದಲ್ಲಿ ಎಲ್ಲಾ ಕಡೆ ನಡೆಯುವಂಥದ್ದು. ಆದರೆ, ಈ ಎಲ್ಲಾ ಘಟನೆಗಳನ್ನೂ ನೋಡಿದಾಗ ಕರ್ನಾಟಕದ ಬಗ್ಗೆ ಬೊಟ್ಟು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ.

ಅಧ್ಯಕ್ಷರು:- ಅವರೇನೋ ಹೇಳುತ್ತಿದ್ದಾರೆ. ಕರ್ನಾಟಕದ ಬಗ್ಗೆ ಹೇಳುತ್ತಿದ್ದಾರೆ, ಕೇಳುವುದಕ್ಕೆ ಬಿಡಿ.

ಶ್ರೀ ಆರ್. ಅಶೋಕ್:- ಈ ರೀತಿ ಘಟನೆ ಆದಂಥ ಸಂದರ್ಭದಲ್ಲಿ ಪ್ರಾರಂಭದಲ್ಲಿ ನನಗನ್ನಿಸಿರುವಂಥದ್ದು, ಪುಲಕೇಶಿ ನಗರದಲ್ಲೇನು ಘಟನೆಯಾಯಿತು, ಅದು ಮೂಲ, ಅಲ್ಲಿ ಪ್ರಾರಂಭವಾದುದು. ನಮ್ಮ ಅಧಿಕಾರಿಗಳು ಆ ಕ್ಷಣದಲ್ಲಿ, ಹಿರಿಯ ಅಧಿಕಾರಿಗಳು ಇರುತ್ತಾರೆ, ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳು ಯಾರು ಇರುತ್ತಾರೆ, ಆ ಕ್ಷಣದಲ್ಲಿ ಸಾಮಾನ್ಯವಾಗಿ ಅತ್ಯಾಚಾರದ ಘಟನೆಗಳಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಸನ್ಮಾನ್ಯ ಮುಖ್ಯಮಂತ್ರಿಯವರೆ, ಅದನ್ನು ತೆಗೆದುಕೊಂಡಿದ್ದರೆ, ಗೃಹ ಸಚಿವರೂ ಹೇಳಬೇಕಾಗಿರಲಿಲ್ಲ, ಮಾನ್ಯ ಮುಖ್ಯಮಂತ್ರಿಯವರೂ ಮೀಟಿಂಗ್ ಕರೆಯುವ ಅವಶ್ಯಕತೆ ಇರಲಿಲ್ಲ. Main ಪ್ರಾರಂಭವಾದಂಥ ಸ್ಥಳದಲ್ಲಿ ಸರಿಯಾದ ಕ್ರಮ

ತೆಗೆದುಕೊಂಡಿದ್ದರೆ ಆಗುತ್ತಿತ್ತು. ತಾವೂ, ಅವರು ನನ್ನ ಸ್ನೇಹಿತರು ಎಂದು ಹೇಳಿದಿರಿ. ಅಂದರೆ ಎಲ್ಲಿಯವರೆಗೂ ದಾಟಬೇಕಾಯಿತು ಎಂದರೆ, ನಿಮ್ಮವರೆಗೂ ಬರಬೇಕಾಯಿತು, ಮಾನ್ಯ ಮುಖ್ಯಮಂತ್ರಿಯವರು ಬರಬೇಕಾಯಿತು, ಗೃಹ ಸಚಿವರವರೆಗೂ ಹೋಗಬೇಕಾಯಿತು. ಪ್ರಾರಂಭದಲ್ಲಿ ಎಡವಿದ್ದರಿಂದ, ಆ complaint lodge ಮಾಡುವುದರಲ್ಲಿ ಯಾರಿಗೋ favour ಮಾಡಬೇಕೆನ್ನುವ ದೃಷ್ಟಿ ಇಟ್ಟುಕೊಂಡು ಮಾಡಿದ್ದರಿಂದ ಇದೆಲ್ಲ ಗೊಂದಲ ಶುರುವಾಯಿತು. ಆ ಘಟನೆಯಾದಾಗ ಇಡೀ ಬೆಂಗಳೂರು ಬೆಚ್ಚಿ ಬೀಳುವಂತೆ ಆಯಿತು. ಈ ತರಹದ ಘಟನೆ ಎಂದರೆ, ಕಾರ್‌ನಲ್ಲಿ ತೆಗೆದುಕೊಂಡು ಹೋಗಿ ಅವಳನ್ನು rape ಮಾಡುವಂಥ ಘಟನೆ ಬೆಂಗಳೂರನ್ನು ತಲ್ಲಣ ಮಾಡಿರತಕ್ಕಂಥದ್ದನ್ನು ನಾವೆಲ್ಲ ನೋಡಿದ್ದೇವೆ. ಇದನ್ನು ಪ್ರಾರಂಭದಲ್ಲೇ ತಡೆಗಟ್ಟಿದ್ದರೆ ಈ ಸಮಸ್ಯೆಯೇ ಉದ್ಭವವಾಗುತ್ತಿರಲಿಲ್ಲ. ಜನರಿಗೆ ಒಂದು ರೀತಿ ನೆಮ್ಮದಿ ಸಿಕ್ಕುವುದು. Police ನವರು immediate action ಮಾಡಿದರು, immediate ಆಗಿ ಕ್ರಮ ತೆಗೆದುಕೊಂಡರು, ಪೊಲೀಸರ ಬಗ್ಗೆ ನಾವೆಲ್ಲೂ ಅವರನ್ನು ಬೊಟ್ಟು ಮಾಡಿ ತೋರಿಸುವ ಅವಶ್ಯಕತೆ ಇಲ್ಲವೆಂದು, police ನವರು correct ಎಂದು ಆಗಿದ್ದರೆ, ಇದು ಸರ್ಕಾರದವರೆಗೂ ಬರುತ್ತಿರಲಿಲ್ಲ. ಅಲ್ಲಿ ವೈಫಲ್ಯ ಕಂಡಿರುವುದು. ಇಷ್ಟೊಂದು ದೊಡ್ಡದಾಗಿ ಇಡೀ ದೇಶದ ಮುಂದೆ ಕರ್ನಾಟಕದ ಮಾನ ಹೋಗಬೇಕಾದರೆ ಈ ಘಟನೆ ಒಂದು ಮುಖ್ಯ ಕಾರಣವಾಗಿದೆ. ಅದನ್ನು ಸರ್ಕಾರ ಸರಿ ಮಾಡಬೇಕಾಗಿತ್ತು. ಕೂಡಲೇ intervene ಆಗಬೇಕಾಗಿತ್ತು. ಸರ್ಕಾರ 4 ದಿನಗಳಾದ ಮೇಲೆ enter ಆಯಿತು. ಆಮೇಲೆ, ಮಾನ್ಯ ಮುಖ್ಯಮಂತ್ರಿಯವರು ಅವರ ಸಭೆಯನ್ನು ಕೃಷ್ಣಾದಲ್ಲಿ ಕರೆದು, ಒಂದು ಸಾರಿ ಗುಡುಗಿ ಒಂದು ಮಾತು ಹೇಳಿದರು. ಅವರು ಹೇಳಿದ ಮಾತು ನಾನು ಹೇಳುತ್ತೇನೆ. ಏನೆಂದರೆ, 'ರೀ ಆ ಹೊಯ್ಸಳ ಅವೆಲ್ಲಾ ಎಲ್ಲಿದೆ ನಾನು ನೋಡಿಲ್ಲವಲ್ಲ' ಎಂದು ಹೇಳಿದ್ದಾರೆ. ನಮ್ಮ ಬೆಂಗಳೂರಿನಲ್ಲಿ ಇನ್ನೂರಕ್ಕಿಂತ ಹೆಚ್ಚಿಗೆ ಹೊಯ್ಸಳ ಇರಬಹುದು. ಒಂದೊಂದು station ಗೊಂದು ಹೊಯ್ಸಳ ಇದೆ. ಎಲ್ಲಿ ಹೋಗಿದೆ ಎಂದು ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ನಿಮ್ಮ ಹೊಯ್ಸಳ ಎಲ್ಲಿ ಹೋಗಿದೆ, ನೀವು ಏನು

ಮಾಡುತ್ತಿದ್ದೀರಿ, ಎಂದು ಕೇಳಿಸಿಕೊಳ್ಳುವ ಅವಶ್ಯಕತೆ ಬರುತ್ತಿರಲಿಲ್ಲ. ನಾವೆಲ್ಲರೂ ತಲೆತಗ್ಗಿಸುವಂಥ ಘಟನೆ ಇದು. ಕರ್ನಾಟಕ ಎಂದಾಕ್ಷಣ ಸರ್ಕಾರ ಒಂದೇ ಬರುವುದಿಲ್ಲ, ನಾವೆಲ್ಲರೂ ತಲೆತಗ್ಗಿಸುವಂಥ ಘಟನೆಯಾಗಿದೆ. ಪ್ರಾರಂಭದಲ್ಲಿ ಕ್ರಮ ಕೈಗೊಳ್ಳಬೇಕಾಗಿತ್ತು. ಇದಾದ ಮೇಲೆಯೂ ಸರ್ಕಾರ, ಗೃಹ ಸಚಿವರು, ಅಧಿಕಾರಿಗಳು ಎಚ್ಚೆತ್ತುಕೊಂಡು ಕ್ರಮ ಕೈಗೊಂಡಿದ್ದರೆ ಸರಿ ಇರುತ್ತಿತ್ತು. ನಿನ್ನೆ ಕೂಡ ರಾಜ್ಯದಲ್ಲಿ ಹತ್ತು ಮಾನಭಂಗ ಪ್ರಕರಣಗಳು ಬೆಳಕಿಗೆ ಬಂದಿವೆ. ನಂಜನಗೂಡು ತಾಲ್ಲೂಕು, ಮೈಸೂರು ತಾಲ್ಲೂಕಿನಲ್ಲಿ, ಮೈಸೂರಿನ ಏಕಲವ್ಯ ನಗರ, ಹಾವೇರಿ ತಾಲ್ಲೂಕು, ಕೋಲಾರ ಜಿಲ್ಲೆ, ಯಾದಗಿರಿ ಜಿಲ್ಲೆ, ಕೂಡ್ಲಿಗಿ, ಅರಕಲಗೂಡು, ಅಂಕೋಲ, ಹೀಗೆ ಬಹಳಷ್ಟು ಕಡೆ ಮತ್ತೆ ಇದು repeat ಆಗುತ್ತಿವೆ. ನಾನು ಪ್ರಾರಂಭದಲ್ಲಿ ಅವರ ಮೇಲೆ ಗೂಂಡಾ ಆಕ್ಟ್ ಹಾಕಿ ಕ್ರಮ ತೆಗೆದುಕೊಳ್ಳಿ ಎನ್ನುವ ಮಾತು ಹೇಳಿದೆ. ಇದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಗೂಂಡಾ ಆಕ್ಟ್ ಹಾಕುತ್ತೇನೆಂದು ಹೇಳಿದ್ದಾರೆ. ನನಗೂ ಸಮಸ್ಯೆ ಗೊತ್ತಿದೆ, ಗೂಂಡಾ ಆಕ್ಟ್ ಹಾಕಬೇಕಾದರೆ ಅವನ ಮೇಲೆ ಹಳೆಯ ಐದು ಕೇಸ್ ಇರಬೇಕು. ಹಳೆಯ ಐದು ಕೇಸ್ ಇದ್ದರೆ ಮಾತ್ರ ಗೂಂಡಾ ಆಕ್ಟ್ ಹಾಕುವುದಕ್ಕೆ ಸಾಧ್ಯವಿರುತ್ತದೆ. ನಮ್ಮ ಪೊಲೀಸ್‌ನವರು ಬಹಳ ಹುಷಾರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಡೈರೆಕ್ಷನ್ ಹೋಗಿ ಬಿಟ್ಟರೆ ಅವನ ಮೇಲೆ ಗೂಂಡಾ ಆಕ್ಟ್ ಹೇಗೆ ಹಾಕಬೇಕೆಂದು ಅವರಿಗೆ ಗೊತ್ತಿದೆ ಅವರು ಹಾಕುತ್ತಾರೆ. ಮಾಧ್ಯಮದಲ್ಲಿಯೂ ಈ ವಿಚಾರ ಬಂದಿದೆ. ಅವನೇನು ಮೊದಲಬಾರಿಗೆ ತಪ್ಪು ಮಾಡಿಲ್ಲ. ಕಾರಿನಲ್ಲಿ ಆ ಹುಡುಗಿಯನ್ನು ಎತ್ತಿಕೊಂಡು ಹೋಗಿ ರೇಪ್ ಮಾಡುವ ಪ್ರಯತ್ನ ಮಾಡಿ, ರೇಪ್ ಮಾಡಿದವನದ್ದು ಇದೊಂದು ಘಟನೆಯಲ್ಲ. ಅವನು regular ಆಗಿ ಆ Empire Hotel ಅಲ್ಲಿ ಬಂದು regular ಆಗಿ ಇರುವಂಥ ಅದು ಅವನ ಅಡ್ಡೆ. ಆ ಹೋಟೆಲ್ ಸಾಮಾನ್ಯವಾಗಿ 11-00, 12-00 ಗಂಟೆಯವರೆಗೆ ತೆರದಿರುತ್ತದೆ. ಅಲ್ಲಿಗೆ ಹುಡುಗ-ಹುಡುಗಿ ಯಾರು ಒಂಟಿಯಾಗಿ ಬರುತ್ತಾರೆ, ಇಂಥವರಿಗಾಗಿಯೇ ಅವನು ಕಾಯುತ್ತಿರುತ್ತಾನೆ. ಇದನ್ನೇ ಅವನು regular ಆಗಿ ಮಾಡುತ್ತಿದ್ದಾನೆಂದು ಹೇಳುತ್ತಿರುವುದು. ಅವನದು ಇದು regular ಅಭ್ಯಾಸ.

ಅವನ ಮೇಲೆ ಹತ್ತು ಕೇಸ್ ಹಾಕಬಹುದು, ಪೊಲೀಸ್‌ರು ಹುಡುಕಿದರೆ ಅವನ ಮೇಲೆ ಹತ್ತು ಕೇಸ್ ಹುಡುಕುಬಹುದು. ಅವನ ಮೇಲೆ first day ಗೂಂಡಾ ಆಕ್ಟ್ ಕೇಸ್ ಹಾಕಿದ್ದರೆ, ಈಗ ನೋಡಿ ಅವನು ಇಡೀ ಜನಗಳಿಗಲ್ಲದೆ ಪೊಲೀಸ್‌ರಿಗೂ ಚಳ್ಳೆಹಣ್ಣು ತಿನ್ನಿಸುತ್ತಿದ್ದಾನೆ. ಮೊದಲನೇ ದಿನ ಅವನನ್ನು ಅರೆಸ್ಟ್ ಮಾಡಿದರು. ಸಾಮಾನ್ಯವಾಗಿ ನಮ್ಮ ಪೋಲಿಸರು 24 ಗಂಟೆಯೊಳಗೆ ಅವನ ಬಾಯಲ್ಲಿ ಏನೇನು ಇದೆ, ಒಳಗಡೆ ಏನೇನು ಇದೆ, ಎಲ್ಲಾ ಬಿಡಿಸಿ ಬಿಡುತ್ತಾರೆ. ತಲೆಯೊಳಗಡೆ ಇರುವುದು ಬಿಡಿಸಿ ಬಿಡುತ್ತಾರೆ ಅವರು ಬಿಡುವುದಿಲ್ಲ. ಅದು ಏಕೆ ನಾಲ್ಕು ದಿನವಾದರೂ ಅವನ ಬಾಯಿ ಬಿಡಿಸಲಿಲ್ಲ? ಅವನು ಏನೇನು ಹೇಳಿದ್ದಾನೆ. ಬೇರೆ ಬೇರೆಯವರನ್ನೆಲ್ಲಾ ಅಪರಾಧಿ ಮಾಡಿ ಬಿಟ್ಟಿದ್ದಾನೆ, ಇವನಿಗೆ ಹಿಂದೆ ಯಾರ್‍ಯಾರು ವಿರುದ್ದ ಇದ್ದರು, ಯಾರ್‍ಯಾರು ಗಲಾಟೆ ಮಾಡಿದ್ದರು, ಅವರೆಲ್ಲರ ಹೆಸರುಗಳನ್ನು ಹೇಳಿ ಬಿಟ್ಟಿದ್ದಾನೆ. Original ಅಪರಾಧಿಗಳ ಹೆಸರುಗಳನ್ನು ಹೇಳಲೇ ಇಲ್ಲ. ಅಂದರೆ, ಪೊಲೀಸ್‌ನವರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಾನೆಂದರೆ, ಇದಕ್ಕೆ ಸರ್ಕಾರದಿಂದ ಸರಿಯಾದಂಥ ಡೈರೆಕ್ಷನ್ ಹೋಗಬೇಕಾಗಿತ್ತು. ಸರಿಯಾಗಿ ಅವನ ಮೇಲೆ ಕ್ರಮ ತೆಗೆದುಕೊಂಡು ಸರಿಯಾದಂಥ ತನಿಖೆಗೆ ಅವನನ್ನು ಒಳಪಡಿಸಿದ್ದರೆ ಅವನು ಸರಿಯಾದಂಥ ಮಾಹಿತಿಗಳನ್ನು ಕೊಡುತ್ತಿದ್ದ. ಇಲ್ಲೂ ವೈಫಲ್ಯವಾಗಿರುವುದು. ಆ ದೃಷ್ಟಿಯಿಂದ ಮುಖ್ಯಮಂತ್ರಿಗಳು ಗೂಂಡಾ ಆಕ್ಟ್ ಹಾಕುತ್ತೇವೆಂದು ಹೇಳಿದ್ದಾರೆ, ಹೀಗಾಗಿ ಅದನ್ನು ಹಾಕಬಹುದು. ಇದರ ಬಗ್ಗೆ ಪ್ರಶ್ನೆಯೇ ಇಲ್ಲ. ಅದಕ್ಕೆ ಗೃಹ ಸಚಿವರ ನೇತೃತ್ವದಲ್ಲಿ ಒಂದು ಕಮಿಟಿ ಇದೆ, ಇದಾದ ಮೇಲೆ High Court ಗೆ ಹೋಗುತ್ತದೆ. ಅಲ್ಲಿ ಮೂರು ಜನ ಗೌರವಾನ್ವಿತ ಜಡ್ಜ್‌ಗಳಿರುತ್ತಾರೆ. ನಾನು ಗೂಂಡಾ ಆಕ್ಟ್ ಹಾಕಿದಾಗ ಮಾಧ್ಯಮದಲ್ಲಿಯೂ ಎರಡು ಭಾಗವಾಯಿತು. ಹೇಗೆ ಗೂಂಡಾ ಆಕ್ಟ್ ಹಾಕುತ್ತಾರೆ? ಅಡ್ವೋಕೇಟ್ ಜನರಲ್‌ರವರು ಕೆಲವರೆಲ್ಲಾ reply ಕೊಟ್ಟರು. ಗೃಹ ಸಚಿವರಾದ ಅಶೋಕರವರು ಇದನ್ನು ಏಕೆ ಹಾಕಿದರು? ಅವರಿಗೆ ಬುದ್ದಿ ಇಲ್ಲವೆಂದರು. ಆಮೇಲೆ ಅದು High Court ಗೆ ಹೋದಾಗ, ಅದನ್ನು ಎತ್ತಿ ಹಿಡಿದಿದ್ದಾರೆ. ಅತ್ಯಾಚಾರ ಪ್ರಕರಣದಲ್ಲಿ ಗೂಂಡಾ ಆಕ್ಟ್ ಹಾಕಿರುವುದುನ್ನು High Court ನ

ಮೂರು ಬೆಂಚಿನ ನಮ್ಮ ಜಡ್ಜ್‌ಗಳು ಕೂಡ ಎತ್ತಿ ಹಿಡಿದಿದ್ದಾರೆ. ಆದ್ದರಿಂದ, ಯಾರು ಭಯ ಬೀಳುವ ಅವಶ್ಯಕತೆಯಿಲ್ಲ. ನಾವು ವಿರೋಧ ಪಕ್ಷವಾಗಿ ಇದನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ನಾವು ಕೂಡ ಆ ಸ್ಥಾನದಲ್ಲಿ ಇದ್ದು ಬಂದಂಥವರು. ಆದರೆ, ಇದನ್ನು ಸರಿಯಾಗಿ ನಿಭಾಯಿಸಿ ಸರಿಯಾದಂಥ ಕ್ರಮ ಕೈಗೊಳ್ಳುವುದಕ್ಕೆ ತಾವು ಹೇಳಿದಿರಿ. ಮಂತ್ರಿಯೊಬ್ಬರು ಬೀದಿಯಲ್ಲಿ ಅದು ಹೇಗೆ ಹೇಳಿದರೊ ಗೊತ್ತಿಲ್ಲ, ಗುಂಡಿಕ್ಕಿ ಕೊಂದು ಬಿಡಿ ಎಂದು ಹೇಳಿ ಬಿಟ್ಟಿದ್ದಾರೆ. ಮಂತ್ರಿಗಳು ಆ ತರಹ ಹೇಳಬಾರದು. ಅದನ್ನು ಏನಾದರೂ ಮಾಡುವುದಿದ್ದರೆ ಅದು ಬೇರೆ ತರಹ, ಹೇಗೆ ಮಾಡಬೇಕು, ಏನು ಮಾಡಬೇಕೆನ್ನುವುದಕ್ಕೆ ಕಾನೂನು ಇದೆ, ಕಟ್ಲೆ ಇದೆ. ಒಬ್ಬ ಮಂತ್ರಿಯೇ ಆ ರೀತಿ ಹೇಳಿಬಿಟ್ಟರೆ ಅದು ಸರಿಯಲ್ಲ. ಅದು ಹೇಳುವಂಥದ್ದು ಸರಿಯಲ್ಲ.

ಶ್ರೀ ಕೆ.ಜಿ. ಬೋಪಯ್ಯ:- ನಿನ್ನೆ ಅವರ statement ನೋಡಿದರೆ, ರೇಪ್ ಮಾಡುವವರೆಲ್ಲರೂ ಕೂಡ ಮಂತ್ರಿಗಳಿಗೆ ಹೇಳಿ ರೇಪ್ ಮಾಡುತ್ತಾರೆಂದು ಕಾಣುತ್ತದೆ. ನಿನ್ನೆ ಮೈಸೂರಿನಲ್ಲಿ ಒಬ್ಬ ವಯಸ್ಸಾಗಿರುವ ಹಿರಿಯ ಮಂತ್ರಿಗಳು ಹೇಳಿರುವ statement ನೋಡಿದೆ. "ಅತ್ಯಾಚಾರಿಗಳನ್ನು ಕಂಡಲ್ಲಿ ಗುಂಡಿಕ್ಕಿ" ಎಂದು ಹೇಳಿದ್ದು ಏಕೆ? ಅಂದರೆ Open ಆಗಿ ರೇಪ್ ಮಾಡುತ್ತಾರಂತ, ಅಂದರೆ ಆ ಹಂತಕ್ಕೆ ತಲುಪಿಸುತ್ತೀರಾ? ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿಯ ಹೇಳಿಕೆ ಕೊಟ್ಟರೆ what is the message you are giving? ಎನ್ನುವುದನ್ನು ಯೋಚನೆ ಮಾಡಿ.

ಶ್ರೀ ಆರ್. ಅಶೋಕ:- ಮಾನ್ಯ ಅಧ್ಯಕ್ಷರೆ, ಇದಲ್ಲದೆ ಒಂದು ಘಟನೆಯ ಬಗ್ಗೆ ನಮ್ಮ ಬ್ಯೆಂದೂರು ಶಾಸಕರು ಒಂದು statement ಕೊಟ್ಟಿದ್ದಾರೆ. ಏನೆಂದರೆ, ನನ್ನ ಕ್ಷೇತ್ರದಲ್ಲಿ ಇದು ಮೊದಲ ಬಾರಿಗೆ ಅಪ್ರಾಪ್ತ ವಯಸ್ಸಿನ ಬಾಲಕಿಯ ನಿಗೂಢ ಸಾವು ಸಂಭವಿಸಿದೆ. ನಿಜಕ್ಕೂ ಆಘಾತ ಉಂಟು ಮಾಡಿದೆ, ಕೂಡಲೇ ನಾನು ಗೃಹ ಸಚಿವರಿಗೆ ಈ ಬಗ್ಗೆ ತನಿಖೆ ಮಾಡಿ, ಕ್ರಮ ಕೈಗೊಳ್ಳಬೇಕೆಂದು ನಾನು ಆಗ್ರಹ ಮಾಡುತ್ತೇನೆಂದು ಗೋಪಾಲ

ಪೂಜಾರಿಯವರು ಹೇಳಿದ್ದಾರೆ. ಮಾರತ್‌ಹಳ್ಳಿ ಒಂದು ಶಾಲೆಯ ಆವರಣದಲ್ಲಾದ ಘಟನೆಯೂ ಕೂಡ ಇದರ ಜೋಡಣೆಯಾಗಿ ಇಂದು ದೊಡ್ಡ ಪ್ರತಿಭಟನೆಯಾಗಿ ಹೊರ ಹೊಮ್ಮುತ್ತಿದೆ. ಶಾಲೆಯ ಸಿಬ್ಬಂದಿ ವರ್ಗ, ಆಡಳಿತ ವರ್ಗ ಏನೀದೆ, ಅವರೆಲ್ಲ ಇದನ್ನು ಮುಚ್ಚಿಡುವಂಥ ಪ್ರಯತ್ನ ಮಾಡಿದ್ದಾರೆ. ಪ್ರಾರಂಭದಲ್ಲಿಯೇ ಯಾರು ಅಪರಾಧಿ ಎಂದು ಅವರಿಗೆ ಗೊತ್ತಿತ್ತು. ಗೊತ್ತಿದ್ದರೂ ಸಹ ಅದನ್ನು ಮುಚ್ಚಿಡುವಂಥ ಪ್ರಯತ್ನ ಮಾಡಿದ್ದಕೋಸ್ಕರವಾಗಿ ಇಂದು ಇಷ್ಟೆಲ್ಲಾ problem ಆಗಿದ್ದು. ಪೊಲೀಸ್‌ನವರಿಗೂ ಮತ್ತು ಎಲ್ಲರಿಗೂ problem. ಜನರಿಗೂ ಕೂಡ ಒಂದು ಅಪನಂಬಿಕೆ, ಇಡೀ ಜನ ಬೈಕ್ ರ್‍ಯಾಲಿ ಮಾಡುವ ಮೂಲಕ ಹೋರಾಟ ಮಾಡುವ ಮೂಲಕ ಬೀದಿಗಿಳಿದಿದ್ದಾರೆ. ಶಾಲೆಗಳಲ್ಲಿ ಕೂಡ ಇಂದು safety ಇಲ್ಲ, ರಸ್ತೆಗಳು safe ಇಲ್ಲ, ನಮ್ಮ ಮನೆಯ ಮುಂದೆ ನಮ್ಮ ಕಾರಿನಲ್ಲಿ ನಾವು ಕುಳಿತುಕೊಂಡರೂ kidnap ಮಾಡಿಕೊಂಡು ಹೋಗುತ್ತಾರೆ ಎನ್ನುವುದಾದರೆ, ಪೊಲೀಸ್ ಇಲಾಖೆಯವರು ಕ್ರಮ ಕೈಗೊಳ್ಳುವುದರಲ್ಲಿ ಎಲ್ಲೋ ವೈಫಲ್ಯವಾಗಿದೆ ಎಂದು ಅನ್ನಿಸುತ್ತದೆ. ಆ ದೃಷ್ಟಿಯಿಂದ ನೋಡಿದಾಗ ನಮ್ಮ ರಾಜ್ಯದ ಗೌರವಕ್ಕೆ ಕುಂದು ಬಂದಿದೆ, ಇದಕೋಸ್ಕರ ಸರ್ಕಾರ ಕಠಿಣ ನಿಲುವುಗಳನ್ನು ತೆಗೆದುಕೊಳ್ಳಿ. ನೀವು ಅವರ ಮೇಲೆ ಕಠಿಣ ನಿಲುವು ತೆಗೆದುಕೊಳ್ಳಿ ಅವರ ಮೇಲೆ ಉಗ್ರವಾದ ಕ್ರಮಗಳನ್ನು ಮಾಡಿ, ಇದಕ್ಕೆ ನಮ್ಮೆಲ್ಲರ ಸಹಕಾರ ಇರುತ್ತದೆ, ಇದು ರಾಜ್ಯದ ಮಾನ ಮರ್ಯಾದೆಯ ಪ್ರಶ್ನೆ. ಆ ದೃಷ್ಟಿಯಿಂದ ಇದರಲ್ಲಿ ಸರ್ಕಾರ ವೈಫಲ್ಯವಾಗಿದೆ ಎನ್ನುವ ಮಾತನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಿಮ್ಮ MLA ಯವರು ನೀವು ರಾಜೀನಾಮೆ ಕೇಳಲಿಲ್ಲ ಎನ್ನುತ್ತಾರೆ.

ಶ್ರೀ ಆರ್. ಅಶೋಕ:– ನಮ್ಮ ಪಕ್ಷದ ನಾಯಕರು ಕೇಳಿದರಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ಮತ್ತು ಮಹಿಳೆಯರ ಮೇಲೆ

ನಡೆಯತಿರತಕ್ಕಂಥ ಅತ್ಯಾಚಾರಗಳ ವಿಷಯದಲ್ಲಿ, ಮೊದಲನೇ ಬಾರಿಗೆ ರಾಜ್ಯದಲ್ಲಿ ಸ್ವಲ್ಪ ಪ್ರತಿಭಟನೆ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೆಲವು ಮಾಧ್ಯಮದಲ್ಲಿಯೂ ಬರೆದಿದ್ದಾರೆ. ಈ ಪ್ರಕರಣದಲ್ಲಿ ಜಾತ್ಯಾತೀತ ಜನತಾದಳದ ಶಾಸಕರು ಮತ್ತು ಪಕ್ಷ ಎಲ್ಲೋ ಒಂದು ಕಡೆ ಸರ್ಕಾರದ ಬಗ್ಗೆ ಮೃದು ಧೋರಣೆ ತಾಳುತ್ತಿದ್ದಾರೆ, ಸರ್ಕಾರದ ಜೊತೆ ಈ ವಿಷಯದಲ್ಲಿ ರಕ್ಷಣೆ ಮಾಡುವುದಕೋಸ್ಕರ ಜೆಡಿಎಸ್ ಪಕ್ಷ ಎಲ್ಲೋ ಒಂದು ಕಡೆ ತೀರ್ಮಾನ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ರೀತಿಯಲ್ಲಿ ಬಂದ ಆರ್ಟಿಕಲ್‌ಗಳನ್ನು ಒಂದೆರಡು ಪತ್ರಿಕೆಗಳಲ್ಲಿ ಗಮನಿಸಿದ್ದೇನೆ. ಮೊದಲನೆಯದಾಗಿ, ತಮ್ಮ ಮೂಲಕ ರಾಜ್ಯದ ಜನತೆಗೆ ಬಹಳ ಸ್ಪಷ್ಟವಾದಂಥ ಸಂದೇಶ ಕೊಡಲಿಕ್ಕೆ ಬಯಸುತ್ತಿದ್ದೇನೆ. ಇಂಥ ಪ್ರಕರಣಗಳನ್ನು ತೆಗೆದುಕೊಂಡು ರಾಜಕೀಯವಾಗಿ ನಾವು ಏನಾದರೂ ಫಲ ಪಡೆಯತಕ್ಕಂಥ ಸಣ್ಣತನಕ್ಕೆ ಹೋಗದೆ ಇರತಕ್ಕಂಥದ್ದು ಎಲ್ಲಾ ಪಕ್ಷಗಳಿಗೆ ಶೋಭೆ ತರತಕ್ಕಂಥದ್ದು ಎಂದು ನಾನು ಹೇಳಬಯಸುತ್ತೇನೆ. ಇಂಥ ಒಂದು ಪ್ರಕರಣಗಳನ್ನು ನಾವು ದುರ್ಬಳಕೆ ಮಾಡಿಕೊಂಡು ಏನೋ ಒಂದು ರೀತಿ ಸಾರ್ವಜನಿಕವಾಗಿ ಅನುಕಂಪ ತೋರಿಸಿ, ನಾವೇನು ಪ್ರತಿಫಲ ಗಿಟ್ಟಿಸತಕ್ಕಂಥ ಇಂಥ ಘಟನೆಗಳ ದುರ್ಬಳಕೆ ಆಗಬಾರದು ಎನ್ನುವುದು ನನ್ನ ಅಬಿಪ್ರಾಯ. ನಾವೆಲ್ಲರೂ ತಲೆತಗ್ಗಿಸತಕ್ಕಂಥ ಘಟನೆಗಳಾಗಿವೆ. ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕಾಗುತ್ತದೆ. ಸರ್ಕಾರ ಕೆಲವು ವಿಷಯಗಳಲ್ಲಿ ಯಾವ ರೀತಿಯಾಗಿ ನಡೆದುಕೊಂಡಿದೆ ಎಂದು ಹೇಳಬೇಕಾಗಿದೆ. ನಾನು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡುವಾಗ, ಹಲವಾರು ವಿಷಯಗಳು ನನ್ನ ಗಮನಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಗೃಹ ಸಚಿವರಿಗೆ, ಪತ್ರಗಳ ಮುಖೇನ, ಮಾಧ್ಯಮದ ಮಿತ್ರರ ಮುಖೇನ, ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ. ಈ ರಾಜ್ಯದಲ್ಲಿ ಪುನಃ ಒಂದಂಕಿ ಲಾಟರಿಗಳು, ಮಟ್ಕಾ ದಂಧೆ ನಡೆಯುತ್ತಿರುವುದು ಇವೆಲ್ಲಾ ಪ್ರಾರಂಭವಾಗಿವೆ. ಸರ್ಕಾರ ಇದರ ಬಗ್ಗೆ ಗಮನ ಕೊಡಲಿ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಗೃಹ ಸಚಿವರ ಗಮನಕ್ಕೂ ತಂದೆ. ಆದರೆ, ಅದಕ್ಕೆ ಕುಮಾರಸ್ವಾಮಿಯವರು ಹೇಳಿಕೆ

ಕೊಡುತ್ತಿರುವುದು ಒಂದು ರೀತಿಯ ಬಾಲಿಶ, ಹುಡುಗಾಟದ ಹೇಳಿಕೆ, ಆ ರೀತಿಯ ಯಾವುದೇ ಪ್ರಕರಣಗಳು ಇಲ್ಲ ಎನ್ನುವ ಮಾತನ್ನು ತಾವು ಹೇಳಿದಿರಿ. ನಂತರ, ನಾನು ಕೆಲವು documents ಅನ್ನು ಬಿಡುಗಡೆ ಮಾಡಿದೆ. ತುಮಕೂರಿನಲ್ಲಿ ಲಾಟರಿ ದಂಧೆ ನಡೆಸತಕ್ಕಂಥವರನ್ನು ಅಲ್ಲಿನ ಪೋಲೀಸ್ ಅಧಿಕಾರಿಗಳು ಹಿಡಿದು ಅವರ ಮೇಲೆ ಕೇಸ್ ಹಾಕಿ ಲಾಟರಿ ಮಾರುವವರಿಂದ ಸುಮಾರು ಎಂಬತ್ತು ಸಾವಿರ ರೂಪಾಯಿಗಳನ್ನು ವಸೂಲಿ ಮಾಡುತ್ತಾರೆ. ಅದಕ್ಕೆ ಸರ್ಕಾರದ ಕಡೆಯಿಂದ ಆ ಪೋಲಿಸ್‌ನವರಿಗೆ ಎಂಟು ಸಾವಿರ ಬಹುಮಾನ ಕೂಡ ಕೊಟ್ಟಿರುತ್ತಾರೆ. ನಾನು ಹೇಳಿದ ಒಂದು ತಿಂಗಳ ಹಿಂದೆಯೇ ಈ ಘಟನೆಯಾಗಿದ್ದರೂ ಸರ್ಕಾರ ಏನೂ ಇಲ್ಲ ಬಿಗಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದಿರಿ. ರಾಜ್ಯದಲ್ಲಿ ಕಳೆದ ಒಂದು ವಾರದಿಂದ ಈ ಅತ್ಯಾಚಾರದ ವಿಷಯದಲ್ಲಿ ದೃಶ್ಯ ಮಾಧ್ಯಮಗಳಲ್ಲಿ ಎಲ್ಲಾ ದೃಶ್ಯ ಮಾಧ್ಯಮಗಳು ಒಂದು ರೀತಿಯ competition ನಲ್ಲಿ ಹೊರಟಿವೆ. ಅದು ತಪ್ಪೆಂದು ಹಾಗೂ ಅದರ ಬಗ್ಗೆ ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ, ದೃಶ್ಯ ಮಾಧ್ಯಮಗಳಲ್ಲಿ ಬಂದಿರತಕ್ಕಂಥದನ್ನು ನಾನು ಗಮನಿಸಿದ್ದೇನೆ. ಇವತ್ತಿನದಿವಸ ಈ ಬಗ್ಗೆ panel discussion ಮಾತ್ರ ಮಾಡುತ್ತಿದ್ದಾರೆ ಹೊರತು ಈ ಪ್ರಕರಣಗಳ ಪರಿಹಾರಕ್ಕೆ ಏನು ಮಾಡಬೇಕೆಂದು ಮತ್ತು ಇದನ್ನು ನಿಲ್ಲಿಸುವುದರ ಬಗ್ಗೆ ಮತ್ತು ಇದನ್ನು ಸಂಪೂರ್ಣ ಹದ್ದುಬಸ್ತು ತರುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಯಾರೂ ಸಹ solution ಹೇಳುತ್ತಿಲ್ಲ. ಇದು ಎಲ್ಲೋ ಒಂದು ಕಡೆ ನನಗೆ ನೋವಾಗಿರತಕ್ಕಂಥ ಸಂಗತಿಯಾಗಿದೆ. ಫೆಬ್ರವರಿ 1ನೇ ತಾರೀಖು 2014ರಲ್ಲಿ ನಾನು ಗೃಹ ಇಲಾಖೆಯ ಪೊಲೀಸ್ ಮಹಾನಿರ್ದೇಶಕರಿಗೆ ಮತ್ತು ಬೆಂಗಳೂರಿನ ಪೊಲೀಸ್ ಆಯುಕ್ತರಿಗೆ ಮಾಹಿತಿಗಳನ್ನು ಕೊಡಿ ಎಂದು ಪತ್ರ ಬರೆದಿದ್ದೆ. ಯಾವ್ಯಾವ ಮಾಹಿತಿಗಳೆಂದರೆ, ಕಳೆದ ಮೂರು ವರ್ಷಗಳಲ್ಲಿ ವರ್ಷವಾರು ಬೆಂಗಳೂರು ನಗರದಲ್ಲಿ 18 ವರ್ಷ ವಯಸ್ಸಿಗಿಂಥ ಕಡಿಮೆ ಮತ್ತು 18 ವರ್ಷಕ್ಕಿಂಥ ಹೆಚ್ಚು ವಯಸ್ಸಿನ ಹೆಣ್ಣು ಮಕ್ಕಳು ಕಾಣೆಯಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಪತ್ತೆಯಾದವರ ಸಂಖ್ಯೆ, ಹುಡುಗಿಯರ ಮೇಲೆ ಅಶ್ಲೀಲ ವಿಡಿಯೋ

ಮಾಡಿರುವ ಪ್ರಕರಣಗಳ ವಿವರ ಮತ್ತು ಇದರಲ್ಲಿ ಮೃತಪಟ್ಟವರ ವಿವರ ಹಾಗೂ ಇದರಲ್ಲಿ ಮದುವೆಯಾದವರ ವಿವರ, ಈ ಬಗ್ಗೆ ಮಾಹಿತಿ ಕೊಡಿ ಎಂದು ಪತ್ರ ಬರೆದಿದ್ದೆ. ಅದರ ಜೊತೆಗೆ ರಾಜ್ಯದಲ್ಲಿ ಕಳೆದ ಎರಡು ವರ್ಷದಲ್ಲಿ ವರ್ಷವಾರು ದಾಖಲಾದ C. Misc. From 76ಎ ಮತ್ತು NCR ಪ್ರಕರಣಗಳ ಸಂಖ್ಯೆ, Cr.P.C 154ರ ಅನ್ವಯ ದಾಖಲಾದ FIR ಗಳ ವಿವರಗಳು C.Misc. ಮತ್ತು NCR ಗಳಲ್ಲಿ ಜೀವ ಬೆದರಿಕೆಗಳ ಮತ್ತು ಭೂ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣಗಳ ಸಂಖ್ಯೆ, ಸಿವಿಲ್ ನ್ಯಾಯಾಲಯದ ಆದೇಶದಂತೆ ಭೂ ವಿವಾದಗಳಿಗೆ ಸಂಬಂಧಿಸಿದಂತೆ ಆದೇಶದ ಪರ ದಾಖಲಿಸಿದ NCR ಸಂಖ್ಯೆ, ಈ ಎಲ್ಲಾ ಅಂಶಗಳ ಮಾಹಿತಿ ಕೊಡಿ ಎಂದು ಕೇಳಿದ್ದೆ. ಹಾಗೆಯೇ ಬೆಂಗಳೂರು ನಗರದಲ್ಲಿ ಕಳೆದ ಎರಡು ವರ್ಷಗಳ್ಳಿ ವರ್ಷವಾರು ಎಷ್ಟು ಪ್ರಕರಣಗಳಲ್ಲಿ ರೌಡಿ ಶೀಟರ್ ತೆಗೆಯಲಾಗಿದೆ ಅವುಗಳ ವಿವರ, ಇದರಲ್ಲಿ ಮರಳು ಸಾಗಾಣಿಕೆದಾರರ ವಿವರ, ಕನ್ನಡ ಪರ ಹೋರಾಟಗಾರ ಸಂಘಸಂಸ್ಥೆಗಳ ಸದಸ್ಯರ ಮೇಲೆ ತೆಗೆಯಲಾದ ರೌಡಿ ಶೀಟರ್‌ನ ಸಂಖ್ಯೆ ಮತ್ತು Public nuisance ಪ್ರಕರಣಗಳಲ್ಲಿ ಗಡಿಪಾರು ಮಾಡಿರುವ ಸಂಖ್ಯೆ ಮತ್ತು 302 ಮತ್ತು 307 ಸೆಕ್ಷನ ಅನ್ವಯ murder abd attempt to murder ಮಾಡಿರುವ ಪ್ರಕರಣಗಳಲ್ಲಿ ಎಷ್ಟು ಜನರಿಗೆ ರೌಡಿ ಶೀಟರ್ ತೆಗೆಯಲಾಗಿದೆ ಎಂದು ಎಷ್ಟು ಗಡಿಪಾರು ಮಾಡಲಾಗಿದೆ ಎಂದು ಮತ್ತು ಎಷ್ಟು ಪ್ರಕರಣಗಳಲ್ಲಿ ಗೂಂಡಾ ಕಾಯಿದೆ ಪ್ರಕರಣ ದಾಖಲಾಗಿದೆ ಎಂಬ ಈ ಎಲ್ಲಾ ಮಾಹಿತಿಗಳನ್ನು ಕೊಡಿ ಎಂದು ಕೇಳಿದ್ದೆ. ಆದರೆ, ಮಾಹಿತಿ ಬರಲಿಲ್ಲ. ಆ ನಂತರ ಮಾಹಿತಿ ಕೊಡಿ ಎಂದು RTI ಮೂಲಕ ಹಾಕಿದೆ. ಆದರೆ, RTI ನಲ್ಲಿ ಕೇಳಿದ್ದರೂ ಸಹ ಇಲ್ಲಿಯವರೆಗೆ ನನಗೆ ಮಾಹಿತಿ ದೊರಕಿಲ್ಲ. ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷರ ಕಛೇರಿ, ಇರ್ಷಾದ್ ಅಹಮದ್ ಖಾನ್, ಡಿವೈಎಸ್‌ಪಿರವರು ನನಗೆ ಈ ಬಗ್ಗೆ ಏನು ಉತ್ತರ ಕೊಡುತ್ತಾರೆಂದರೆ, ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯ ಮಂತ್ರಿ, ಹಾಲಿ ಶಾಸಕರು, ರಾಮನಗರ, ವಿಧಾನ ಸಭಾ ಕ್ಷೇತ್ರ, ನಿಮ್ಮ ಉಲ್ಲೇಖಿತ ಅರ್ಜಿಯನ್ನು ಪರಿಶೀಲಿಸಲಾಗಿದ್ದು, ಸದರಿ ಅರ್ಜಿಯಲ್ಲಿ ಕೋರಿರುವ ಕಳೆದ ಮೂರು

ವರ್ಷಗಳ ಅವಧಿಯಲ್ಲಿ, ರಾಜ್ಯದಲ್ಲಿ ವರ್ಷವಾರು ವರದಕ್ಷಿಣೆ ಕಿರುಕುಳ ಮತ್ತು ಸಾವಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ ಮತ್ತು ಅದರಲ್ಲಿ ಆಸ್ತಿ ಒಡವೆಗಳನ್ನು ರಿಕವರಿ ಮಾಡಲಾದ ಪ್ರಕರಣಗಳ ಸಂಖ್ಯೆ ಕುರಿತಂತೆ ಮಾಹಿತಿಯು ನೀವು ಕೋರಿರುವ ಮಾದರಿಯಲ್ಲಿ ಈ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ನೀವು ಕೋರಿರುವ ಮಾಹಿತಿಯು ರಾಜ್ಯವ್ಯಾಪ್ತಿಗೆ ಸಂಬಂಧಿಸಿದ್ದರಿಂದ ನೀವು ನಿಯಮ 6(1)ರ ಪ್ರಕಾರ ಪ್ರತ್ಯೇಕವಾಗಿ ಅರ್ಜಿಗಳನ್ನು ಸಂಬಂಧಿಸಿದ ರಾಜ್ಯದ ಎಲ್ಲಾ ಘಟಕ ಅಧಿಕಾರಿಗಳಿಗೆ ಸಲ್ಲಿಸಿ ಅವರುಗಳಿಂದ ಸದರಿ ಮಾಹಿತಿಗಳನ್ನು ಪಡೆಯಬಹುದಾಗಿದೆ ಎಂದು ಅವರು ನನಗೆ ಕೊಟ್ಟಿರುವಂಥ ಉತ್ತರ. ಏತಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಸರ್ಕಾರದ ಅಧಿಕಾರಿಗಳಿಗೆ ಈ ರೀತಿಯ ವಿಷಯಗಳನ್ನು ಕೇಳುವುದರ ಮುಖಾಂತರ ಇವತ್ತು ನಾಡಿನಲ್ಲಿ ನಡೆಯುತ್ತಿರುವ ಹಲವಾರು ರೀತಿಯ ಅಕ್ರಮ ಚಟುವಟಿಕೆಗಳ ಬಗ್ಗೆ ಸರ್ಕಾರದ ಅಧಿಕಾರಿಗಳು ಗಮನ ಕೊಡಲಿ ಎಂಬ ಹಿನ್ನಲೆಯಲ್ಲಿ ಈ ರೀತಿಯ ಮುನ್ನೆಚ್ಚರಿಕೆಯ ಒಂದು ಸಂದೇಶವನ್ನು ಈ ಸರ್ಕಾರಕ್ಕೆ ಕೊಡುತ್ತಾ ಬಂದಿದ್ದೇನೆ. ಕಳೆದ ಒಂದು ವಾರದಿಂದ ಎರಡು-ಮೂರು ಪ್ರಕರಣಗಳ ಹಿನ್ನಲೆಯಲ್ಲಿ ಜನತೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಮಾಡತಕ್ಕಂಥ ವಾತಾವರಣ ಇವತ್ತು ನಿರ್ಮಾಣವಾಗಿದೆ. ರಾತ್ರಿ 12.00 ಗಂಟೆ ಸಮಯದಲ್ಲಿ ಸ್ನೇಹಿತನ ಜೊತೆ ಕಾರಿನಲ್ಲಿ ಕುಳಿತು ಮಾತನಾಡುತ್ತಿದ್ದಾಗ ಅನಾಮತ್ತಾಗಿ ಬಂದು ಅವರನ್ನು ಕಿಡ್ನಾಪ್ ಮಾಡಿದ್ದಾರೆ. ಈ ಘಟನೆ ಆದ ನಂತರ ಈ ಬಗ್ಗೆ ಪೊಲೀಸ್ ಠಾಣೆಗೆ ಅವರು ದೂರು ಕೊಡುವುದಕ್ಕೆ ಹೋಗಿದ್ದಾರೆ. ಇದಾದನಂತರ ವಿಬ್‌ಗಯಾರ್ ಶಾಲೆಯಲ್ಲಿ 6 ವರ್ಷದ ಮಗುವಿನ ಮೇಲೆ ಆಗಿರುವಂಥ ಘಟನೆಯ ಹಿನ್ನಲೆಯಲ್ಲಿ ಅಲ್ಲಿ ಜನರು ಪ್ರತಿಭಟನೆ ಮಾಡಿದ್ದಾರೆ. ಇವತ್ತಿನದಿವಸ ಅಮಯಾಕರಿಗೆ ಶಿಕ್ಷೆ ಆಗಬಾರದು, ಈ ವಿಷಯ ಕೂಡ ಇಲ್ಲಿ ಚರ್ಚೆ ಆಗಬೇಕಾಗಿದೆ. ನಾನು ಈ ಪತ್ರಗಳನ್ನು ಸರ್ಕಾರಕ್ಕೆ ಬರೆಯಲಿಕ್ಕೆ ಕಾರಣವೇನೆಂದರೆ, ವಿಧಾನ ಸಭೆಯ ಕಲಾಪಗಳಲ್ಲಿ ನಡೆದಿರತಕ್ಕಂಥ ಸಂದರ್ಭದಲ್ಲಿ ಆಯಾ ಕಾಲದಲ್ಲಿ ಸರ್ಕಾರ ಗೃಹ ಸಚಿವರು ಸದನದ ಗಮನಕ್ಕೆ

ತಂದಿರುವಂಥ ಮಾಹಿತಿಗಳ ಆಧಾರದ ಮೇಲೆ ಸರ್ಕಾರ ಸ್ವಲ್ಪ ಮುಂಜಾಗ್ರತೆ ತೆಗದುಕೊಳ್ಳಬೇಕೆಂಬ ಉದ್ದೇಶದಿಂದ ಈ ಪತ್ರಗಳನ್ನು ನಾನು ಬರೆದಿದ್ದೇನೆ. 14ನೇ ಮಾರ್ಚ್ 2010 ರಲ್ಲಿ ನೀಡಿರುವ ಮಾಹಿತಿ ಏನೆಂದರೆ, ಕಳೆದ ಒಂದು ವರ್ಷದ ಅವಧಿಯಲ್ಲಿ ಕರ್ನಾಟಕದಲ್ಲಿ 488 ಅತ್ಯಾಚಾರ ಹಾಗೂ 584 ಮಹಿಳೆಯರನ್ನು ಕೊಲೆ ಮಾಡಲಾಗಿದೆ ಎಂಬ ಈ ಮಾಹಿತಿಯನ್ನು ಆಗ ಗೃಹ ಸಚಿವರಾಗಿದ್ದಂಥ ಶ್ರೀ ವಿ.ಎಸ್. ಆಚಾರ್ಯರವರು ನೀಡಿದ್ದರು. ವಿಧಾನ ಪರಿಷತ್‌ನಲ್ಲಿ ಮಾನ್ಯ ನಾರಾಯಣ ಸ್ವಾಮಿಯವರು ಮತ್ತು ಮಾನ್ಯ ಪ್ರತಾಪ್ ಚಂದ್ರ ಶೆಟ್ಟಿ ಹಾಗೂ ಶ್ರೀಮತಿ ವಿಮಾಲಗೌಡ ಅವರು ಪ್ರಶ್ನೆ ಹಾಕಿದ್ದಕ್ಕೆ 210 ರಲ್ಲಿ ಆ ಒಂದು ವರ್ಷದಲ್ಲಿ ಆಗಿರತಕ್ಕಂಥ ಅತ್ಯಾಚಾರ ಪ್ರಕರಣಗಳು ಮತ್ತು ಮಹಿಳೆಯರು ಕೊಲೆ ಆಗಿರತಕ್ಕಂಥ ಪ್ರಕರಣಗಳ ಮಾಹಿತಿಯನ್ನು ಸದನದ ಮುಂದಿಟ್ಟಿದ್ದಾರೆ. ಎರಡು ವರ್ಷದಲ್ಲಿ 5,060 ಮಹಿಳೆಯರ ಕಾಣೆಯಾಗಿದ್ದಾರೆ ಮತ್ತೆ 2008 ರಲ್ಲಿ 2,493, 2009 ರಲ್ಲಿ 2,567 ಮಹಿಳೆಯರು ಕಾಣೆಯಾಗಿದ್ದಾರೆ. ಕಾಣೆಯಾಗಿರುವ ಮಹಿಳೆಯರಲ್ಲಿ 2008 ಮತ್ತು 2009 ರಲ್ಲಿ ಕ್ರಮವಾಗಿ 2172 ಮತ್ತು 2011 ಮಂದಿಯನ್ನು ಪತ್ತೆ ಹಚ್ಚಲಾಗಿದೆ ಎಂದು ಹೇಳಿದ್ದಾರೆ. ಧಾರ್ಮಿಕ ಕ್ಷೇತ್ರಗಳ ಮೇಲೆ ದಾಳಿಯಾಗಿರುವ ಬಗ್ಗೆ ಕೂಡ ಮಾಹಿತಿ ಕೊಟ್ಟಿದ್ದಾರೆ. ಆದರೆ, ಅವೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ಸದನದ ಸಮಯವನ್ನು ವ್ಯರ್ಥಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿರುವ ಮುಖ್ಯ ಪ್ರಶ್ನೆ ಏನೆಂದರೆ, ಇದಕ್ಕೆ ಏನು solution ಕಂಡು ಹಿಡಿಯಬೇಕೆಂಬುದರ ಬಗ್ಗೆ ನಾವೆಲ್ಲರೂ ಪ್ರಾಮಾಣಿಕವಾದಂಥ ಒಂದು ತೀರ್ಮಾನವನ್ನು ಮಾಡಬೇಕಾಗುತ್ತದೆ. ಇಲ್ಲಿ ನಾವು ಕಾನೂನುಗಳನ್ನು ರಚನೆ ಮಾಡಿದ ತಕ್ಷಣ ಈ ಪ್ರಕರಣಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವೇ? ಇವತ್ತು ಕಾನೂನುಗಳು ಇವೆ. ಇವತ್ತಿನದಿವಸ ಪ್ರತಿಯೊಂದು ದೇಶಗಳಲ್ಲಿ ಅವರದೇ ಆದಂಥ ಕಾನೂನುಗಳನ್ನು ಇಟ್ಟುಕೊಂಡಿದ್ದಾರೆ. ಆ ಕಾನೂನುಗಳನ್ನು ಇಟ್ಟುಕೊಂಡ ತಕ್ಷಣ ಬಹುಶಃ ಈ ಒಂದು ಪ್ರಕರಣಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗಿದೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. Incidence of Crime for Rape case ಬಗ್ಗೆ ಈ ಸದನದ ಗಮನಕ್ಕೆ ಒಂದು

ಮಾಹಿತಿಯನ್ನು ತರುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇವತ್ತಿನದಿವಸ ಕರ್ನಾಟಕ ರಾಜ್ಯ ಬೆಂಗಳೂರು ನಗರದ ಗಾರ್ಬೆಜ್ ವಿಷಯಕ್ಕೆ ಹಿಂದೆ New York Times ಪತ್ರಿಕೆಯಲ್ಲಿ ಬರೆದಿದ್ದರು. ಈ ರಾಜ್ಯಕ್ಕೆ ಮತ್ತು ಬೆಂಗಳೂರು ನಗರಕ್ಕೆ ಒಂದು ವಿಶೇಷವಾದಂಥ ಹೆಸರು ಇದೆ. ಈ ಮೂರ್‍ನಾಲ್ಕು ದಿನಗಳಿಂದ ಮಾಧ್ಯಮಗಳಲ್ಲಿ ಬೃಹದೀಕರಿಸಿ ಚರ್ಚೆ ನಡೆಯುತ್ತಿದೆ. ಆದರೆ, ನಮ್ಮ ರಾಜ್ಯದ ಬಗ್ಗೆ ಇದ್ದಂಥ ಒಳ್ಳೆಯ ಹೆಸರಿನ ಮೇಲೆ ಕಳಂಕ ಮೂಡುತ್ತಿದೆ. ಈ ಕಳಂಕವನ್ನು ತೊಡೆದು ಹಾಕುವುದಷ್ಟೆ ಅಲ್ಲದೆ ಈ ಅಮಯಾಕರ ಮಕ್ಕಳ ಮೇಲೆ ಏನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ನಾಲ್ಕು ವರ್ಷದ ಮಕ್ಕಳ ಮೇಲೆ ಮತ್ತು 10 ವರ್ಷದ ಮಕ್ಕಳ ಮೇಲೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮೇಲೆ ಇವತ್ತಿನದಿವಸ ಅತ್ಯಾಚಾರ ನಡೆಯುತ್ತಿದೆ ಎಂದು ಪ್ರತಿನಿತ್ಯ ಮಾಧ್ಯಮಗಳು ಹೆಚ್ಚಿನ ರೀತಿಯಲ್ಲಿ ಇದರ ಬಗ್ಗೆ ರಾಜ್ಯದ ಜನತೆಯ ಮುಂದೆ ಬಿಂಬಿಸುತ್ತಿದ್ದಾರೆ. 2007 ರಲ್ಲಿ ಕರ್ನಾಟಕ ರಾಜ್ಯದಲ್ಲಿ ನಾನು ಮುಖ್ಯ ಮಂತ್ರಿಯಾಗಿದ್ದರೆ. ಆ ಅವಧಿಯಲ್ಲಿ 436 ರೇಪ್ ಪ್ರಕರಣಗಳು ನಡೆದಿವೆ. 2008ರಲ್ಲಿ 446 ರೇಪ್ ಪ್ರಕರಣಗಳು ನಡೆದಿದೆ. 2009 ರಲ್ಲಿ 509, 2010 ರಲ್ಲಿ 586, 2011 ರಲ್ಲಿ 636, 2012 ರಲ್ಲಿ 621, 2013 ರಲ್ಲಿ 1030 ಪ್ರಕರಣಗಳು. ಪ್ರತಿ ವರ್ಷ ಇಲ್ಲಿ ಸ್ವಲ್ಪ ಏರಿಕೆಯಾಗುತ್ತಿದೆ. ಗುಜರಾತನದ್ದು ಇಲ್ಲಿ ಹೇಳುತ್ತೇನೆ. ಯಾರು ಅನ್ಯತಾ ಭಾವಿಸುವುದು ಬೇಡ. ಮಾಧ್ಯಮದಲ್ಲಿ ಯಾರೋ ಹೇಳುತ್ತಿದ್ದರು. ಒಂದೇ ಒಂದು ರೇಪ್ ಆಗದೆ ಇರತಕ್ಕಂಥ ರಾಜ್ಯ ಇದ್ದರೆ ಒಂದು ಬ್ರೇಕ್ ನಂತರ ನಿಮ್ಮ ಮುಂದೆ ಇಡುತ್ತೇವೆ ಎನ್ನತಕ್ಕಂಥದ್ದನ್ನು ನಾನು ಒಂದು ಚಾನೆಲ್‌ದಲ್ಲಿ ನೋಡಿದೆ. ನನಗೆ ನಿಜಕ್ಕೂ ಆಶ್ಚರ್ಯವಾಯಿತು. ಅವರು ಯಾವ ರೀತಿ ಕ್ರಮ ತೆಗೆದುಕೊಂಡಿರಬಹುದು. ಹಾಗಾದರೆ ಗುಜರಾತಿನಲ್ಲಿ 2002 ರಿಂದ ನನಗೆ ಅದನ್ನು ನೋಡಿದಾಗ ಒಂದು curiosity create ಆಯಿತು. ಆದರೆ ಇವತ್ತು ನಮ್ಮ ದೇಶದಲ್ಲಿರತಕ್ಕಂಥ ಮಾಹಿತಿ ಕೊಟ್ಟಿರತಕ್ಕಂಥ ಈ ಕ್ರೈಮ್‌ಗಳ ವಿಷಯದ ಬಗ್ಗೆ ಇದೆ. ನಮ್ಮ ಸರ್ಕಾರದ ಅಂಕಿ ಅಂಶಗಳು. ಗುಜರಾತಿನಲ್ಲಿ 2007 ರಲ್ಲಿ 316, 2008 ರಲ್ಲಿ 374, 2009 ರಲ್ಲಿ 433, 2010 ರಲ್ಲಿ 408, 2011 ರಲ್ಲಿ 439, 2013 ರಲ್ಲಿ 732

ಪ್ರಕರಣಗಳು ಆಗಿವೆ. ಅಲ್ಲಿಯೂ ಈ ರೇಪ್ ಪ್ರಕರಣಗಳ ಗ್ರಾಫ್ ಏರುತ್ತಿದೆ. ಇನ್ನು ಮಹಾರಾಷ್ಟ್ರ, ತಮಿಳುನಾಡು ಮತ್ತು ಕೇರಳದ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದೇ ರೀತಿ ಪ್ರಕರಣಗಳು ಏರಿಕೆ ಆಗುತ್ತಿದೆ. ಬೆಂಗಳೂರು ಸಿಟಿಯಲ್ಲಿ 2007 ರಲ್ಲಿ 62, 2008 ರಲ್ಲಿ 54, 2009 ರಲ್ಲಿ 65, 2010 ರಲ್ಲಿ 65, 2011 ರಲ್ಲಿ 97, 2012 ರಲ್ಲಿ 90, 2013 ರಲ್ಲಿ 80 ಪ್ರಕರಣಗಳು. ಇನ್ನು ಅಹ್ಮದಾಬಾದ್‌ಗೆ ನಾವು ಬರುವುದಾದರೆ, 2007 ರಲ್ಲಿ 37, 2008 ರಲ್ಲಿ 44, 2009 ರಲ್ಲಿ 6, 2010 ರಲ್ಲಿ 49, 2011 ರಲ್ಲಿ 60, 2012 ರಲ್ಲಿ 63, 2013 ರಲ್ಲಿ 116 ಪ್ರಕರಣಗಳು. ಕರ್ನಾಟಕದ ಬೆಂಗಳೂರಿನಲ್ಲಿ 80 ಪ್ರಕರಣಗಳು ಆಗಿವೆ. ಏತಕ್ಕೆ ನಾನು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ಇಲ್ಲಿ ನಾವು ರಾಜಕೀಯವಾಗಿ ಈ ಪ್ರಕರಣಗಳಿಂದ ನಾವು ಫಲ ಪಡೆಯುವುದು ಮುಖ್ಯವಲ್ಲ. ಇವತ್ತು ಆ ಅಮಾಯಕ ಕುಟುಂಬದ ಅಮಾಯಕ ಮಕ್ಕಳು ಇಲ್ಲಿ ಶ್ರೀಮಂತಿಕೆ ಮತ್ತು ಬಡತನ ಮುಖ್ಯವಲ್ಲ. ಎಲ್ಲಾ ಮಕ್ಕಳ ಮೇಲೆ ಈ ರೀತಿ ಪ್ರಕರಣಗಳು ನಡೆಯುತ್ತಿರುವುದು ನಾವು ಪ್ರತಿನಿತ್ಯ ಕಾಣುತ್ತಿದ್ದೇವೆ. ಇದಕ್ಕೆ ನಾವು ಯಾವ ರೀತಿ ಈ ಪ್ರಕರಣಗಳು ಈ ರಾಜ್ಯದಲ್ಲಿ ನಿಲ್ಲತಕ್ಕಂಥದ್ದಕ್ಕೆ ನಾವು ಒಟ್ಟಾಗಿ ಕುಳಿತು ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಈ ಎಲ್ಲಾ ಅಂಕಿ ಅಂಶಗಳನ್ನು ನಾನು ಕೊಡತಕ್ಕಂಥದ್ದು ಏನಿದೆ, ಬಹುಶಃ ಕೆಲವರಲ್ಲಿ ಸರ್ಕಾರದ ಪರವಾಗಿ ಕುಮಾರಸ್ವಾಮಿ Advocate ಆಗಿ ವಾದ ಮಾಡುತ್ತಿದ್ದಾನೆ ಎನ್ನತಕ್ಕಂಥ ಭಾವನೆ ಬೇಡ. ನಾನು ಪ್ರಾರಂಭಿಕ ಹಂತದಲ್ಲಿ ಹೇಳಿದೆ. ಈ ಸರ್ಕಾರದಲ್ಲಿ ಯಾವ ರೀತಿ ಬೇಜವಾಬ್ದಾರಿಯಿಂದ ನಮ್ಮ ಅಧಿಕಾರಿಗಳು ಮುಂಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ಅವರಿಗೆ ಹೇಳಿದರೂ ಅವರು ಕೆಲಸ ಮಾಡಲಿಲ್ಲ. ಈ ಮಾಹಿತಿಗಳು ಒಂದು ಭಾಗವಾದರೆ, ಇಲ್ಲಿ ನಾವು ಗೃಹ ಇಲಾಖೆಯ ವಿಷಯದಲ್ಲಿ ಬರೀ ಪೊಲೀಸ್‌ರನ್ನು ಮತ್ತು ಇನ್ಸ್‌ಪೆಕ್ಟರ್‌ಗಳನ್ನು ಇವತ್ತು ಬೆಟ್ಟು ಮಾಡಿ ತೋರಿಸಿದರೆ ಸಾಧ್ಯವಿಲ್ಲ. ಅವರ ಮೇಲೆ ಸಂಪೂರ್ಣವಾದ ಅಪರಾಧಿ ಸ್ಥಾನ ಕೊಡುವುದು ಸೂಕ್ತವಲ್ಲ. ನಾನು ಮಾಧ್ಯಮಗಳಲ್ಲಿ ಗಮನಿಸಿದೆ. ಕೆಲವು ಹಿರಿಯ ಪೊಲೀಸ್

ಅಧಿಕಾರಿಗಳು ಈ ರಾಜ್ಯದಲ್ಲಿ ಏನು ಕೆಲಸ ನಿರ್ವಹಿಸಿದ್ದರು. ಜವಾಬ್ದಾರಿಯುತ ಸ್ಥಾನದಲ್ಲಿ ಕೆಲಸ ನಿರ್ವಹಿಸಿದ್ದಾರೆ. ಅವರು ಮೂರು ದಿವಸಗಳಿಂದ ಚಾನೆಲ್‌ಗಳ ಮುಂದೆ ಹೋಗಿ ಕುಳಿತಿದ್ದಾರೆ. ಒಬ್ಬರು ನಿವೃತ್ತ ಪೊಲೀಸ್ ಅಧಿಕಾರಿಗಳು ಹೇಳಿಕೆ ಕೊಟ್ಟಿರುವುದನ್ನು ನಾನು ಗಮನಿಸಿದೆ. ಇವತ್ತು ಈ ರಾಜ್ಯದಲ್ಲಿ ಪೊಲೀಸ್ ಅಧಿಕಾರಿಗಳು ಯಾರು ಖಾಕಿಯನ್ನು ಧರಿಸುತ್ತಾರೆ ಆ ಖಾಕಿ ಇವತ್ತು ಖಾದಿಯನ್ನು ಆವರಿಸಿಕೊಂಡಿದೆ ಎನ್ನತಕ್ಕಂಥ ಮಾತನ್ನು ಆ ಚಾಲೆನಲ್‌ನಲ್ಲಿ ಹೇಳುತ್ತಾರೆ. ಒಬ್ಬರು ನಿವೃತ್ತ ಅಧಿಕಾರಿ. ನನ್ನ ಕಾಲದಲ್ಲಿ ನಾನು ವರ್ಗಾವಣೆಗೆ ಒಂದು ಪ್ರಮುಖವಾದಂಥ ಸ್ಥಳ ಪಡೆಯಲಿಕ್ಕೆ ಯಾರ ಮುಂದೆ ಹೋಗಿ ಬಗ್ಗಿ ನಿಲ್ಲಲಿಲ್ಲ. ಅವರು ಎಲ್ಲಿಗೆ ವರ್ಗಾವಣೆ ಮಾಡಿದರೂ ನಾನು ಕೆಲಸ ಮಾಡಿದ್ದೇನೆ. ಆ ಒಬ್ಬ ನಿವೃತ್ತ ಪೊಲೀಸ್ ಅಧಿಕಾರಿ ಹೇಳಿರುವುದನ್ನು ನಾನು ಗಮನಿಸಿದೆ. ಇನ್ನೊಬ್ಬ ಅಧಿಕಾರಿ ಹೇಳುತ್ತಾರೆ. ಮೊದಲು ಈ ರಾಜ್ಯದಲ್ಲಿ ಯಾವ ಒಂದು ವರ್ಗಾವಣೆ ವಿಷಯದಲ್ಲಿ ಹಣ ತೆಗೆದುಕೊಂಡು ಒಂದು ಸ್ಥಳಕ್ಕೆ ನಿಯುಕ್ತಿಗೊಳಿಸತಕ್ಕಂಥದ್ದು ಅದು ನಿಲ್ಲಬೇಕು ಎನ್ನುವಂಥದ್ದನ್ನು ಇನ್ನೊಬ್ಬ ಅಧಿಕಾರಿಗಳು ಹೇಳುತ್ತಾರೆ. ಏತಕ್ಕೆ ನಾನು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಪೊಲೀಸ್ ಇಲಾಖೆಯನ್ನು ಹಂತಹಂತವಾಗಿ ಜನಪ್ರತಿನಿಧಿಗಳಾದ ನಾವು ಇವತ್ತು ಅವರಲ್ಲಿರತಕ್ಕಂಥ ಹೋರಾಟದ ಮನೋಭಾವಕ್ಕೆ demoralize ಮಾಡತಕ್ಕಂಥ ರೀತಿಯಲ್ಲಿ ಈ ಸಮಾಜದಲ್ಲಿ ನಾವೆಲ್ಲರೂ ಕಾರಣಕರ್ತರು ಎನ್ನುವುದನ್ನು ಹೇಳುತ್ತೇನೆ. ಒಂದು ಕಾಲದಲ್ಲಿ ನಾವು ಚಿಕ್ಕ ಹುಡುಗರುಗಳು ಆ ಪೊಲೀಸ್ ಇನ್ಸ್‌ಪೆಕ್ಟರ್ ಬುಲೆಟ್ ಗಾಡಿಯ ಮೇಲೆ ರಸ್ತೆಯಲ್ಲಿ ಬಂದರೆ ಆ ಬುಲೆಟ್ ಸೌಂಡ್ ಕೇಳಿದ ತಕ್ಷಣ ಹಳ್ಳಿಯಲ್ಲಿ ಹಾಗೂ ತಾಲ್ಲೂಕಿನಲ್ಲಿರುವ ಕೆಲವು ಕಿಡಿಗೇಡಿಗಳು ಇರುತ್ತದ್ದರಲ್ಲಾ ಓಡಿ ಹೋಗುವವರು. ಇವತ್ತು ಪೊಲೀಸ್ ಕಮಿಷನರ್ ಬರುತ್ತಾರೆಂದರೂ ಅಲ್ಲಿ ಯಾರು ಕೇಳುವುದಿಲ್ಲ. ಆ ಒಂದು ವ್ಯವಸ್ಥೆಗೆ ನಾವು ನಮ್ಮನ್ನು ದೂಡಿಕೊಂಡಿದ್ದೇವೆ. ನಾನು ಆ ಪಕ್ಷ ಈ ಪಕ್ಷ ಎಂದು ಘೋಷಣೆ ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ಈ ರಾಜ್ಯದಲ್ಲಿ ಕಾನೂನಿನ ಮೇಲೆ ಈ ಪ್ರಕರಣಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಗಡಿಪಾರು ಮಾಡುವುದರ

ಮೂಲಕ ಈ ಪ್ರಕರಣಗಳನ್ನು ನೀವು ನಿಲ್ಲಿಸುತ್ತೇವೆಂದು ತಿಳಿದುಕೊಂಡಿದ್ದರೆ ಅದು ಎಂದು ಸಾಧ್ಯವಿಲ್ಲ. ಇವತ್ತು ಈ ರಾಜ್ಯದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸ್ವತಂತ್ರವಾಗಿ ಕೆಲಸ ನಿರ್ವಹಿಸುವುದಕ್ಕೆ ಅವಕಾಶವನ್ನು ಕೊಡಬೇಕು. ಅದನ್ನು ಕೆಲವರು ದುರುಪಯೋಗ ಪಡಿಸಿಕೊಳ್ಳತಕ್ಕಂಥವರು ಇದ್ದಾರೆ. ನಾನು ಅದನ್ನು ಹೇಳುವುದಕ್ಕೂ ಬಯಸುತ್ತೇನೆ. ಇವತ್ತು ನಾವು ಪೊಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳನ್ನು ಯಾವ ಮಟ್ಟಕ್ಕೆ ಇಟ್ಟಿದ್ದೇವೆ. ಪ್ರತಿಯೊಂದು ಠಾಣೆಯಲ್ಲಿ ಆ ಕ್ಷೇತ್ರದ ಶಾಸಕ ಏನಿದ್ದಾನೆ ಆ ಶಾಸಕನ ಆದೇಶದ ಮೇರೆಗೆ ಕೆಲಸ ನಿರ್ವಹಿಸತಕ್ಕಂಥ ರೀತಿಯಲ್ಲಿ ಇಟ್ಟಿದ್ದೇವೆ, ಅದು ಆಡಳಿತ ಪಕ್ಷದ ಶಾಸಕರು. ನಾನು ಗೃಹ ಸಚಿವರಿಗೆ ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಕೊಟ್ಟೆ. ಒಬ್ಬ ಸರ್ಕಾರಿ ಅಧಿಕಾರಿ ಅವನ ಕುಟುಂಬದಲ್ಲಿ ಏನೋ ಒಂದು ಸಮಸ್ಯೆ ಆ ಸಮಸ್ಯೆಯ ವಿಷಯದಲ್ಲಿ ಪೊಲೀಸ್ ಠಾಣೆಗೆ ಆ ಗಂಡ ಹೆಂಡತಿ ಹೋಗುತ್ತಾರೆ. ಅಲ್ಲಿ ಒಬ್ಬ ಕಾಂಗ್ರೆಸ್ ಪಕ್ಷದ ಪ್ರತಿನಿಧಿ ಪೊಲೀಸ್ ಠಾಣೆಯಲ್ಲಿ ಪೊಲೀಸ್‌ರ ಲಾಠಿ ಕಿತ್ತುಕೊಂಡು ಆ ಸರ್ಕಾರಿ ಅಧಿಕಾರಿಗೆ ಹೊಡೆಯುತ್ತಾನೆ. ನಾನು ಗೃಹ ಸಚಿವರ ಗಮನಕ್ಕೆ ತಂದೆ. ಆದರೆ ಇವತ್ತಿನವರೆಗೂ ಆಕ್ಷನ್ ಆಗಲಿಲ್ಲ. ಮಾನ್ಯ ಅಧ್ಯಕ್ಷರೆ, ನಿಮ್ಮ ಛೇಂಬರ್‌ಗೆ ಬಂದು ಹಗರಿಬೊಮ್ಮನಹಳ್ಳಿಯ ವಿಷಯವನ್ನು ಹೇಳಿದರು. ಮತ್ತೇ ಮೊನ್ನೆ ಲೋಕಸಭೆ ಚುನಾವಣೆಯ ಸಮಯದಲ್ಲಿ ಒಬ್ಬ ಸಮಾಜಘಾತಕ activities ನಲ್ಲಿರತಕ್ಕಂಥವನು ಚುನಾವಣೆಗೆ ಎರಡು ದಿವಸ ಮುಂಚೆ ಒಂದು ಘರ್ಷನೆ ಆಗುತ್ತದೆ. ಅವನು ಹೊಡೆದಾಗ ಒಬ್ಬ ಕಾನ್‌ಸ್ಟೇಬಲ್‌ನ ಕಿವಿ ಹರಿಯುತ್ತದೆ. ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಹೋಗಿ ದಯವಿಟ್ಟು ನೀನು ಕೇಸ್ ಹಾಕಬೇಡ ಎಂದು ಹೇಳಿ ಅವನ ರಕ್ತ ಸುರಿಯುತ್ತಿದೆ, ಆ ಕಾನ್‌ಸ್ಟೇಬಲ್‌ಗೆ ಚಿಕಿತ್ಸೆ ಕೊಡಿಸುತ್ತಾರೆ, ಹೊಡೆದವನು ಬೇಲ್ ತೆಗೆದುಕೊಳ್ಳುವವರೆಗೆ ಆರಾಮವಾಗಿ ಓಡಾಡಿಕೊಂಡು ಇರಲಿಕ್ಕೆ ಅವಕಾಶವನ್ನು ಕಲ್ಪಿಸುತ್ತಾರೆ. ಆರೆಸ್ಟ್ ಮಾಡಿದಂಥ ನಾಟಕವಾಡಿ ಒಂದು ಆಸ್ಪತ್ರೆಗೆ ತೆಗೆದುಕೊಂಡು ದಾಖಲೆ ಮಾಡಿಸುತ್ತಾರೆ. ನಾನು ಏಕೆ ಹೇಳುತ್ತಿದ್ದೇನೆ. ನಾನು ಅಧಿಕಾರದಲ್ಲಿದ್ದಾಗ ಯಾವುದೇ ಪೊಲೀಸ್ ಅಧಿಕಾರಿಗಳನ್ನು ಈ

ಸದನದಲ್ಲಿ ಇವತ್ತು ಹೇಳುವುದಕ್ಕೆ ಬಯಸುತ್ತೇನೆ. ಯಾವುದೇ ಸಮಾಜಘಾತಕ activities ಮಾಡತಕ್ಕಂಥವರು ಯಾವುದೇ ಪಕ್ಷದಲ್ಲಿರಲಿ ನಾನು ಯಾವುದೇ ಅಧಿಕಾರಿಗಳಿಗೆ ಅವರು ಕೆಲಸ ನಿರ್ವಹಿಸಬೇಕಾದರೆ ನಾನು interfere ಆಗಿಲ್ಲ. ಇವತ್ತು ಈ ಸದನದ ಮೂಲಕ ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಯಾವುದಾದರೂ ಅಧಿಕಾರಿ ನಾನು ಸಮಾಜಘಾತುಕ ಶಕ್ತಿಗಳ ವಿಷಯದಲ್ಲಿ ಅವನು ಯಾವನೇ ಇರಲಿ ಅವನ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತಿದ್ದೆ. ಯಾರಾದರೂ ಸಮಾಜಘಾತುಕ ಶಕ್ತಿಗಳಿಗೆ ನಾನು ರಕ್ಷಣೆ ಕೊಟ್ಟಿದ್ದೇನೆ ಎನ್ನುವುದನ್ನು ಹೇಳಿದರೆ ನಾನು ರಾಜಕೀಯದಿಂದ ನಿವೃತ್ತಿ ಹೊಂದಿ ಬಿಡುತ್ತೇನೆ. ಏತಕ್ಕೆ ನಾನು ಈ ವಿಷಯ ಹೇಳುತ್ತಿದ್ದೇನೆ. ಈ ರೀತಿ ಪ್ರಕರಣಗಳಿಂದ ನಿಮಗೆ ಉದಾಹರಣೆಯನ್ನು ಕೊಟ್ಟೆ. ಇವತ್ತು ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವುದಕ್ಕಾಗುವುದಿಲ್ಲ. ಇವತ್ತು ಬೇರೆ ಬೇರೆ ಪ್ರಕರಣಗಳು ನಡೆಯಿತು. ರಾತ್ರಿ ಒಂದು ಗಂಟೆಯವರೆಗೆ ನೀವು ಬಾರ್ ತೆಗೆಯಬೇಕು ಎಂದು ಹೇಳುತ್ತೀರಿ, ತೆಗೆಸಿದ್ದೀರಿ. ಅವನು ಒಂದು ಗಂಟೆಯವರೆಗೆ ಕುಳಿತುಕೊಂಡು ಕುಡಿಯುತ್ತಾನೆ. ಅವನು ಬಾರ್‌ನಿಂದ ಹೊರಗೆ ಹೋಗುವಾಗ ದಾರಿಯಲ್ಲಿ ನಿಲ್ಲಿಸುತ್ತೀರಿ. ಬಾಯಿ ತೆಗೆಯಿರಿ ಎಷ್ಟು ಕುಡಿದಿದ್ದೀಯಾ ಎಂದು ಮೀಟರ್ ಹಿಡಿಯುತ್ತಾನೆ. ಕುಡಿಸುವವರು ನೀವೇ, ಅವನು ಮನೆಗೆ ಹೇಗೆ ಹೋಗಬೇಕು. ಕುಡಿದು ಹೋಗುವುದಕ್ಕೆ ಕುಡಿಯದೇ ಇರುವ ಇನ್ನೊಬ್ಬ ಡ್ರೈವರ್‌ನ್ನು ಇಟ್ಟುಕೊಳ್ಳಬೇಕು. ಮೋಟರ್ ಬೈಕ್‌ನಲ್ಲಿ ಹೋಗುವಂಥ ಹುಡುಗರ ಪರಿಸ್ಥಿತಿ ಏನು? ಬಾರ್ ಮುಚ್ಚಿಬಿಡಿ ಅವನು ಮನೆಗೆ ತೆಗೆದುಕೊಂಡು ಹೋಗಿ ಕುಡಿದುಕೊಳ್ಳಲಿ. ಆ ಸಾರ್ವಜನಿಕರಿಗೆ ಏಕೆ ಇವತ್ತು ತೊಂದರೆ ಕೊಡುತ್ತಿದ್ದೀರಿ. ಇವತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಇಂತಹ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳುವುದಕ್ಕೆ ನೀವು ಏನು ಹೊರಟಿದ್ದೀರಿ. ಇನ್ನು ಮರಳು ದಂಧೆ. ಇವತ್ತು ಅದು ಈ ರಾಜ್ಯದಲ್ಲಿ ನಿಂತಿದೆಯಾ? ಈ ಪೊಲೀಸ್ ಅಧಿಕಾರಿಗಳು ಈ ಮರಳು ದಂಧೆ ಕೆಲಸ ಏನಿದೆ, ಇವರು ರಾತ್ರಿ ಅಲ್ಲಿ ವಸೂಲು ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ.

ಇವರು ಬೆಳಗ್ಗೆ ಎಂದು ಸಾರ್ವಜನಿಕರಿಗೆ ರಕ್ಷಣೆ ಕೊಡುವುದಕ್ಕೆ ಪೊಲೀಸ್ ಅಧಿಕಾರಿಗಳು ಎಲ್ಲಿ ಬರುತ್ತಾರೆ. ಇದು ಇಲ್ಲಿರತತಕ್ಕಂಥ ಪ್ರಶ್ನೆ.

(ಗೊಂದಲ)

ಶ್ರೀ ಎಸ್. ಭೀಮಾ ನಾಯಕ್:- ಮರಳು ದಂಧೆ ವಿಚಾರ ಕಲ್ಲು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈಗ ಅದು ಬೇಡ. PWD ಯ ಬೇಡಿಕೆ ಬಂದಾಗ ಅದನ್ನು ಮಾತನಾಡಿ.

ಅಧ್ಯಕ್ಷರು:- PWD ಯ ವಿಷಯದ ಮೇಲೆ ಮಾತನಾಡಿ.

ಶ್ರೀ ಎಸ್. ಭೀಮಾ ನಾಯಕ್:- ಮಾನ್ಯ ಅಧ್ಯಕ್ಷರೆ, ಹಡಗಲಿ ತಾಲ್ಲೂಕಿನಲ್ಲಿಯ ಮರಳು ದಂಧೆಯ ಬಗ್ಗೆ ಶೂನ್ಯವೇಳೆಯಲ್ಲಿ ಹಾಕಿದ್ದೇನೆ. 4 ದಿವಸವಾಯಿತು ಕೊಡುತ್ತಿಲ್ಲ, ಇವತ್ತು ಕೊಡಬೇಕು. ಹಡಗಲಿ ತಾಲ್ಲೂಕಿನಲ್ಲಿ ಲೂಟಿ ಆಗುತ್ತಿದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಮಾಡುತ್ತಿದ್ದೇರೆಂದು ಪತ್ರಿಕೆಯಲ್ಲಿಯೂ ಬಂದಿದೆ. ಜಿಲ್ಲಾ ಉಸ್ತುವಾರಿ ಸಚಿವರು ಇದರಲ್ಲಿ involve ಆಗಿದ್ದಾರೆಂದು ಬಂದಿದೆ.

ಶ್ರೀ ಪಿಳ್ಳ ಮುನಿಶಾಮಪ್ಪ:- ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಮರಳು ದಂಧೆ ಮತ್ತು ಕಲ್ಲು ದಂಧೆಯನ್ನು ವಿಶ್ವನಾಥಪುರ ಪೊಲೀಸ್ ಸ್ಟೇಶನ್ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಂತ್ರಿಗಳಿಗೆ ಚೇಂಜ್ ಮಾಡಬೇಕೆಂದು ಹಲವಾರು ಘಟನೆಗಳ ಬಗ್ಗೆ ಪೇಪರ್‌ನಲ್ಲಿ ಬಂದಿದೆ. ಇವತ್ತಿನವರೆಗೂ ವ್ಯವಸ್ಥೆ ಸರಿ ಆಗಿಲ್ಲ.

ಅಧ್ಯಕ್ಷರು:- ಅವೆಲ್ಲಾ ಗೃಹ ಇಲಾಖೆಯ ಮೇಲೆ ಚರ್ಚೆಗೆ ಬಂದಾಗ ವಿಸ್ತೃತವಾಗಿ ಹೇಳಿ. ಈಗ ಸೀಮಿತವಾದಂತಹ ಪ್ರಶ್ನೆ ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಗೃಹ ಸಚಿವರು ಇಬ್ಬರೂ ಇದ್ದಾರೆ. ಸ್ವಲ್ಪ

lapses ಅನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಇಂತಹ ಪ್ರಕರಣ ನಡೆದಾಗ ಹಿರಿಯ ಅಧಿಕಾರಿಗಳ ಸಭೆಯನ್ನು ಕರೆಯುತ್ತಾರೆ, ಸಭೆ ಕರೆದು ಅಧಿಕಾರಿಗಳಿಗೆ ಸ್ವಲ್ಪ ಕೋಪದಲ್ಲಿ ಬೈಯುತ್ತಾರೆ ಅಷ್ಟೆ. ಕೋಪದಿಂದ ಬೈದರೆ ಕೆಲಸ ಆಗುತ್ತದೆಯೇ? ಆಗುವುದಿಲ್ಲ. ಬರೀ ಬೈಯ್ದು ತಕ್ಷಣ ಕೆಲಸ ಆಗುವುದಿಲ್ಲ. ನಮ್ಮ ಹಿರಿಯ ಅಧಿಕಾರಿಗಳನ್ನು ನೀವು ಕರೆದು ಏನು ಸಭೆ ಮಾಡಿದ್ದೀರಿ, ಹಿರಿಯ ಅಧಿಕಾರಿಗಳು ಎಲ್ಲಿ ಹೋಗಿ field work ಮಾಡುತ್ತಾರೆ? Field work ಮಾಡುವವರ ಪರಿಸ್ಥಿತಿ ಏನು ಎಂದು Circle Inspector ರವರಿಗೆ ಗೊತ್ತಿರುತ್ತದೆ. ನಿಮಗೆ ಏನೋ ಒಂದು ಸಬೂಬು ಕೊಡುತ್ತಾರೆ. ಪೊಲೀಸ್ ಮಹಾನಿರ್ದೇಶಕರಿಗೆ ಏನಾದರೂ ಒಂದು ಮಾಹಿತಿ ಕೊಡಿ ಎಂದರೆ ನಮ್ಮ ಕಛೇರಿಯಲ್ಲಿ ಮಾಹಿತಿಯನ್ನೇ ಇಟ್ಟಿಕೊಂಡಿಲ್ಲವೆಂದು ಹೇಳಿದರೆ ಮತ್ತೆ ಅವರು ಈ ರಾಜ್ಯದಲ್ಲಿ ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ? ಮಹಿಳೆಯರ ಅಪಹರಣದ್ದು ಇರಬಹುದು, ಅತ್ಯಾಚಾರದ್ದು ಇರಬಹುದು, ಇವುಗಳ ಬಗ್ಗೆ ಪೊಲೀಸ್ ಮಹಾನಿರ್ದೇಶಕರವರ ಕಛೇರಿಯಲ್ಲಿ ಮಾಹಿತಿಯನ್ನೇ ಇಟ್ಟುಕೊಳ್ಳುವುದಿಲ್ಲವೆಂದರೆ ಪ್ರತಿನಿತ್ಯ ನಿಮಗೆ ಪ್ರತಿ ಠಾಣೆಯಿಂದ ಏನು ಸಂದೇಶಗಳು ಬರುತ್ತಿವೆ? ಕೆಲವು ನಿವೃತ್ತ ಅಧಿಕಾರಿಗಳ ಲಂಚದ ಬಗ್ಗೆ ಹೇಳಿದ್ದೆ. ಅದು ವಾಸ್ತವಾಂಶ ಇದೆ. ಆದರೆ ಈ ಸರ್ಕಾರದಿಂದ ಆಯಿತು ಎಂದು ಹೇಳುವುದಿಲ್ಲ.

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ, ಈಗ ನಿಮ್ಮ ಬಾಷಣದ.. . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ವ್ಯವಸ್ಥೆ ನಿರಂತರ, ಮಾನ್ಯ ಅಧ್ಯಕ್ಷರೆ ಒಂದೇ ಒಂದು ನಿಮಿಷ ಇವೆಲ್ಲಾ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಮತ್ತೆ ಗೃಹ ಇಲಾಖೆಗೆ ಸಂಬಂಧಿಸಿದಂತೆ ಚರ್ಚೆ ಬಂದಾಗ ನಾನು ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ ಎಂದು ಹೇಳುತ್ತಿದ್ದೇನೆ. ನಾನು ಏಕೆ ಹೇಳುತ್ತಿದ್ದೇನೆಂದರೆ, final ಆಗಿ ಕೆಲವು ನ್ಯೂನತೆಗಳು ಏನಿವೆ ಅದನ್ನು

ಸರಿಪಡಿಸಿಕೊಳ್ಳುವುದು ಒಂದು ಭಾಗ. ಇದಕ್ಕೆ solution ಏನಾಗಬೇಕೆಂಬುದು ಇನ್ನೊಂದು ಭಾಗ. ಅದಕ್ಕಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಮೊನ್ನೆ ಆ ಹೆಣ್ಣುಮಗಳನ್ನು ರಾತ್ರಿ ಏನು ಕಿಡ್ನಾಪ್ ಮಾಡಿದರು, ಆ ಹೆಣ್ಣುಮಗಳು ಪೊಲೀಸ್ ಕೇಸ್ ಕೊಟ್ಟಳು. ನನಗೆ ಗೊತ್ತಿಲ್ಲ. ನಾನು ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳ ಹತ್ತಿರ ತಗೆದುಕೊಂಡ ಮಾಹಿತಿ ಪ್ರಕಾರ, ಬೆಂಗಳೂರು ನಗರಕ್ಕೆ ಸೀಮಿತವಾಗಿ ಹೇಳುತ್ತಿದ್ದೇನೆ. ಹೊರಗಡೆಯದ್ದು ಹೇಳುತ್ತಿಲ್ಲ. ಅವರು ಏನು ಹೇಳುತ್ತಾರೆ ಎಂದರೆ, Police Inspector ರವರ ಹತ್ತಿರ ಏನಾದರೂ ಕೇಸ್ ತೆಗೆದುಕೊಂಡು ಬಂದರೆ, ಆ Inspector, ACP, ಗೆ DCP ಗೆ, DIG (Law & Order) ಗೆ, DIG (Crime) ಗೆ, IGP (Law & Order ಗೆ IGP (Admn.) ಗೆ and Commissioner ಗೆ ಇವರು ಇಷ್ಟೂ ಜನಕ್ಕೂ ಮಾಹಿತಿ ಕೊಟ್ಟು ನಂತರ ಅವರು ಏನು direction ಕೊಡುತ್ತಾರೆ ಅದರ ಮೇಲೆ FIR ಹಾಕಬೇಕಾಗುತ್ತದೆ ಎನ್ನುವ ಒಂದು ಸಿಸ್ಟಂ ಇಟ್ಟುಕೊಂಡಿದ್ದಾರೆ ಎಂದು ಯಾರೋ ಅಧಿಕಾರಿಗಳು ನನಗೆ ಹೆಳಿದರು, ನನಗೆ ಗೊತ್ತಿಲ್ಲ. ನನಗೆ ಯಾರೋ ಒಬ್ಬರು ಅಧಿಕಾರಿಗಳು ಈ ರೀತಿ ಸಿಸ್ಟಂ ಇದೆ, ಆ Inspector ರವರು 7–8 ಜನ ಹಿರಿಯ ಅಧಿಕಾರಿಗಳಿಗೆ ಮಾತನಾಡಿ, ವಿಷಯ ತಿಳಿಸಿ, ಅವರು ಕೇಸ್ ಯಾವ ರೀತಿ ಹಾಕಬೇಕು ಎನ್ನುವುದಕ್ಕೆ ಒಂದು ಗಂಟೆ ಸಮಯ ಹಿಡಿಯುತ್ತದೆ. ಈ ರೀತಿ ಸಿಸ್ಟಂ ಇದೆ ಎನ್ನುವುದನ್ನು ಯಾರೋ ಒಬ್ಬರು ಅಧಿಕಾರಿಗಳು ಹೇಳಿದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಈ ರೀತಿಯಾದಾಗ, ನನಗೆ ಗೊತ್ತಿಲ್ಲ. ಒಬ್ಬರು ಅಧಿಕಾರಿಗಳು ಹೇಳಿದ್ದು. ಈ ಪ್ರಕರಣ ನಡೆದಾಗ ಹಿರಿಯ ಅಧಿಕಾರಿಗಳು ಆ Inspector ರವರ ಜೊತೆ ಮಾತನಾಡಿದರು ಎಂದು ಮಾಧ್ಯಮದಲ್ಲಿ ಬರೆದಿದ್ದಾರೆ. ನನಗೆ ಗೊತ್ತಿಲ್ಲ. ಈಗ ಆ ಸಿಸ್ಟಂ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಆ Inspector ರವರ ಮೇಲೆ ಕೆಲವು ಹಿರಿಯ ಅಧಿಕಾರಿಗಳು ಒತ್ತಾಯ ಹಾಕಿ, ಯಾವ ಒಂದು clause ನಲ್ಲಿ ಕೇಸ್ ಹಾಕಬೇಕಾಗಿತ್ತು ಅದನ್ನು ಹಾಕುವುದರಲ್ಲಿ ತಡೆದರು ಎಂದು ಏನಿದೆ, ಆ ಮಾಧ್ಯಮಗಳಲ್ಲಿ ಬಂದಂತಹ ವಿಷಯದಲ್ಲಿ ಹಿರಿಯ ಅಧಿಕಾರಿಗಳು ಏನಾದರೂ influence ಮಾಡಿದ್ದರೆ, ಅದು ನಿಜವೇ ಆದರೆ

ಇವತ್ತು ನೀವು ಆ ರಫೀಕ್ ಎನ್ನುವ Inspector ರವರೊಬ್ಬರನ್ನೇ ಏನು suspend ಮಾಡಿದ್ದೀರಿ, ಇದರಲ್ಲಿ ಅವರೊಬ್ಬರೇ ತಪ್ಪಿತಸ್ಥರು ಅಲ್ಲ. ಇವತ್ತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಏನಿದ್ದಾರೆ, ಈ ವ್ಯವಸ್ಥೆಯೂ ಸೇರಿಕೊಂಡ ಹಾಗೆ ತಪ್ಪಿತಸ್ಥರಾಗಬೇಕಾಗುತ್ತದೆ ಎಂದು ಇವತ್ತು ಗೃಹಮಂತ್ರಿಯವರೂ ಆ ಸಮನಾದ ಪಾಲನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಹೇಳಲು ಬಯಸುತ್ತೇನೆ. ನಾನು ಏತಕ್ಕೆ ಈ ವಿಷಯ ತಂದಿದ್ದೇನೆ ಎಂದರೆ, ದಿವಂಗತ ಮಾನ್ಯ ಶ್ರೀ ವಿ.ಎಸ್. ಆಚಾರ್ಯರವರು ಯಾವ ಒಂದು ಪ್ರಕರಣದ ಬಗ್ಗೆ ಹೇಳಿದರು, ಇವತ್ತು ಈ ರಾಜ್ಯದಲ್ಲಿ ಬರೀ ಬಲಾತ್ಕಾರದ ಬಗ್ಗೆ ನಾವು ಮೂರು ದಿವಸದಿಂದ ಚರ್ಚೆ ಮಾಡುತ್ತಿದ್ದೇವೆ. ಆದರೆ ಈ ರಾಜ್ಯದಲ್ಲಿ, ಈ ದೇಶದಲ್ಲಿಯೇ ನಿರಂತರವಾಗಿ ಹೆಣ್ಣುಮಕ್ಕಳು ಕಾಣೆಯಾಗುತ್ತಿರುವಂಥದ್ದು, ಅಪಹರಣವಾಗುವಂಥದ್ದು ನಡೆಯುತ್ತಿದೆ, ಒಂದು ಪ್ರಕರಣವನ್ನು ನಾನು ಮಾಧ್ಯಮದಲ್ಲಿ ಗಮನಿಸಿದೆ, ಒಂದು 14 ವರ್ಷದ ಹೆಣ್ಣುಮಗು ಸ್ಕೂಲಿಗೆ ಹೋಗಬೇಕಾದರೆ, ಒಬ್ಬ ವಯಸ್ಸಾದಂತಹ ಮಹಿಳೆ ಆ ಹೆಣ್ಣುಮಗಳಿಗೆ ಚಾಕ್‌ಲೇಟ್ ಕೊಟ್ಟು ಅವಳಿಗೆ ಏನೋ ಮತ್ತು ಬರುವಂತೆ ಮಾಡಿ ಪ್ರಜ್ಞೆ ತಪ್ಪಿದ ಮೇಲೆ ಆ ಹೆಣ್ಣು ಮಗುವನ್ನು ಅಪಹರಣ ಮಾಡಿ trainನಲ್ಲಿ ಕರೆದುಕೊಂಡು ಹೋಗುತ್ತಾಳೆ. ಆದರೆ ಅವಳಿಗೆ trainನಲ್ಲಿ ಪ್ರಜ್ಞೆ ಬಂದ ಮೇಲೆ ಆ trainನಲ್ಲಿ ಪ್ರಯಾಣ ಮಾಡುತ್ತಿದ್ದ ಜನರ ಹಿನ್ನೆಲೆಯಲ್ಲಿ ನಾನು ಎಲ್ಲಿ ಸಿಕ್ಕಿಹಾಕಿಕೊಳ್ಳುತ್ತೇನೆ ಎಂದು ಹೆದರಿ ಆ ಮಗುವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗುತ್ತಾರೆ. ಇವತ್ತು ನಮ್ಮ ಪೊಲೀಸ್ ಅಧಿಕಾರಿಗಳೇ, ದೆಹಲಿಯ ಕೆಲವು ವೈಶ್ಯಾವಾಟಿಕೆ ನಡೆಸುವಂತಹ ಸ್ಥಳಗಳಿಗೆ ಹೋಗಿ 5–6 ಜನ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದಿರುವುದನ್ನು ಒಂದು ವಾರದ ಹಿಂದೆ ಪತ್ರಿಕೆಯಲ್ಲಿ ಗಮನಿಸಿದ್ದೇನೆ. ಇವತ್ತು ಈ ಪ್ರಕರಣಗಳನ್ನು ಮಾಡುವಂತಹ ಹಿನ್ನೆಲೆ ಏನು ಇಟ್ಟುಕೊಂಡಿದ್ದಾರೆ, ಹೆಣ್ಣುಮಕ್ಕಳಿಗೆ ಕೆಲಸ ಕೊಡಿಸುತ್ತೇವೆ ಎಂದೋ, ಇಲ್ಲ ಇವರಿಗೆ ಬೇರೆ ರೀತಿಯಲ್ಲಿ ನಿಮಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿ, ಪ್ರೀತಿಸಿ ಮದುವೆ ಆಗುತ್ತೇನೆ ಎಂದೋ, ಈ ರೀತಿ ಪ್ರಕರಣಗಳಲ್ಲಿ ಇವತ್ತು 50,000 ರೂ.ಗಳಿಗೆ ಒಂದು ಲಕ್ಷ ರೂ.ಗಳಿಗೆ

ಮುಂಬಯಿ, ದೆಹಲಿ, ಕಲ್ಕತ್ತಾಗೆ ಇವತ್ತು ಕರೆದುಕೊಂಡು ಹೋಗಿ ಮಾರುವಂತಹ ವ್ಯವಸ್ಥೆಗಳು ಏನಿದೆ, ಇಂತಹ ವ್ಯವಸ್ಥೆಗಳ ಬಗ್ಗೆ ನಮ್ಮ ಪೊಲೀಸ್ ಅಧಿಕಾರಿಗಳು ಎಷ್ಟರಮಟ್ಟಿಗೆ ಬಹಳ ಗಂಭೀರವಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಸತೀಶ್‌ರೆಡ್ಡಿ:– ಮಾನ್ಯ ಕುಮಾರಸ್ವಾಮಿಯವರೆ, ಒಂದು ನಿಮಿಷ. ಸಾರ್ ದಿನನಿತ್ಯ ಇಂತಹ ಪ್ರಕರಣಗಳ ಬಗ್ಗೆ ಎಲ್ಲಾ ಎಂ.ಎಲ್.ಎಗಳಿಗೆ compliant ಬರುತ್ತಿವೆ. ಏಕೆಂದರೆ major ಆಗಿರುವಂತಹ ಹೆಣ್ಣುಮಕ್ಕಳು ಪ್ರೀತಿಸಿ ಮದುವೆಯಾಗಿ ಎಲ್ಲೋ ಮೂರು ತಿಂಗಳು ಓಡಿಹೋಗುತ್ತಾರೆ. ಯಾರಾ ಕೈಗೂ ಸಿಗುವುದಿಲ್ಲ. ಪೊಲೀಸ್ ಆಗಲಿ, ಕೋರ್ಟ್ ಆಗಲಿ ಯಾರು ಹುಡುಕಿದರೂ ಸಿಗುವುದಿಲ್ಲ. ಅದಾದಮೇಲೆ ಬಂದು 15 ದಿನಕ್ಕೇ break-up ಆಗುತ್ತಾರೆ. ಅಂತಹವರಿಗೆ ಯಾವ ರೀತಿ ರಕ್ಷಣೆ? ಅವರಿಗಾದರೂ ಕಾನೂನಿನಲ್ಲಿ ಏನಾದರೂ ತರಬೇಕಾಗುತ್ತದೆ. At least, ಐದು ವರ್ಷ ಅವರ ಪೋಷಕರಿಗೂ ಆ ಮಕ್ಕಳು ಮಾತನಾಡಿಸುವ ಹಾಗೆ ಇಲ್ಲ. ಹೋದರೆ ಮತ್ತೆ ನಮ್ಮ ಮೇಲೆಯೇ ಗಲಾಟೆ ಮಾಡಿದರು ಎಂದು ಹೇಳುತ್ತಾರೆ. At least, police station ಗೋ ಅಥವಾ ಕೋರ್ಟ್‌ಗೋ ವರ್ಷಕ್ಕೆ ಒಂದು ಸಾರಿಯಾದರೂ ಅವರನ್ನು ಕರೆದು ಸರಿ ಇದ್ದಾರೋ ಇಲ್ಲವೋ, ಸರಿಯಿಲ್ಲವೆಂದರೆ ಅವರ ಮೇಲೆ ಕೇಸ್ ಹಾಕುವಂಥದ್ದಾದರೂ ಆಗಬೇಕಲ್ಲವೇ? ಇಲ್ಲವೆಂದರೆ ಹೆಣ್ಣುಮಕ್ಕಳು ಹೆತ್ತಿರುವ ತಂದೆ–ತಾಯಿಯವರ ಗತಿ ಏನಾಗಬೇಕು? ಇದರ ಬಗ್ಗೆ ಕಠಿಣವಾದಂತಹ ಕಾನೂನು ತರಬೇಕಾಗುತ್ತದೆ.

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ conclude ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವತ್ತು ಈ ಪ್ರಕರಣದಿಂದ ನಮ್ಮ ರಾಜ್ಯಕ್ಕೆ ಎಲ್ಲೋ ಒಂದು ಕಡೆ ಈ ರಾಜ್ಯದಲ್ಲಿ ಹೆಣ್ಣುಮಕ್ಕಳು ಬದುಕುವ ಹಾಗೆಯೇ ಇಲ್ಲವೋ, ಭಯಭೀತರಾಗಿ ಓಡಾಡಬೇಕು, ಮನೆಯಿಂದ ಹೊರಗಡೆ ಬರುವ ಹಾಗೆಯೇ ಇಲ್ಲವೋ ಎನ್ನುವ ವಾತಾವರಣ

ನಿರ್ಮಾಣವಾಗುತ್ತಿದೆ. ಅದಕ್ಕೆ ಇವತ್ತು ಈ ವಿಷಯವನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದಕ್ಕೆ ಬಯಸುವುದೇನೆಂದರೆ, ನೀವು ನಿಮ್ಮ ಅಧಿಕಾರಿಗಳನ್ನು ಕರೆದು ಅವರಿಗೆ ಬೆದರಿಕೆ ಹಾಕಿದರೆ ಉಪಯೋಗಕ್ಕೆ ಬರುವುದಿಲ್ಲ. ಇವತ್ತು ಯಾವ್ಯಾವ ರೀತಿಯ ಸತ್ಯಾಂಶದ ಪ್ರಕರಣಗಳು ನಡೆಯುತ್ತಿವೆ, ಅದನ್ನು ನಿಲ್ಲಿಸುವುದಕ್ಕೆ ಇದುವರೆಗೂ ಏನೇನು ಮಾಡಿದ್ದೇವೆ? ನಮ್ಮ ಅಧಿಕಾರಿಗಳು ಇಷ್ಟು ಜನ ಇದ್ದಾರೆ, ಒಬ್ಬೊಬ್ಬ ಅಧಿಕಾರಿಗಳು 5–6 vehicles ಇಟ್ಟಿಕೊಂಡಿರುತ್ತಾರೆ. ಇವತ್ತು Reserve ಪೊಲೀಸ್ ಇದ್ದಾರೆ. ನಿಮ್ಮ ಇಲಾಖೆಯಲ್ಲಿ ಸಿಬ್ಬಂದಿಗಳು ಇಲ್ಲ ಎಂದು ಹೇಳುತ್ತೀರಿ. Reserve Police ರವರನ್ನು regular duty ಗೆ ಹಾಕಿ ಅವರು ಕೆಲಸ ಮಾಡಲಿ. ಇವತ್ತು Reserve Police ರವರನ್ನು ತೆಗೆದುಕೊಂಡು ನಮ್ಮ ಹಿರಿಯ ಅಧಿಕಾರಿಗಳ ಮನೆ ಮುಂದೆಯೋ, ನಮ್ಮಗಳ ಮನೆಯ ಮುಂದೆಯೋ, 15–20 ಜನ ಕೆಲಸ ಮಾಡುವಂತಹ ಪರಿಸ್ಥಿತಿಯನ್ನು ನೋಡಿದ್ದೇವೆ. ಆ constables ಅನ್ನು duty ಮೇಲೆ ಹಾಕಿ. ಅವರನ್ನು ಉಪಯೋಗ ಮಾಡಿಕೊಳ್ಳಿ. Reserve Police ರವರಿಗೆ regular duty ಕೊಡಬಾರದು ಎಂದು ಏಕೆ ಕಾನೂನು ಮಾಡಿಕೊಂಡಿದ್ದೀರಿ? ನಾನು ಇದನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಕಾಣೆಯಾಗಿರುವ ಬಗ್ಗೆ ಹಿಂದೆ ಮಾನ್ಯ ಗೃಹಸಚಿವರು official ಆಗಿ ಹೇಳಿಕೆ ಕೊಟ್ಟಿದ್ದರು. ಆದರೆ ಇವತ್ತು ಕೇಸ್ ಆಗದೇ ಇರುವ ಪ್ರಕರಣಗಳು ಒಂದೊಂದು ವರ್ಷದಲ್ಲಿ 8,000, 9000 ಪ್ರಕರಣಗಳು ಆಗಿವೆ. ಅವರು ಎಲ್ಲಿ ಹೋಗಿದ್ದಾರೆ ಗೊತ್ತಿಲ್ಲ. ಗಂಡು–ಹೆಣ್ಣು ಇಬ್ಬರೂ ಊರು ಬಿಟ್ಟು ಹೋಗಿದ್ದಾರೆ ಎನ್ನುವ ಪ್ರಕರಣ ಏನು ಹೇಳುತ್ತಾರೆ, ಮಹಿಳಾ ಹಕ್ಕುಗಳ ಆಯೋಗದ ಅಧ್ಯಕ್ಷರೇ ಎಲ್ಲೋ ಒಂದು ಕಡೆ ಹೇಳುತ್ತಾರೆ, ಇವತ್ತು 60% ಬಾಲ್ಯ ವಿವಾಹ ಆಗುವಂತಹ ಮಕ್ಕಳ ಕಳ್ಳ ಸಾಗಾಣಿಕೆ ಇರಬಹುದು, ಪ್ರೀತಿಸಿ ಮದುವೆಯಾಗಿ ಹೋಗಿರುವವರದ್ದು ಏನಾಗಿದೆ ಎಂದರೆ, ಆ ಹುಡುಗರು ನಾಪತ್ತೆಯಾಗಿರುವುದು 5%. ಆದರೆ ಹೆಣ್ಣುಮಕ್ಕಳು ಕಾಣೆಯಾಗಿರುವಂಥವರು ಯಾರೂ ಬಂದಿಲ್ಲ. ಆ ರೀತಿಯ ಪ್ರಕರಣಗಳು ಈ ರಾಜ್ಯದಲ್ಲಿ ಇವತ್ತು ಏನು ನಡೆಯುತ್ತಿದೆ ಇದರ ಬಗ್ಗೆ ಏನು

ಕ್ರಮ ತೆಗೆದುಕೊಳ್ಳುತ್ತೀರಿ? ಬರೀ ರೇಪಿನ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಹೊರತು, . . .

ಅಧ್ಯಕ್ಷರು:– ನಿಮ್ಮ ಸಲಹೆ ಏನು ಎನ್ನುವುದನ್ನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಲಹೆ ಏನೆಂದರೆ, ಇವತ್ತು ಒಂದು ಕಡೆ ನಮ್ಮ ಪೊಲೀಸ್ ಅಧಿಕಾರಿಗಳಲ್ಲಿ ಆ ನಿಷ್ಕ್ರಿಯತೆಯನ್ನು ಏನು ಕಾಣುತ್ತೇವೆ, ಅವರು ಕೆಲಸ ಮಾಡುವಂತಹ ಅವರ duty ಏನಿದೆ, ಅದನ್ನು ಬಿಟ್ಟು ಬೇರೆಯದ್ದಕ್ಕೆ ನಾವು ರಾಜಕಾರಣಿಗಳು ಏನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ, ಇಲ್ಲಿ ಬೆಂಗಳೂರಿನಲ್ಲಿರುವಂತಹ ಅಧಿಕಾರಿಗಳು, ಬಹುಶಃ 100 ಕ್ಕೆ 80% land developer ಗಳ ಜೊತೆ ಸಂಪರ್ಕ ಇಟ್ಟುಕೊಂಡು land ವ್ಯವಹಾರ ಮಾಡುವಂಥವರು ಇಲ್ಲಿ ಇದ್ದಾರೆ. ಪೊಲೀಸ್ ಕಛೇರಿಗಳು Real estate ಕಛೇರಿಗಳಾಗಿವೆ. ಆ ರೀತಿ ಆಗಿರುವುದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ಹಲವಾರು ಜನ ಈ ರೀತಿ ಇದ್ದಾರೆ. ಇಲ್ಲಿ management ಬಗ್ಗೆ ಹೇಳಿದರು. ನನಗೆ ಗೊತ್ತಿಲ್ಲ. ಏಕೆಂದರೆ ನ್ಯಾಯಯುತವಾದಂತಹ ತನಿಖೆ ಆಗಬೇಕು. ಆ ಸ್ಕೂಲಿನ ವಿಷಯದಲ್ಲಿಯೂ ದೊಡ್ಡ ಪ್ರತಿಭಟನೆ ನಡೆದಿದೆ. ನನಗೆ ಕೆಲವರು ಹೇಳಿದರು, ನೀವು ಆ ಪ್ರತಿಭಟನೆ ನಡೆದಿರುವಂತಹ ಹಿನ್ನೆಲೆಯಲ್ಲಿ ನ್ಯಾಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದರು. ಆ ಮಗುವಿನ ಬಗ್ಗೆ ಮ್ಯಾನೇಜ್‌ಮೆಂಟ್‌ನವರು ಏನು ಹೇಳುತ್ತಾರೆಂದರೆ, Spastics Society of Karnataka, Center for developmental disabilities ಈ ಒಂದು ಸಂಸ್ಥೆಯಿಂದ ಆ ಮಗುವಿನ ಚಟುವಟಿಕೆಯ ಬಗ್ಗೆ report ಕೊಟ್ಟಿದ್ದಾರೆ. ನಾನು ಆ ಬಗ್ಗೆ ಸುದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಆ ಮಾಲೀಕರನ್ನು arrest ಮಾಡಬೇಕೆಂಬ ನಿರ್ಧಾರವನ್ನು ಸರ್ಕಾರವು ತೆಗೆದುಕೊಂಡಿದೆ, ಅವನು ಯಾರೋ ತಪ್ಪು ಮಾಡಿದ್ದಾನೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿ ತಪ್ಪಾಗಿದೆ, 10ನೇ ತಾರೀಖಿನ ದಿವಸ ಡಾಕ್ಟರ್ certificate ಅನ್ನು ಕೊಟ್ಟಿರುವ ಬಗ್ಗೆ ಮಾಹಿತಿ

ನನ್ನ ಹತ್ತಿರ ಇದೆ. ಸದನದಲ್ಲಿ ಚರ್ಚೆಯಾಗುವಾಗ ಈ ಬಗ್ಗೆ ಸತ್ಯಾಂಶವನ್ನು ಸದನದ ಮುಂದಿಡಬೇಕಾಗುತ್ತದೆ. ನೀವು ಆಮಾಯಕರನ್ನು ಇಂತಹ ಪ್ರಕರಣ ಎಂದು ಹೇಳಿಕೊಂಡು ಇವತ್ತು ಸರ್ಕಾರವು ಅವರನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಒಂದು ಗಾದೆ ಮಾತು ಇದೆ. "ಎತ್ತು ಈದಿದೆ ಎಂದರೆ ಎತ್ತಿಕೊಂಡು ಹೋಗಿ ಕೊಟ್ಟಿಗೆಗೆ ಕಟ್ಟು" ಎಂದು ಗಾದೆ ಮಾತು ಇದೆ. ಈ ಪ್ರಕರಣದಲ್ಲಿ ಇವರು ಕೆಟ್ಟ ಹೆಸರು ತೆಗೆದುಕೊಳ್ಳುವುದಕ್ಕೆ ಇವತ್ತು ಪ್ರತಿಭಟನೆಯ ಆಕ್ರೋಶವನ್ನು ಎದುರಿಸುವಂತಹ ವಿಷಯದಲ್ಲಿ ಇಂತಹ ಪ್ರಕರಣದಲ್ಲಿ ಯಾರೋ ನಾಲ್ಕು ಜನರನ್ನು ಕರೆದುಕೊಂಡು ಬಂದು ದಬ್ಬಿಬಿಡಿ ಆಮೇಲೆ ನೋಡಿಕೊಳ್ಳೋಣವೆಂದು ಇಲ್ಲಿ ಆ ವಾತಾವರಣವು ನಿರ್ಮಾಣವಾಗಬಾರದು. ಇವತ್ತು ಪೊಲೀಸ್ ಇಲಾಖೆಯಲ್ಲಿ ಹಲವಾರು ಕಾನೂನುಗಳಿವೆ ಎಂದು ಸರ್ಕಾರವು ಹೇಳಿದೆ. ಗೂಂಡಾ Actನಲ್ಲಿ ಇಂತಹ ಪ್ರಕರಣದಲ್ಲಿ arrest ಮಾಡಬೇಕೆಂದು ಇದೆ. ಇವತ್ತು ಗೂಂಡಾ Act ನಲ್ಲಿ arrest ಮಾಡಿದರೂ ಕೂಡ ಅವರು ನ್ಯಾಯಾಲಯಗಳಿಂದ ಯಾವ ರೀತಿಯಾಗಿ ಬಿಡುಗಡೆ ಮಾಡಿಕೊಂಡು ಬರಬಹುದು ಎಂದು ಆ ತರಹದ ಚಾಣಿಕ್ಯತನವನ್ನು ಸಹ ಇಟ್ಟುಕೊಂಡಿದ್ದಾರೆ. ಇವತ್ತು ನಮ್ಮಲ್ಲಿರತಕ್ಕಂತಹ ಕಾನೂನಿನ ವ್ಯವಸ್ಥೆಯಲ್ಲಿ ಈಗ ಎಷ್ಟು ಜನ murder ಮಾಡಿದವರು ಇವರೇ ಹೋಗಿ......

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ತಾವು ಗೃಹ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಈ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈಗ ಈ ಬಗ್ಗೆ ಮಾತನಾಡಿ ಮುಗಿಸಿಬಿಡುತ್ತೇನೆ. ಮತ್ತೆ ಈ ಬಗ್ಗೆ ಚರ್ಚೆ ಮಾಡುವುದಿಲ್ಲ ವಾಸ್ತಾವಾಂಶವನ್ನು ಹೇಳುತ್ತಿದ್ದೇನೆ. ಸ್ಕೂಲ್‌ನ ವಿಷಯದಲ್ಲಿಯೂ ಸತ್ಯಾಂಶ ಏನಿದೆ ಅದನ್ನು ಸರ್ಕಾರವು ಧೈರ್ಯವಾಗಿ ಎದುರಿಸಬೇಕು. ಅಲ್ಲಿ ಏನು ನಡೆದಿದೆ ಆ ಸತ್ಯಾಂಶವನ್ನು ತಿಳಿಸಿ. ಈ ಬಗ್ಗೆ ನನಗೆ ಇರುವಂತಹ

ಮಾಹಿತಿಯ ಪ್ರಕಾರ ಎಲ್ಲೋ ಒಂದು ಕಡೆಯಲ್ಲಿ ಸರ್ಕಾರವು ಜನರ ಪ್ರತಿಭಟನೆ ಮತ್ತು ಅದರಿಂದ ರಕ್ಷಣೆ ಪಡೆದುಕೊಳ್ಳುವುದಕ್ಕೆ ನಮ್ಮ ಅಧಿಕಾರಿಗಳು ಎಲ್ಲೋ ಒಂದು ಕಡೆಯಲ್ಲಿ ದಾರಿ ತಪ್ಪುತ್ತಿದ್ದಾರೆ. ಈ ಬಗ್ಗೆ ಸತ್ಯಾಂಶ ಏನಿದೆ ಅದನ್ನು ಧೈರ್ಯವಾಗಿ ಜನರ ಮುಂದಿಡಬೇಕು. ಸರ್ಕಾರವು ಏನೋ ಸಿಸಿ ಟಿವಿಯ ಬಗ್ಗೆ ಹೇಳುತ್ತಾರೆ. ಸಿಸಿ ಟಿವಿಯಲ್ಲಿ ಪ್ರತಿಯೊಂದು record ಇದೆ. 2ನೇ ತಾರೀಖು ಮಗುವಿಗೆ ತೊಂದರೆ ಕೊಟ್ಟಿದ್ದಾರೆ, ಅಕ್ರಮ ಮಾಡಿದ್ದಾರೆಂದು ಒಂದು ಸಲ ಇವರು ಹೇಳಿದ್ದಾರೆ. ಮತ್ತೆ ಈ ಬಗ್ಗೆ 3ನೇ ತಾರೀಖು ಎಂದಾಯಿತು. ಇವರು Doctor Certificate ಅನ್ನು 10ನೇ ತಾರೀಖುನಂದು ತೆಗೆದುಕೊಂಡು ಬಂದಿದ್ದಾರೆ. But ಆ ಮಗುವಿನ activities ಬಗ್ಗೆ ಇವತ್ತು ಬೇರೆ ರೀತಿಯ ವರದಿಗಳಿವೆ. ಆ ಸ್ಕೂಲ್‌ನಲ್ಲಿ Dark room ಇಲ್ಲವೆಂದು ಹೇಳುತ್ತಾರೆ. Dark roomನಲ್ಲಿ ಕೂಡ ಹಾಕಿ ಹಿಂಸೆ ಕೊಟ್ಟರು ಇವೆಲ್ಲವು ಏನಿದೆ ಇಲ್ಲಿ ಸಾರ್ವಜನಿಕರ ಪ್ರತಿಭಟನೆಯ ಹಿನ್ನೆಲೆಯೊಳಗಡೆ ನಮಗೆ ಏಕಪ್ಪಾ ಬೇಕು ಕರ್ಮ ಯಾರೋ ನಾಲ್ಕು ಜನರನ್ನು ದಬ್ಬಿಬಿಡೋಣ ಎಂದು ಹೇಳಿ ಇವತ್ತು ಆ ರೀತಿಯಾಗಿ ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಈ ವಿಷಯವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ನಾನು ಹಿಂದಿನದಕ್ಕೆ ಹೋಗುತ್ತಿಲ್ಲ ಆ ಪ್ರಕರಣದಲ್ಲಿ ಸತ್ಯಾಂಶ ಏನಿದೆ ನಾನು ಈ ಬಗ್ಗೆ ಮಾಹಿತಿಯನ್ನು ಸದನಕ್ಕೆ ಕೊಡುತ್ತೇನೆ. ಇಲ್ಲಿ ಆ ಮಗುವಿನ ತಾಯಿ ಏನು ಬರೆದುಕೊಟ್ಟಿದ್ದಾರೆ. ಯಾವುದೋ ಒಂದು Centre for developmental disabilities ಅವರು ಆ ಮಗುವಿನ ಬಗ್ಗೆ ಏನು report ಕೊಟ್ಟಿದ್ದಾರಲ್ಲಾ. ಆ ಮಗುವನ್ನು ಒಬ್ಬರು Shadow Teacher ಜೊತೆಯಲ್ಲಿ regular ಆಗಿ ಕಳುಹಿಸುತ್ತಿದ್ದರು. ಒಂದು ದಿವಸ ಅವರು ಬಂದಿಲ್ಲ, ಅವರು ಎಲ್ಲಿಗೆ ಹೋಗಿದ್ದಾರೆಂದು ಸಹ ಗೊತ್ತಿಲ್ಲ. ಈ ಪ್ರಕರಣ ಆದ ಮೇಲೆ Shadow Teacher ಸುಮಾರು 10 ದಿವಸಗಳಿಂದ ಪತ್ತೆ ಇಲ್ಲ. ನೀವು ಅವರನ್ನು ಹುಡುಕಿದ್ದೀರಾ? ಅವರಿಂದ ನೀವು ಮಾಹಿತಿಯನ್ನು ತೆಗೆದುಕೊಂಡಿದ್ದೀರಾ? ಇವೆಲ್ಲವೂ ಇದರಲ್ಲಿ ಇದೆ. ಈ ಪ್ರಕಣವು ಬೆಂಗಳೂರು ನಗರದಲ್ಲಿ ನಡೆದಿರುವುದರಿಂದ ದೊಡ್ಡ ಪ್ರಚಾರ

ಸಿಕ್ಕಿತು. ಹಳ್ಳಿಯಲ್ಲಿ ಪ್ರತಿನಿತ್ಯವು ಇವತ್ತು ಏನು ನಡೆಯುತ್ತಿದೆ, ಅವರಿಗೆ ಯಾರು ರಕ್ಷಣೆ ಕೊಡುವವರು ಇಲ್ಲ. ರಾಮನಗರದಲ್ಲಿ ಒಂದು ಘಟನೆ ನಡೆಯಿತು. ಸೋಮನಹಳ್ಳಿಯ ಹೆಣ್ಣುಮಗುವಿಗೆ ದೆವ್ವ ಬಿಡಿಸುತ್ತೇವೆಂದು ಹೇಳಿ ಅಲ್ಲಿ ಒಂದು ಘಟನೆಯಾಗಿದೆ. ಅದು ಪ್ರಚಾರ ಪಡೆಯಲಿಲ್ಲ. ಆದರೆ ಈ ಬೆಂಗಳೂರಿನಲ್ಲಿ ಘಟನೆ ನಡೆದ ತಕ್ಷಣವೆ ಜನಗಳಲ್ಲಿ ಏನು awareness ಬಂದಿದೆ ಇದು ಒಳ್ಳೆಯದು. ಜನರು ಈ ರೀತಿಯಾಗಿ ಪ್ರತಿಭಟನೆಗೆ ಇಳಿದಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇವತ್ತು ಈ ಪ್ರಕರಣದ ಬಗ್ಗೆ ಈ ಸ್ಕೂಲ್‌ಗಳ ಬಗ್ಗೆ ನಿಯಮಾವಳಿ ಮಾಡುವ ಬಗ್ಗೆ ತೀರ್ಮಾನ ಕೊಟ್ಟಿದ್ದೀರಿ. ನನ್ನ ಹತ್ತಿರ ಯಾರೋ ಒಂದು ನಿಯಮಾವಳಿ ಬಗ್ಗೆ ಸ್ಕೂಲ್‌ಗಳಲ್ಲಿ ಸಿಸಿ ಟಿವಿ ಇಡುವ ಬಗ್ಗೆ ಹೇಳಿದರು. ಈ ಹಿಂದೆ 2005ರಲ್ಲಿ ಈ ಸಂಬಂಧ ಒಂದು ಕಮಿಟಿಯನ್ನು ಮಾಡಿದ್ದೀರಿ. ಕರ್ನಾಟಕ ಸರ್ಕಾರದಿಂದ ಪ್ರತಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಹೆಣ್ಣುಮಕ್ಕಳ ಮಾರಾಟ ಮತ್ತು ದೌರ್ಜನ್ಯ ತಡೆಯುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ನಂತರ 28ನೇ ಮೇ 2007ರಲ್ಲಿ ಚುನಾಯಿತಿ ಪ್ರತಿನಿಧಿಗಳ ಮುಖಂಡತ್ವದಲ್ಲಿ ಈ ಸಮಿತಿಗಳನ್ನು ಪುನರ್ ರಚಿಸಬೇಕೆಂದು ಆದೇಶ ಮಾಡಿದ್ದರು. 2005ರಲ್ಲಿ ಸರಿಯಾಗಿ effectಗೆ ಬರಲಿಲ್ಲವೆಂದು ಮತ್ತೆ modification ಮಾಡಿ 2007ರಲ್ಲಿ ಚುನಾಯಿತ ಪ್ರತಿನಿಧಿಗಳ ಮುಖಂಡತ್ವದಲ್ಲಿ ಈ ಸಮಿತಿಗಳನ್ನು ಪುನರ್‌ರಚಿಸಬೇಕೆಂಬ ಆದೇಶವನ್ನು ಜಾರಿಯಾಗಿದೆ. ಈ ಒಂದು ಚುನಾಯಿತ ಪ್ರತಿನಿಧಿಗಳ ಸಮಿತಿ ಮೂರು ತಿಂಗಳಿಗೆ ಒಂದು ಬಾರಿ ಸಭೆ ಸೇರಬೇಕು. ಇದರ ಬಗ್ಗೆ ಸುತ್ತಮುತ್ತ surroundingsನಲ್ಲಿರುವಂತಹ ಅಲ್ಲಿ ಏನೇನು ಘಟನೆಗಳು ನಡೆಯುತ್ತಿದೆ ಅದನ್ನು ತಡೆಯುವ ಸಂಬಂಧ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಪರಾಮರ್ಶೆ ಮಾಡುವ ಸಂಬಂಧ ಸಮಿತಿ ರಚನೆಯಾಯಿತು. ಆದರೆ ಯಾವ ಸಮಿತಿಗಳು ಜನಪ್ರತಿನಿಧಿಗಳ ಸಮೇತ ಕೂಡ ಸರಿಯಾಗಿ ಕೆಲಸ ಮಾಡಲಿಲ್ಲ.

ಅಧ್ಯಕ್ಷರು:– ಈ ಬಗ್ಗೆ paperನಲ್ಲಿ ಇದೆಯಲ್ಲಾ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇದೆ. ಈ ಬಗ್ಗೆ ಸರ್ಕಾರದಿಂದಲೇ ಆದೇಶವನ್ನು ಹೊರಡಿಸಿರುವುದು. ಇವತ್ತು ಕಾನೂನುಗಳನ್ನು ನಾವು ಏನು ಮಾಡುತ್ತೇವೆ, ಅದನ್ನು implement ಮಾಡುವುದರಲ್ಲಿ ನಾವು ಇವತ್ತು ಎಲ್ಲೋ ಒಂದು ಕಡೆಯಲ್ಲಿ ಎಡವುತಿದ್ದೇವೆ. ಮೊನ್ನೆ ಯಾರೋ ಡಾ|| ಗಾಯತ್ರಿದೇವಿ ಎಂಬ ಒಬ್ಬರು ಪ್ರಿನ್ಸಿಪಾಲರು ಬಂದಿದ್ದರು, ಅವರು research ಮಾಡಿ ಯಾವುದೋ ಒಂದು Global mobile for student safety ಎಂದು ಒಂದು equipment ಕಂಡು ಹಿಡಿದಿದ್ದೇವೆಂದು ಹೇಳಿದರು. ಆ ಹೆಣ್ಣು ಮಗು ಏನಾದರೂ ತೊಂದರೆಗೆ ಒಳಗಾದರೆ ಅದರಲ್ಲಿರುವ beep sound button press ಮಾಡಿದರೆ ಅದು ಅವರ ತಂದೆ ತಾಯಿಗಳಿಗೆ ಮತ್ತು ಪ್ರಿನ್ಸಿಪಾಲರಿಗೆ mobileನಲ್ಲಿ message ಹೋಗತಕ್ಕಂತಹ device ಒಂದನ್ನು ಮಾಡಿದ್ದೇನೆಂದು ಹೇಳುತ್ತಿದ್ದರು. ಇದನ್ನು mobile ಅಥವಾ watchನಲ್ಲಿಯಾದರೂ ಮಾಡಬಹುದು ಎಂದು ಅವರು ಹೇಳುತ್ತಿದ್ದರು. ಇವತ್ತಿನದಿವಸ ಮಾನ್ಯ ಸದಸ್ಯರಾದ ಶ್ರೀಮತಿ ಶಕುಂತಲಾಶೆಟ್ಟಿಯವರು ಮೊನ್ನೆ ದಿನ ಸ್ಕೂಲ್ ಮಕ್ಕಳಿಗೆ mobile phone ಕೊಡುವ ಬಗ್ಗೆ ನಿಷೇಧ ಮಾಡಿ ಎಂದು ಹೇಳಿದರು. ಡಾ|| ಗಾಯತ್ರಿ ದೇವಿಯವರು ಮೊನ್ನೆ ದಿನ ಬಂದು ನನ್ನನ್ನು ಭೇಟಿಯಾಗಿ ಆ ಮಕ್ಕಳಿಗೆ ಸರ್ಕಾರದಿಂದಲೇ ಒಂದು subsidy amountಅನ್ನು fix ಮಾಡಿ ಒಂದು device ಅನ್ನು ಪ್ರತಿಯೊಂದು ಶಾಲಾ ಮಕ್ಕಳಿಗೆ ಕೊಡುವಂತಹ ವ್ಯವಸ್ಥೆ ತನ್ನಿ ಎಂದು ಹೇಳುತ್ತಾರೆ.

ಅಧ್ಯಕ್ಷರು:- ಇದನ್ನು supply ಮಾಡುವವರು ಯಾರು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈ ಬಗ್ಗೆ ಗೊತ್ತಾದ ತಕ್ಷಣ marketನಲ್ಲಿ 24 hoursನಲ್ಲಿ ready ಮಾಡಿಕೊಡುತ್ತಾರೆ. ಸರ್ಕಾರವು ಇದನ್ನು ಕೊಡುತ್ತದೆ ಎಂದು ತೀರ್ಮಾನ ಮಾಡಿದ ತಕ್ಷಣ ದುಡ್ಡು ಸಿಗುತ್ತದೆ ಎಂದು 24 hours ನಲ್ಲಿ marketನಲ್ಲಿ ತರುವವರು ಬಹಳ ಜನರು ಇದ್ದಾರೆ. ಹಳ್ಳಿಯಲ್ಲಿರುವ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. ಇಲ್ಲಿ ವರ್ಗಾವಣೆಯಲ್ಲಿ

ನಿವೃತ್ತ ಅಧಿಕಾರಿಗಳು ಹೇಳಿದ್ದರಲ್ಲಾ, ಇವರುಗಳು ಅಧಿಕಾರದಲ್ಲಿದ್ದಾಗ ಈ ಬಗ್ಗೆ ಹೇಳುವ ಧೈರ್ಯ ಮಾಡುವುದಿಲ್ಲ. ಇವರು ಅಧಿಕಾರ ಬಿಟ್ಟ ತಕ್ಷಣ ಈ ಬಗ್ಗೆ ಹೇಳುತ್ತಾರೆ. ಒಂದು postingಗೆ 50,000.00 ದಿಂದ 2 ಕೋಟಿಯವರೆಗೆ ಹಿರಿಯ ಅಧಿಕಾರಿಗಳು ಕೊಡುತ್ತಾರೆಂದು ಹೇಳುತ್ತಾರೆ. ಈ ತರಹ ಆಗುತ್ತಿದೆ ಎಂದು ಅಧಿಕಾರದಲ್ಲಿದ್ದಾಗ ಏತಕ್ಕಾಗಿ protest ಮಾಡುವುದಿಲ್ಲ? ಇವತ್ತು ಏತಕ್ಕಾಗಿ ಈ ಮಾತುಗಳನ್ನು ಹೇಳುತ್ತಾರೆ? ಇದು ಈ ರೀತಿಯಾಗಿ ನಡೆಯುತ್ತಿದೆ. ನಮ್ಮ ಪೊಲೀಸ್ ಅಧಿಕಾರಿಗಳಿಗೂ ರಾಜಕೀಯ ಒತ್ತಡಗಳು ಅವರ ಮೇಲೆ ಬರದೆ ಇರುವಂತಹ ರೀತಿಯಲ್ಲಿ ಒಂದು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಿ. ಕೆಲವೊಂದು ವಿಷಯದಲ್ಲಿ ಕಾನೂನನ್ನು ಮಾಡುವುದು ಏನಿದೆ, ನಿಮ್ಮ ಪೊಲೀಸ್ ಅಧಿಕಾರಿಗಳು ಮರಳು ದಂಧೆ ಮಾಡುವವರನ್ನು ಹಿಡಿಯುವುದಕ್ಕೆ ಹೋಗುವುದು, ರಸ್ತೆಯಲ್ಲಿ ಕುಡಿದು ಬಂದವರನ್ನು ಚೆಕ್ ಮಾಡುವುದಕ್ಕೆ ಹೋಗುವುದು ಈ ಕೆಲಸವನ್ನು ಮೊದಲು ಬಿಡಿಸಬೇಕು. ಮೊದಲು ಜನರ ರಕ್ಷಣೆ ಮಾಡುವಂತಹ ರೀತಿಯಲ್ಲಿ ಕೆಲಸ ಯಾವ ರೀತಿಯಾಗಿ ನಿರ್ವಹಿಸಬೇಕು ಅವರಿಗೆ strict ಆಗಿ ಹೇಳಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಈ ವಿಷಯದಲ್ಲಿ ಸರ್ಕಾರವು ಎಲ್ಲೋ ಒಂದು ಕಡೆಯಲ್ಲಿ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿದೆ. ಕಳೆದ 6–7 ತಿಂಗಳಿಂದ ಹಲವಾರು ವಿಷಯಗಳನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತು ಈ ಒಂದು ಬೇಜವಾಬ್ದಾರಿತನ ಏನಿದೆ, ಇವತ್ತು ನಿಮ್ಮ ಮುಂದೆ ಹಲವಾರು ಮಾಹಿತಿ ಇದ್ದರೂ ಕೂಡ ಇವತ್ತು ಸರ್ಕಾರದಲ್ಲಿ implementation ಮಾಡುವುದರಲ್ಲಿ ಎಡವಿದ್ದೀರಿ. ಇದಕ್ಕೆ ಸಂಬಂಧಿಸಿದಂತೆ ನಾನು ರಾಜೀನಾಮೆ ಕೇಳಬಹುದು, ಇಲ್ಲಿರುವಂತಹ ಮಾಹಿತಿ ನೋಡಿದರೆ ಗೃಹ ಸಚಿವರಾದ ಶ್ರೀ ಕೆ.ಜೆ. ಜಾರ್ಜ್‌ರವರು ರಾಜೀನಾಮೆ ಕೊಟ್ಟತಕ್ಷಣ ಮತ್ತೆ ಇನ್ಯಾರೋ ಬಂದ ತಕ್ಷಣ ಇದು ನಿಲ್ಲುತ್ತದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ದೇಶದ್ದು ಮತ್ತು ವಿಧೇಶದ್ದು ಸೌದಿ ಅರೇಬಿಯಾ country ನೋಡಿದರೆ ಅವರಲ್ಲಿರುವಂತಹ ಕಠಿಣವಾದಂತಹ ತೀರ್ಮಾನದಿಂದ ಅಲ್ಲಿಯೂ ಪ್ರಕರಣಗಳು ಇದೆ. ಸೌದಿ

ಅರೇಬಿಯಾ ಹಾಗೂ 7–8 ದೇಶದ ಮಾಹಿತಿಯನ್ನು ಸಹ ನಾನು ತರಿಸಿಕೊಂಡಿದ್ದೇನೆ. ಒಂದು ವರ್ಷಕ್ಕೆ 5–10 ಪ್ರಕರಣಗಳು ನಡೆಯುತ್ತವೆ. ಆದರೆ ಇಲ್ಲಿ ಯಾವುದೇ ರೀತಿಯ ಕಾನೂನುಗಳು ಇದ್ದರು ಈ ಇಲಾಖೆಯಲ್ಲಿ ಯಾವುದೇ ಭೀತಿ ಇಲ್ಲದೆ ಇಂತಹ ದೌರ್ಜನ್ಯ ನಡೆಸುವುದು ಏನಿದೆ ಇದರ ಬಗ್ಗೆ ನಮ್ಮ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ, ಸಾರ್ವಜನಿಕ ರಕ್ಷಣೆಗೆ ಹೆಚ್ಚಿನ ಸಮಯ ವಿನಿಯೋಗವಾಗುವುದಕ್ಕೆ ಅವರಿಗೆ ಅವಕಾಶ ಕೊಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅರವಿಂದ್ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು:– ಎರಡನೇ ಹೆಸರು ಇವರದೇ ಇದೆ, ಈಗ ಹೆಚ್ಚು ಕಡಿಮೆ ಒಂದು ಗಂಟೆ ಊಟದ ಸಮಯವಾಯಿತು.

ಶ್ರೀ ಎನ್. ಚೆಲುವರಾಯಸ್ವಾಮಿ:– ಅಧ್ಯಕ್ಷರೆ ನನಗೆ ಮಾತನಾಡಲಿಕ್ಕೆ ಅವಕಾಶ ಕೊಡುವಿರಾ, ಅವರಿಗೆ ಕೊಡುವಿರಾ ಹೇಳಿಬಿಡಿ.

ಶ್ರೀ ಅರವಿಂದ್ ಲಿಂಬಾವಳಿ:– ನಾನು ಈ ವಿಷಯದ ಬಗ್ಗೆ 15ನೇ ತಾರೀಖಿನಿಂದ ಪ್ರಸ್ತಾಪ ಮಾಡುತ್ತಲೇ ಇದ್ದೇನೆ ಅಧ್ಯಕ್ಷರೆ,

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವತ್ತು ರಾಜ್ಯದಲ್ಲಿ ಯಾವರೀತಿ ಇದೆ ಎನ್ನುವುದಕ್ಕೆ ..

ಅಧ್ಯಕ್ಷರು:– ಸಾಕು, ಬೇಡ, ಕುಮಾರಸ್ವಾಮಿಯವರೆ ಸಾಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಮ್ಮ ಸ್ನೇಹಿತರುಗಳಿಗೆ ಹೇಳುತ್ತೇನೆ. ಒಂದು ನಿಮಿಷ, ರಾಮಸೇತು ವಿಷಯದಲ್ಲಿ ಕೇಂದ್ರ ಸರ್ಕಾರ ಏನೋ ಒಂದು ತೀರ್ಮಾನ ಮಾಡಲಿಕ್ಕೆ ಹೋದಾಗ ಬೆಂಗಳೂರಿನಲ್ಲಿ ಕೆಲವು ಸಂಘಟನೆಗಳು ಮಡಿವಾಳದ ಹತ್ತಿರ ಒಂದು ಬಸ್ಸಿಗೆ ಬೆಂಕಿ ಇಟ್ಟರು. ಅದರಲ್ಲಿ ಮೂರು ಜನ ಸಜೀವವಾಗಿ ದಹನವಾಗಿ ಹೋದರು. ಆದರೆ ಆ ಸಾಕ್ಷಿಗಳನ್ನು ಯಾವ ರೀತಿ

suppress ಮಾಡಿ ಅದರಲ್ಲಿ ಆ ಮೂರು ಜನರನ್ನು ಸಜೀವ ದಹನ ಮಾಡಿದಂಥವರಿಗೆ ರಕ್ಷಣೆ ಕೊಟ್ಟರು, Higher Court ಗೆ ಏಕೆ ಹೋಗಲಿಲ್ಲ. ಇಂಥ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡಿರುವುದರಿಂದ ಈ ಅಧಿಕಾರಿಗಳು ಈ ಮಟ್ಟಕ್ಕೆ ಕೆಲಸ ಮಾಡುತ್ತಿರುವುದು. ಈ ಮಾಹಿತಿಯನ್ನು ತಮಗೆ ಕೊಡುತ್ತೇನೆ, ನೀವು ನೋಡಬೇಕು.

ಅಧ್ಯಕ್ಷರು:– ಆಯಿತು, ಆಮೇಲೆ ಕೊಡಿ.

ಶ್ರೀ ಅರವಿಂದ್ ಲಿಂಬಾವಳಿ:– ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ ಅದ್ಯಕ್ಷರೆ.

ಅಧ್ಯಕ್ಷರು:– ಲಿಂಬಾವಳಿಯವರೇ ಈಗ ಮುಖ್ಯವಾಗಿ ಜಗದೀಶ್ ಶೆಟ್ಟರ್, ಕುಮಾರಸ್ವಾಮಿಯವರು ವಿಸ್ತಾರವಾಗಿ ಇದರ ಬಗ್ಗೆ ಹೇಳಿದ್ದಾರೆ. ಈಗ just ನೀವು ಅದಕ್ಕೆ ಒಗ್ಗರಣೆ ಕೊಡುವುದು ಅಷ್ಟೇನೆ. ಬಿಟ್ಟುಹೋಗಿರುವ ವಿಚಾರಗಳನ್ನು ಹೇಳಿಬಿಡಿ, ಅಷ್ಟು ಮಾಡಿ.

ಶ್ರೀ ಅರವಿಂದ್ ಲಿಂಬಾವಳಿ (ಮಹದೇವಪುರ):– ಮಾನ್ಯ ಅಧ್ಯಕ್ಷರೆ, ಕಳೆದ ಮೂರ್‍ನಾಲ್ಕು ದಿವಸಗಳಿಂದ ಈ ವಿಷಯ ಸದನದಲ್ಲಿ ಚರ್ಚೆಯಾಗುತ್ತಿದೆ. ಮಾನ್ಯ ಸುರೇಶ್ ಕುಮಾರ್‌ರವರು ನಮ್ಮ ಗೃಹ ಇಲಾಖೆ ಸಮಾಜಘಾತಕ ಶಕ್ತಿಗಳಿಗೆ ಸಿಂಹಸ್ವಪ್ನವಾಗಬೇಕು, ನಾಗರೀಕ ಸಮಾಜಕ್ಕೆ ರಕ್ಷಣೆ ಸಿಗಬೇಕು. ನಿರ್ಭೀತಿಯಿಂದ ಬದುಕಬೇಕು ಎನ್ನುವಂಥ ವಾತಾವರಣ ನಿರ್ಮಾಣವಾಗಬೇಕು ಎಂದು ಹೇಳಿದ್ದರು. ಆದರೆ ವಾತಾವರಣ ಉಲ್ಟಾ ಆಗುತ್ತಿದೆ, ಇದು vise-versa ಆಗುತ್ತಿದೆ. ಅಮೆರಿಕಾದಲ್ಲಿ ಇದಕ್ಕೆ Department of Corrections ಎಂದು ಕರೆಯುತ್ತಾರೆ. ಅವರು ಮಾಡಿರುವ ತಪ್ಪುಗಳನ್ನು ತಿದ್ದಬೇಕೆನ್ನುವ ಉದ್ದೇಶದಿಂದ ಆ ರೀತಿ ಕರೆಯುತ್ತಾರೆ.

ಅಧ್ಯಕ್ಷರು:– ಸ್ವಾಮಿ, ಅಮೆರಿಕಾದಲ್ಲಿರುವ ಸಮಾಜದ ವ್ಯವಸ್ಥೆಗೂ ನಮ್ಮ ಸಮಾಜದ ವ್ಯವಸ್ಥೆಗೂ ವ್ಯತ್ಯಾಸವಿದೆ. ಇಲ್ಲೇನು ಮಾಡಬೇಕು ಈಗ ಅದನ್ನು ಹೇಳಿ.

ಶ್ರೀ ಅರವಿಂದ್ ಲಿಂಬಾವಳಿ:– ಅದಕ್ಕೆ ಬರುತ್ತಿದ್ದೇನೆ.

ಅಧ್ಯಕ್ಷರು:– ಇವರನ್ನೆಲ್ಲಾ ಅಲ್ಲಿಗೆ ಕಳುಹಿಸಬೇಕೆ?

ಶ್ರೀ ಅರವಿಂದ್ ಲಿಂಬಾವಳಿ:– ಅಧ್ಯಕ್ಷರೆ, ನಾನು ಹೇಳುವುದಕ್ಕೆ ಅವಕಾಶ ಕೊಟ್ಟರೆ ಅಲ್ಲವೇ ಹೇಳುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಮೇರಿಕಾ ಬಗ್ಗೆ ಹೇಳಿದರಲ್ಲಾ, ಅಮೇರಿಕಾದಲ್ಲಿ ವರ್ಷಕ್ಕೆ 93000 rape ಆಗುತ್ತಿವೆ

ಶ್ರೀ ಅರವಿಂದ್ ಲಿಂಬಾವಳಿ:– ನಾನು rape ಬಗ್ಗೆ ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವುದು ಅಲ್ಲಿ ಹೆಸರಿಟ್ಟಿರುವುದು Department of Corrections ಎಂದು. ಹಾಗಾಗಿ ಜೈಲಿಗೆ ಜೈಲು ಎಂದು ಹೆಸರಿಟ್ಟಿಲ್ಲ ಮಾನ್ಯ ಮುಖ್ಯಮಂತ್ರಿಗಳೇ. ದಯವಿಟ್ಟು ತಾವು ಕೇಳಬೇಕು, ನಾನು ಹೇಳುವುದಕ್ಕಿಂತ ಮುಂಚೆ ಸದನದ ನಾಯಕರೇ ಈ ರೀತಿ ಮಾತನಾಡಿಬಿಟ್ಟರೆ ಹೇಗೆ?

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಅರವಿಂದ್ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಈಗ ಪರಿಸ್ಥಿತಿ ಹೇಗಾಗಿದೆ ಎಂದರೆ ನಮ್ಮ ಗೃಹ ಇಲಾಖೆಯಲ್ಲಿ natural delivery ಆಗುತ್ತಿಲ್ಲ. ಎಲ್ಲಾ caesarian ಆಗುತ್ತಿರುವುದು. ನಾವು ಇಲ್ಲಿ ಒಳಗೂ ಹೋರಾಟ ಮಾಡಬೇಕು, ಹೊರಗೂ ಹೋರಾಟ ಮಾಡಬೇಕು. ಈ ವಿಬ್‌ಗಯಾರ್ ಶಾಲೆಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಮಾತನಾಡುತ್ತೇನೆ, ಬೇರೆ ವಿಷಯದ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಆ ಪ್ರಕರಣದ ಬಗ್ಗೆ ಮಾತನಾಡುವುದಾದರೆ ಇವತ್ತಿನವರೆಗೂ ನಾವು ಸದನದಲ್ಲಿ ಒತ್ತಡ ಹಾಕಿ, ಹಾಕಿ, ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಮಂಗಳವಾರ, ಬುಧವಾರ,

ಗುರುವಾರ, ಶುಕ್ರವಾರ ಈ ನಾಲ್ಕೂ ದಿವಸಗಳೂ ಆ ಸಂಗತಿಯ ಬಗ್ಗೆ ಮಾತನಾಡಿದ್ದೇವೆ. ದುರ್ದೈವದ ಸಂಗತಿ ಎಂದರೆ ನೀವು ಲಿಖಿತ ರೂಪದಲ್ಲಿ ಬರೆದು ಕಳುಹಿಸಿ ಎಂದು ಮಾನ್ಯ ಗೃಹ ಸಚಿವರು ಹೇಳಿದರು. ಅವರು ಈ ಬಗ್ಗೆ suo-moto statement ಮಾಡಬೇಕಾಗಿತ್ತು. ಆದರೆ 9 ದಿವಸಗಳ ನಂತರ ನಿನ್ನೆ ಕ್ರಮ ಜರುಗಿಸಿರುವ ಬಗ್ಗೆ ಇಂದಿನ ಪತ್ರಿಕೆಯಲ್ಲಿ ನೋಡಿದ್ದೇವೆ. ಯಾರೋ ಒಬ್ಬ Skating Teacher ಯಾರಿದ್ದಾನೆ ಅವನು ಇದನ್ನು ಮಾಡಿದ್ದಾನೆ. ಅವನನ್ನು ಬಂಧಿಸಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇದರ ಹಿನ್ನೆಲೆಯೊಳಗೆ ಜನ ಈಗಾಗಲೇ ಹೋರಾಟಕ್ಕೆ ಇಳಿದಿದ್ದಾರೆ. ಒಬ್ಬನನ್ನು ಬಂಧಿಸಿದ್ದಾರೆ. 2ನೇ ತಾರೀಖು ಘಟನೆ ನಡೆದಿದೆ, 12ನೇ ತಾರೀಖು parents ಬಂದು complaint ಕೊಡುತ್ತಾರೆ. Complaint ಕೊಟ್ಟ ಮೇಲೆ ಸರ್ಕಾರ ಅಥವಾ ಗೃಹ ಇಲಾಖೆ ಇದನ್ನು serious ಆಗಿ ತೆಗೆದುಕೊಂಡು ತನಿಖೆ ಮಾಡಬೇಕಾಗಿತ್ತು. ಅದರಲ್ಲಿ ನಿಷ್ಕ್ರಿಯವಾಗಿರುವುದರ ಪರಿಣಾಮವಾಗಿ ಸದನದ ಒಳಗೆ ಹೊರಗೆ ಗಲಾಟೆ ಆದಮೇಲೆ ಸರ್ಕಾರ ಎಚ್ಚೆತ್ತುಕೊಂಡಿತು. ಆ ಹಿನ್ನೆಲೆಯೊಳಗೆ ಒಬ್ಬನನ್ನು ಮಾತ್ರ ಇವತ್ತು ಬಂಧಿಸಿದ್ದಾರೆ. ಇನ್ನೊಬ್ಬರು ತಪ್ಪು ಮಾಡಿದ್ದಾರೆ ಎಂದು ಅವರ complaint ನಲ್ಲಿ ಹೇಳಿದ್ದಾರೆ. ಆದರೂ ಕೂಡ ಅವರನ್ನು ಹಿಡಿಯುವುದರಲ್ಲಿ ಈ ಪೊಲೀಸ್ ಇಲಾಖೆ ಯಶಸ್ವಿಯಾಗಿಲ್ಲ. ಅಲ್ಲಿರುವಂಥ ಪ್ರಾಂಶುಪಾಲರಿಗೆ ಮತ್ತು ಅಲ್ಲಿರುವಂಥ ಸಂಸ್ಥೆಯ ಅಧ್ಯಕ್ಷರಿಗೆ ಇದು ನಾಲ್ಕು ಮತ್ತು ಐದನೇ ತಾರೀಖಿನಂದೆ ವಿಷಯ ಗೊತ್ತಾಗುತ್ತದೆ. ಅವರೂ ಕೂಡ ಈ ವಿಷಯವನ್ನು ಮುಚ್ಚಿಡುವಂಥ ಕೆಲಸ ಮಾಡುತ್ತಾರೆ. ಬುದ್ಧಿಮಾಂದ್ಯ ಮಗುವಾಗಿದ್ದರೂ ಸಹ general school ನಲ್ಲಿ ಹೇಗೆ admission ಮಾಡಿಕೊಳ್ಳುತ್ತಾರೆ? ಇದನ್ನು ಸಹ ಪ್ರಶ್ನೆ ಮಾಡಬೇಕಾಗಿರುವಂಥ ವಿಚಾರವಾಗಿದೆ. ಆ ಹಿನ್ನೆಲೆಯೊಳಗೆ ಈ ವಿಬ್‌ಗಯಾರ್ ಶಾಲೆಯ Management ಕೂಡ ಮೊದಲೇ ಬರೆಸಿಕೊಳ್ಳುತ್ತದೆ. Admission time ನಲ್ಲಿ ಏನು ಬರೆಸಿಕೊಳ್ಳುತ್ತಾರೆಂದರೆ ನಿಮ್ಮ ಮಗುವನ್ನು ಇಲ್ಲಿ ಸೇರಿಸುತ್ತೀರಿ, ಆ ಮಗು ಶಾಲೆಯ ವಾತಾವರಣದಲ್ಲಿದ್ದರೂ ಸಹ ನಾವು ಯಾವುದೇ ಕಾರಣಕ್ಕೂ ಜವಾಬ್ದಾರರಲ್ಲ. ಎಂದು ಹೇಳಿ ಅವರ ಹತ್ತಿರ ಬರೆಸಿಕೊಳ್ಳುತ್ತಾರೆ. ಪಾಲಕರಿಗೆ

admission ಬೇಕು. ಅದಕ್ಕೋಸ್ಕರ ಪಾಲಕರು ಏನು ಬೇಕಾದರೂ undertaking ಕೊಟ್ಟು admission ಮಾಡುವುದಕ್ಕೆ ಮುಂದಾಗುತ್ತಾರೆ. ಅವರು ಕೇಳಿದಷ್ಟು ಹಣವನ್ನು ಕೊಡುತ್ತಾರೆ, ಹಣ ಕೊಟ್ಟ ಮೇಲೆ admission ಆದರೂ ಕೂಡ ಈ ರೀತಿ ಯಾವುದೇ school ನಲ್ಲಿ ಇಲ್ಲದೇ ಇರುವಂಥ ನಿಯಮವನ್ನು ವಿಬ್‌ಗಯಾರ್ school ನವರು ಪಾಲಕರ ಹತ್ತಿರ signature ಮಾಡಿಸಿಕೊಳ್ಳುತ್ತಾರೆ. ಇನ್ನೊಂದು ದುರ್ದೈವದ ಸಂಗತಿ ಎಂದರೆ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತೇನೆ, ಮಾನ್ಯ ಶಿಕ್ಷಣ ಸಚಿವರು ಇಲ್ಲಿಲ್ಲ, ಆದರೂ ಅವರು ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. ಶಾಲೆಯೊಳಗೆ swimming pool ನಡೆಯುತ್ತಿದೆ.

(ಈ ಹಂತದಲ್ಲಿ ಡಾ|| ಎ.ಬಿ. ಮಾಲಕರೆಡ್ಡಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ಶ್ರೀ ಅರವಿಂದ್ ಲಿಂಬಾವಳಿ:- ಮಾನ್ಯ ಅಧ್ಯಕ್ಷರೆ, ಶಾಲೆಯ ಒಳಗೆ swimming pool ನಡೆಸುತ್ತಿದ್ದಾರೆ. ಮಕ್ಕಳಿಗೋಸ್ಕರ ಅಲ್ಲ, ಆ swimming pool ಹೊರಗಡೆಯಿಂದ ಬರುತ್ತಿರುವ ಜನರಿಗೆ ನಡೆಯುತ್ತಿದೆ. ಮಕ್ಕಳ ಬಗ್ಗೆ ಏನು security ಇರುತ್ತದೆ? ಆ school ನಲ್ಲಿ ಓದುತ್ತಿರುವ ಮಕ್ಕಳ ಬಗ್ಗೆ ಅವರು ತೆಗೆದುಕೊಂಡಿರುವ undertaking ನಲ್ಲಿ ಯಾವುದೇ ಮಗುವಿಗೆ ಏನೇ ಆದರೂ ನಾವು ಜವಾಬ್ದಾರರಲ್ಲ. ಇವನು ಒಳಗೆ ಬೇರೆಯವರನ್ನು ಬಿಟ್ಟುಕೊಳ್ಳುತ್ತಾನೆ, swimming pool ಅನ್ನು commercial activity ಆಗಿ ಮಾಡುತ್ತಿದ್ದಾನೆ. ಅಂಥ ಸಂದರ್ಭದಲ್ಲಿ ನಮ್ಮ ಇಲಾಖೆಯವರು ಇವೆಲ್ಲ ಸಂಗತಿಗಳನ್ನು ಗಮನಿಸದೆ ನನಗೆ ಗೊತ್ತಿಲ್ಲ, ಯಾವ ಉದ್ದೇಶಕ್ಕಾಗಿ ಆ ಸಂಸ್ಥೆಯ ಅಧ್ಯಕ್ಷರನ್ನು, ಪ್ರಾಂಶುಪಾಲರನ್ನು ಇನ್ನು ಬಂಧಿಸಿಲ್ಲ ಎಂಬುದು ನನಗೆ ಗೊತ್ತಿಲ್ಲ. ಅವರು ಯಾವುದಾದರೂ high influence ತಂದಿದ್ದಾರೆಯೇ ಅಥವಾ ಅವರಲ್ಲಿ ಯಾವುದೇ ತಪ್ಪುಗಳು ಇಲಾಖಾಧಿಕಾರಿಗಳಿಗೆ ಕಾಣುತ್ತಿಲ್ಲವೆ ಏನೆಂಬುದು ಗೊತ್ತಿಲ್ಲ. ಇನ್ನೊಬ್ಬ Teacher ಬಗ್ಗೆ ಸಹ ಹೇಳಿದರು, ಈ Teacher ಈಗ ಯಾರು arrest ಆಗಿದ್ದಾರೆ ಇವರ track record ಅನ್ನು

ಪೊಲೀಸ್ ಇಲಾಖೆಯೇ ಹೇಳಿದೆ. ಇವನ track record ನೋಡಿದರೆ ಬೇರೆ ಬೇರೆ ಸ್ಕೂಲುಗಳಲ್ಲಿ ಇವನು ಇದೇ ರೀತಿಯ ಘಟನೆಗಳನ್ನು ಮಾಡಿದ್ದಾನೆ. ನನಗೂ ಚೆನ್ನಾಗಿ ಗೊತ್ತಿದೆ, ಇದಕ್ಕಿಂತ ಹಿಂದೆ ಇದ್ದಂಥ ಶಾಲೆಯಲ್ಲಿ ಈ ರೀತಿ ಒಂದು ಮಗುವಿನ ಮೇಲೆ ಅತ್ಯಾಚಾರ ಮಾಡುವಂಥ ಪ್ರಕರಣದಲ್ಲಿ ಜನ ಅವನನ್ನು ಬಸ್‌ನಲ್ಲಿ ಹೋಗಬೇಕಾದರೆ ಹಿಡಿದು ಹೊಡೆದಿದ್ದಾರೆ, ಅಂಥ ಪ್ರಕರಣವನ್ನು ಮುಚ್ಚಿ ಹಾಕಿದ್ದಾರೆ. ಆ ಹಿನ್ನೆಲೆಯಲ್ಲಿ ತಕ್ಷಣವೇ ಈಗೇನು ಮೇಲ್ನೋಟಕ್ಕೆ ಒಬ್ಬ Teacher ಅನ್ನು ಬಂಧಿಸಿದ್ದಾರೆ. ಆತನನ್ನು ಬಂಧಿಸಿ ಆ ಪ್ರಕರಣವನ್ನು ಮುಚ್ಚಿ ಹಾಕುವಂಥ ಪ್ರಯತ್ನವನ್ನು ಮಾಡಿದರೆ ಯಾವುದೇ ಕಾರಣಕ್ಕೂ ಜನ ಸುಮ್ಮನೆ ಬಿಡುವುದಿಲ್ಲ. ನಾವ್ಯಾರೂ ಕೂಡ ಸುಮ್ಮನೆ ಕುಳಿತುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಆ ನಿಮಿತ್ತವಾಗಿ ನಾನು ಒತ್ತಾಯ ಮಾಡುತ್ತೇನೆ, ಇದರಲ್ಲಿ ಸಾಕ್ಷಿಗಳನ್ನು ಮುಚ್ಚಿ ಹಾಕುವಂಥ ಪ್ರಯತ್ನ, ತಪ್ಪು ದಾರಿಗೆ ಎಳೆಯುವಂಥ ಪ್ರಯತ್ನ ಮತ್ತು undertaking ಏನು ಈ ರೀತಿ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಸಂಸ್ಥೆಯ ಮುಖ್ಯಸ್ಥರಾಗಲಿ, ಅಲ್ಲಿನ ಪ್ರಾಂಶುಪಾಲರಾಗಲಿ ಅಥವಾ ಆ ಸಂಸ್ಥೆಯ ಅಧ್ಯಕ್ಷರಾಗಲಿ, ಅವರು ಕೂಡ ಇದರಲ್ಲಿ ತಪ್ಪು ಮಾಡಿದ್ದಾರೆ, ಅವರನ್ನು ತಕ್ಷಣವೇ ಬಂಧಿಸಬೇಕು. ಮಾನ್ಯ ಗೃಹ ಸಚಿವರ ಜೊತೆಯಲ್ಲಿಯೂ ಈ ಕುರಿತು ನಾನು ವೈಯಕ್ತಿಕವಾಗಿ ಮಾತನಾಡಿದ್ದೇನೆ. ಸಂಬಂಧಪಟ್ಟಂಥ ಅಧಿಕಾರಿಗಳ ಹತ್ತಿರವೂ ಸಹ ನಾನು ಮಾತನಾಡಿದ್ದೇನೆ. ಆದರೂ ಕೂಡ ಯಾವುದೇ ಕ್ರಮ ಜರುಗಿಸಲಿಕ್ಕೆ ಸಾಧ್ಯವಿಲ್ಲವೆನ್ನುವುದಾದರೆ .. ನಾನು ಅದಕ್ಕೆ ಹೇಳಿದೆ ಅಧ್ಯಕ್ಷರೆ, natural delivery ಈ ಸರ್ಕಾರದಲ್ಲಿ ಆಗುತ್ತಿಲ್ಲ. ಎಲ್ಲಾ caesarian ಅಥವಾ abortion ಆಗಬೇಕು, ಅಂಥ ಪರಿಸ್ಥಿತಿ ಇವತ್ತು ಗೃಹ ಇಲಾಖೆಯೊಳಗೆ ನಿರ್ಮಾಣವಾಗಿದೆ. ದಯವಿಟ್ಟು ಅದನ್ನು ತಪ್ಪಿಸಬೇಕು. ಏಕೆಂದರೆ ಇವರ ಮಟ್ಟಕ್ಕೆ ಇದು ಬರಬೇಕಾಗಿರಲಿಲ್ಲ. ಅವರ ಕೆಳಗಿರುವ ಅಧಿಕಾರಿಗಳ ಮಟ್ಟದಲ್ಲೇ ಈ ರೀತಿ ತನಿಖೆಗಳು ಮುಗಿಯಬೇಕಾಗಿತ್ತು, ಆದರೆ ಪರಿಸ್ಥಿತಿ ಹೇಗಿದೆ ಎಂದರೆ, ಪ್ರತಿಯೊಂದು ಸಣ್ಣ ವಿಷಯಕ್ಕೂ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಪುಲಿಕೇಶಿ ನಗರದ ಘಟನೆಯಿರಬಹುದು,

ಹೆಣ್ಣೂರಿನ ಘಟನೆಯಿರಬಹುದು ಅಥವಾ ನಮ್ಮ ಮಾರತ್‌ಹಳ್ಳಿ ಹತ್ತಿರವಿರುವ ತೂಬರಹಳ್ಳಿಯ ಘಟನೆಯಿರಬಹುದು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಆಗುತ್ತಿರುವ ಯಾವುದೇ ಘಟನೆಗಳಿದ್ದರೂ ಕೂಡ ನಾವು ಒತ್ತಾಯ ಮಾಡಿ ಅದಕ್ಕೆ ಕ್ರಮವನ್ನು ಜರುಗಿಸಿ ಎಂದು ಹೇಳುವಂಥ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣವಾಗಿದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಅದರಲ್ಲಿ ಸಂಬಂಧಪಟ್ಟಂಥ ಎಲ್ಲಾ ಅಪರಾಧಿಗಳು ಯಾರಿದ್ದಾರೆ, ಅಪರಾಧಿಗಳೇ ಅಲ್ಲವೆಂದು ಮಾಡಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಅವರು instigate ಮಾಡಿದ್ದಾರೆ, ಅದನ್ನು ಬರೆಸಿಕೊಳ್ಳುವುದರ ಮೂಲಕ instigate ಮಾಡಿದ್ದಾರೆ. ಅಷ್ಟೇ ಅಲ್ಲ ಈ ಪ್ರಕರಣವನ್ನು ಮುಚ್ಚಿಹಾಕುವುದರಲ್ಲಿ ಪ್ರಯತ್ನವನ್ನು ಮಾಡಿದ್ದಾರೆ. ಈ ಎಲ್ಲಾ ಕಾರಣಗಳಿದ್ದರೂ ಸಹ ಸುಮ್ಮನೆ ಇರುವುದು ಸೂಕ್ತವಲ್ಲ. ಅವರು ನಿರಂತರವಾಗಿ ಪೊಲೀಸ್ ಅಧಿಕಾರಿಗಳ ಸಂಪರ್ಕದಲ್ಲಿದ್ದರೂ ಸಹ ಅವರ ಮೇಲೆ ಯಾವುದೇ ಕ್ರಮವನ್ನು ಜರುಗಿಸುವುದಿಲ್ಲ ಎನ್ನುವುದಾದರೆ ಬಹಳ ಕಠಿಣವಾಗುತ್ತದೆ. ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಬೆಂಗಳೂರು ಹೊರ ವಲಯದಲ್ಲಿರುವಂಥ ಎಲ್ಲಾ ಪೊಲೀಸ್ ಸ್ಟೇಷನ್‌ಗಳು ಒಂದು ರೀತಿಯ real estate office ಗಳಾಗಿ ಬಿಟ್ಟಿವೆ. ಅವರಿಗ್ಯಾರಿಗೂ ಸಹ law and order maintain ಮಾಡಬೇಕು ಎನ್ನುವಂಥ ಆಸಕ್ತಿಯೇ ಇಲ್ಲ, ಅದರ ಬದಲಿಗೆ ಯಾವುದಾದರೂ land ನ ಪ್ರಕರಣ ಬಂದರೆ ಅದರಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾರೆ, ಅದರಲ್ಲಿ ಏನಾದರೂ ನಾವು ವ್ಯವಹಾರ ಮಾಡಬಹುದೇ ಅಥವಾ ಅವ್ಯವಹಾರವನ್ನು ಮಾಡಿರುವವರನ್ನು ಹಿಡಿದು ನಾವೇನಾದರೂ ಹಣವನ್ನು ಗಳಿಸಬಹುದೇ ಎನ್ನುವಂಥ ಮಟ್ಟಕ್ಕೆ ಹೋಗುತ್ತಾರೆ. ಇಂಥ ಪ್ರಕರಣಗಳ ಬಗ್ಗೆ ಗಮನ ಕೊಡದಿದ್ದರೆ, land ವ್ಯವಹಾರಕ್ಕೆ ಹೋದರೆ real estate ಮಾಡುತ್ತಲೇ ಇದ್ದರೆ law and order ಮಾಡಲಿಕ್ಕೆ ಸಾಧ್ಯವೇ ಇಲ್ಲ. ಮೇಲಿಂದ ಇವರು ಎಷ್ಟೇ ಒತ್ತಾಯ ತಂದರೂ ಕೂಡ.. ಏಕೆಂದರೆ ಈ ಪ್ರಕರಣದಲ್ಲಿ ನನಗೆ ಚೆನ್ನಾಗಿ ಗೊತ್ತಿದೆ. ಮಾನ್ಯ Commissioner ರವರಿಂದ ಹಿಡಿದುಕೊಂಡು ಎಲ್ಲರೂ ಕೂಡ ಅಲ್ಲಿ ಕುಳಿತುಕೊಳ್ಳಬೇಕಾಗಿ ಬಂತು.

ಕುಳಿತುಕೊಂಡು ಇದನ್ನು ಪರಿಹರಿಸುವಂತಹ ಕೆಲಸ ಬಂತು. ಒಬ್ಬ Inspector ಮಾಡಬೇಕಾಗಿರುವಂತಹ ಕೆಲಸವನ್ನು ಈ ಮಟ್ಟಕ್ಕೆ ತಂದಿಡುವಂತಹ ಪ್ರಯತ್ನಗಳಾದರೆ ಇದು ಸೂಕ್ತವಾದಂತಹ ವ್ಯವಸ್ಥೆಯಲ್ಲ. ಆ ದೃಷ್ಟಿಯಲ್ಲಿ ನಾನು ಮಾನ್ಯ ಛೇರ್ಮನ್‌ರವರೆ, ನಾನು ಒತ್ತಾಯ ಮಾಡುತ್ತೇನೆ. ತಕ್ಷಣವೇ ಅವರನ್ನೆಲ್ಲಾ ಬಂಧಿಸಿ.

ಛೇರ್ಮನ್:- ತಾವು ಎರಡು ನಿಮಿಷ ಮಾತನಾಡುತ್ತೇನೆ ಎಂದು ಹೇಳಿದಿರಿ. 7 ನಿಮಿಷ ಆಯಿತು. ತಾವು ಚೆನ್ನಾಗಿ ಮಾತನಾಡಿದಿರಿ.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಛೇರ್ಮನ್‌ರವರೆ, ಇದು ಗಂಭೀರವಾದ ವಿಷಯವಾದ್ದರಿಂದ ನಾವು ಇದನ್ನು ನಿಯಮ 60ರಡಿ ಕೇಳಿದ್ದೇವೆ. ನಮ್ಮ ಕ್ಷೇತ್ರದಲ್ಲಿ ನಡೆದಿರುವಂತಹ ಘಟನೆಯಾಗಿರುವುದರಿಂದ ಹೇಳುತ್ತಿದ್ದೇನೆ.

ಛೇರ್ಮನ್:- ಮಾನ್ಯ ಕಾರಜೋಳರವರೆ, ಮಾತನಾಡಿ. ಸಾಕಷ್ಟು ಹೇಳಿದ್ದೀರಿ. ತಾವು ಒಂದೇ ಒಂದು episode ಅನ್ನು ಬಹಳ ವಿಸ್ತಾರ ಮಾಡಿ ಹೇಳಿದ್ದೀರಿ.

ಶ್ರೀ ಅರವಿಂದ್ ಲಿಂಬಾವಳಿ:- ಮಾನ್ಯ ಛೇರ್ಮನ್‌ರವರೆ, ಮಾನ್ಯ ಕುಮಾರಸ್ವಾಮಿಯವರು ಒಂದು ಅಂಶ ಹೇಳಿದರು. ಬೇರೆ ರಾಜ್ಯಗಳ ಉದಾಹರಣೆಗಳನ್ನು ಕೊಟ್ಟರು. ಆದರೆ, ಇವತ್ತಿನ ಹಾಗೂ ನಿನ್ನೆ ಪತ್ರಿಕೆಗಳನ್ನು ತೆಗೆದು ನೋಡಿದರೆ ನಮ್ಮ ನಿವೃತ್ತ ಅಧಿಕಾರಿಗಳು ಹೇಳುತ್ತಿರುವ ಸಂಗತಿಗಳನ್ನು ಗಮನಿಸಬೇಕು. ಈ ರೀತಿಯ ಪ್ರಕರಣಗಳನ್ನು ಯಾರೂ ಕೂಡ ಪೊಲೀಸ್ ಸ್ಟೇಷನ್‌ಗಳಿಗೆ ಬಂದು ದಾಖಲು ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲರೂ ಹಿಂದೇಟು ಹೊಡೆಯುತ್ತಾರೆ. ಅಂತಹ ಒಂದು ವಾತಾವರಣವಿದೆ. ಅದಕ್ಕೆ ಪ್ರಕರಣಗಳ ಸಂಖ್ಯೆ ಇಲ್ಲಿ ಕಡಿಮೆ ಎಂದು ನಮ್ಮ ಕಣ್ಣಿಗೆ ಕಾಣಬಹುದು. ಆದರೆ, ನಡೆಯುತ್ತಿರುವಂತಹ ಪ್ರಕರಣಗಳು ಜಾಸ್ತಿ ಇವೆ. ಅದಕ್ಕೋಸ್ಕರ ಒಂದು ಭಯ ಭೀತಿಯಾದ ವಾತಾವರಣ ಸೃಷ್ಟಿ ಮಾಡಬೇಕು

ಎನ್ನುವುದಾದರೆ ನಿರ್ಭೀತಿಯಾಗಿ ಅಧಿಕಾರಿಗಳಿಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬೇಕು. ನಿಷ್ಕ್ರಿಯ ಅಧಿಕಾರಿಗಳನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕು, ಅವರನ್ನು ಬೇರೆ ಇಲಾಖೆಗಳಿಗೆ ಅಥವಾ ಬೇರೆ ಕೆಲಸಗಳಿಗೆ ಕಳುಹಿಸಿದರೆ ಸೂಕ್ತವೆಂದು ಹೇಳುತ್ತಾ, ಮತ್ತೊಂದು ಬಾರಿ ಹೇಳುತ್ತೇನೆ. ತಪ್ಪಿತಸ್ಥರು ಯಾರ್ಯಾರಿದ್ದಾರೆ, ಅವರನ್ನೆಲ್ಲಾ ಬಂಧಿಸಬೇಕು ಎಂದು ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಛೇರ್ಮನ್‌ರವರೆ, . .

ಛೇರ್ಮನ್:– 5 ನಿಮಿಷ ಸಮಯಾವಕಾಶ ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸರ್ ನಾನು ಅದಕ್ಕಿಂತಲೂ ಮುಂಚೆಯೇ ಮುಗಿಸುತ್ತೇನೆ. ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ.

ಛೇರ್ಮನ್:– ಸಂತೋಷ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಛೇರ್ಮನ್‌ರವರೆ, ರೇಪ್ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪತ್ರಿಕೆಯಲ್ಲಿ ಓದಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀಮತಿ ಉಮಾಶ್ರೀಯವರು ನಂಜನಗೂಡು ತಾಲ್ಲೂಕಿನ ತಾಯೂರಿಗೆ ಹೋಗುತ್ತಾರೆ. ಅಲ್ಲಿ ಏನು ಹೇಳುತ್ತಾರೆ ಎಂದರೆ, press statement ಓದುತ್ತೇನೆ. 'ಅತ್ಯಾಚಾರ ಕೃತ್ಯಗಳಿಗೆ ಸರ್ಕಾರ ಹೊಣೆಯಿಲ್ಲ. ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ.'

ಶ್ರೀ ಸಿದ್ದರಾಮಯ್ಯ:– ಯಾವ ವಿಷಯ ಅದು? ಯಾರು ಅದು?

ಶ್ರೀ ಗೋವಿಂದ ಎಂ. ಕಾರಜೋಳ:- ತಮಗೆ ಅದನ್ನು ಕಳುಹಿಸುತ್ತೇನೆ. ಉಮಾಶ್ರೀಯವರು statement ಕೊಟ್ಟಿರುವುದು. ನಂಜನಗೂಡು ತಾಲ್ಲೂಕಿನ ತಾಯೂರಿನಲ್ಲಿ ಒಂದು ಬುದ್ಧಿಮಾಂದ್ಯ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿದ್ದರಿಂದ ಸಾಂತ್ವಾನ ಹೇಳುವುದಕ್ಕೆ ಹೋದಾಗ ಉಮಾಶ್ರೀಯವರು ಈ ರೀತಿ statement ಮಾಡುತ್ತಾರೆ. ಏನು ಮಾಡುತ್ತಾರೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು? 'ಅತ್ಯಾಚಾರ ಕೃತ್ಯಗಳಿಗೆ ಸರ್ಕಾರ ಹೊಣೆಯಲ್ಲ. ಸರ್ಕಾರ ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳುತ್ತಾರೆ' ಅವರ statement ಮುಗಿಯಿತು. ನಾನು ಹೆಚ್ಚಿಗೆ ಮುಂದೆ ಹೋಗುವುದಿಲ್ಲ. ಏಕೆಂದರೆ, ಉಮಾಶ್ರೀಯವರು ಒಬ್ಬರು ಮಹಿಳೆ.

ಶ್ರೀ ಸಿದ್ದರಾಮಯ್ಯ:- ಅದು ಸತ್ಯವಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಅಲ್ಲ ಸತ್ಯವಿರಬಹುದು, ಇಲ್ಲವೇ ಅಸತ್ಯವಿರಬಹುದು. ಅಸತ್ಯವಿದ್ದರೆ ಅಸತ್ಯವೆಂದು ಹೇಳಲಿ. ನನ್ನದು ಏನೂ ತಕರಾರಿಲ್ಲ. ಈಗ Media ಮೊದಲಿನ ರೀತಿ ಇಲ್ಲ. Electronic Media ದವರು ನಮಗೆ ತೋರಿಸಿಯೇ ಬಿಡುತ್ತಾರೆ. ಮೊನ್ನೆ ನಾನು ನಿದ್ದೆ ಮಾಡುವುದನ್ನು ತೋರಿಸಿದರು. ಆವತ್ತು ನಾನು ಆರಾಮಾಗಿ ಇರಲಿಲ್ಲ, ಗುಳಿಗೆ ತೆಗೆದುಕೊಂಡಿದ್ದೆ. Tablets ತೆಗೆದುಕೊಂಡಿದ್ದೆ, ಆಗ ನಾನು ನಿದ್ದೆ ಮಾಡುವುದನ್ನು 3 ತಾಸು ತೋರಿಸಿದರು. ಹೀಗೆ ಪ್ರತಿಯೊಂದನ್ನೂ . . .

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಕಾರಜೋಳರವರೆ, ನೀವು ಗುಳಿಗೆಯನ್ನು ನಿದ್ದೆ ಮಾಡುವುದಕ್ಕೆ ತೆಗೆದುಕೊಂಡಿದ್ದೀರಿ ಎಂದು ನಮಗೆ ಹೇಗೆ ಗೊತ್ತಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ:- ಇಲ್ಲ ಅದು ಆಯಿತು. ಆ ರೀತಿ ಪ್ರತಿಯೊಂದನ್ನೂ ತೋರಿಸುತ್ತಾರೆ ಎಂದು ನಿಮಗೆ ಉದಾಹರಣೆ ಹೇಳಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಗುಳಿಗೆಯನ್ನು ನೀವು ನಿದ್ದೆ ಮಾಡುವುದಕ್ಕೆ ತೆಗೆದುಕೊಂಡಿದ್ದೀರಿ ಎಂದು ನಮಗೆ ಹೇಗೆ ಗೊತ್ತಾಗುವುದು? ನೀವು ಗುಳಿಗೆಯನ್ನು ಏತಕ್ಕೆ ತೆಗೆದುಕೊಂಡಿದ್ದಿರಿ? ಮಾನ್ಯ ಕುಮಾರಸ್ವಾಮಿಯವರು ಹಾಗೂ ನಾನು ಇಬ್ಬರೂ ನಂಬುವುದಿಲ್ಲ. ಗುಳಿಗೆ ಏತಕ್ಕೆ ತೆಗೆದುಕೊಂಡಿದ್ದಿರಿ ಎಂದು ನೀವು ಸತ್ಯ ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- Yes sir. ಮಾನ್ಯ ಛೇರ್ಮನ್‌ರವರೆ, ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಕುಮಾರಸ್ವಾಮಿಯವರು ಒಂದು ಮಾತು ಹೇಳಿದರು. ಇಬ್ಬರು ನಿವೃತ್ತ ಅಧಿಕಾರಿಗಳು ನೀತಿ ಪಾಠ ಹೇಳಿದರು ಎಂದು ಹೇಳಿದರು. Transfer ಬಗ್ಗೆ, ಆಡಳಿತದ ಬಗ್ಗೆ ಮತ್ತು transfer ನಲ್ಲಿ ಭ್ರಷ್ಟಾಚಾರದ ಬಗ್ಗೆ ಎಂದು ಹೇಳಿದರು. ಅವರ ಮಾತುಗಳು ಹೇಗೆ ಇರುತ್ತವೆ ಎಂದರೆ 'ಸೂಳೆ ಮುಪ್ಪು ಆದಮೇಲೆ ಜೋಗತಿ ಆದಳಂತೆ' ಹಾಗೆ ಇದೆ. ಸೂಳೆ ಮುಪ್ಪು ಆದಮೇಲೆ ಜೋಗತಿಯಾದಳಂತೆ. ಅವರು ಮುಪ್ಪು ಆದಮೇಲೆ ಜೋಗತಿ ಪಾತ್ರದಲ್ಲಿರತಕ್ಕಂತಹವರು. ಅವರ ಬಗ್ಗೆ ಏನೂ ಬಹಳ ಗಮನ ಕೊಡಬೇಕಾಗಿಲ್ಲ. ಮಾನ್ಯ ಛೇರ್ಮನ್‌ರವರೆ, 2013ರಲ್ಲಿ ಮೊದಲೇ ಇವೆಲ್ಲಾ ಆಗಿವೆ. ಇದು ಇವತ್ತಿನಿಂದ ಆಗಿರುವುದಲ್ಲ. ರಾಮಾಯಣದ ಕಾಲದಿಂದಲೂ ಇದೆ. ರಾವಣನೇ kidnap ಮಾಡಿಕೊಂಡು ಹೋಗಿದ್ದಾನೆ ಎಂದು ನಾವು ಇತಿಹಾಸದಲ್ಲಿ ಓದುತ್ತೇವೆ. ಆವತ್ತಿನಿಂದ ಇವತ್ತಿನವರೆಗೂ ನಡೆಯುವಂತಹದ್ದು ಇದು. ಹೊಸದೇನೂ ಅಲ್ಲ. ಆದರೆ 2013ರಲ್ಲಿ 2,248 ಪ್ರಕರಣಗಳು ಮಹಿಳೆಯರಿಗೆ ಸಂಬಂಧಪಟ್ಟಂತಹವು ಆಗುತ್ತವೆ. Rape ಆಗಬಹುದು, kidnap ಆಗಬಹುದು ಮತ್ತು ವರದಕ್ಷಿಣೆ ಕಿರುಕುಳವಾಗಿರಬಹುದು, ಆತ್ಮಹತ್ಯೆಯಾಗಿರಬಹುದು, ಇಂತಹ ಪ್ರಕರಣಗಳು ಆಗುತ್ತವೆ. ಹಿಂದೆ ಕೂಡ ಆಗಿವೆ. ಮಾನ್ಯ ಛೇರ್ಮನ್‌ರವರೆ, ಇದರಲ್ಲಿ ಬಹಳ ಮಹತ್ವವಾದ ವಿಷಯವನ್ನು ನಾವು ಗಮನಿಸಬೇಕಾದಂತಹದ್ದು. ಈ ಹೆಣ್ಣುಮಕ್ಕಳು ಏನು ಕಾಣೆಯಾಗುತ್ತಾರೆ, ಅದರಲ್ಲಿ 75% ನಷ್ಟು minor age ನವರು ಇರುತ್ತಾರೆ.

18 ವರ್ಷಗಳಿಗಿಂತಲೂ ಕೆಳಗಿನವರು ಇರುತ್ತಾರೆ. 75% ನಷ್ಟು ಇರುತ್ತಾರೆ. ಏನು ಇದಕ್ಕೆ ಕಾರಣ? ಅವರೇ ಏಕೆ ಹೆಚ್ಚು ಇರುತ್ತಾರೆ ಎನ್ನುವುದಕ್ಕೆ ನಾವು ಇವತ್ತು ಸಮಗ್ರವಾಗಿ ತನಿಖೆ ಮಾಡಬೇಕಾದ ಅವಶ್ಯಕತೆಯಿದೆ. ಅದರಲ್ಲಿ ಸಣ್ಣ ಮಕ್ಕಳನ್ನು ನಂಬಿಸಿ, ತೆಗೆದುಕೊಂಡು ಹೋಗಿ, ಮೋಸ ಮಾಡಿ, ವೇಶ್ಯಾವಾಟಿಕೆ ಕೆಲಸಗಳಿಗೋಸ್ಕರ ಮಾರಾಟ ಮಾಡುವಂತಹದ್ದು ಒಂದು. ಇವತ್ತು ಮುಂಬೈನಲ್ಲಿ ಈ ರೀತಿ ಮಾಡುತ್ತಾರೆ. ಅದಕ್ಕಾಗಿಯೇ ದೊಡ್ಡ ದೊಡ್ಡ ಪ್ರದೇಶಗಳಿವೆ. ಆ ಘರ್‌ವಾಲಿಗಳ ಹತ್ತಿರ ` 40 ಸಾವಿರ, 50 ಸಾವಿರ ಹಾಗೂ ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ತಮ್ಮ ಕಾಮದ ಆಸೆ ತೀರಿಸಿಕೊಂಡ ಮೇಲೆ ಅವರನ್ನು ಅಲ್ಲಿಗೆ ಮಾರಾಟ ಮಾಡುತ್ತಾರೆ. ಇದರಲ್ಲಿ ಪೊಲೀಸ್‌ನವರು ಎಲ್ಲಿ ಎಡವಿದ್ದಾರೆ ಎಂದರೆ, ಇವರನ್ನು ಪತ್ತೆ ಹಚ್ಚುವಂತಹ ಕೆಲಸ ಮಾಡುವುದಿಲ್ಲ. ಎರಡು ವರ್ಷಗಳಾದರೂ charge sheet ಹಾಕುವುದಿಲ್ಲ. Undetected ಎಂದು ಬರೆದಿಟ್ಟುಬಿಡುತ್ತಾರೆ. ಮಾನ್ಯ ಗೃಹ ಸಚಿವರು ತಾವು Crime Register ತರಿಸಿನೋಡಬೇಕು. ಅದೂ ವಿಶೇಷವಾಗಿ ಮಹಿಳೆಯರಿಗೆ ಇರತಕ್ಕಂತಹದ್ದು. Undetected ಎಂದರೆ ಅದು ಮುಗಿಯಿತು, ಅದು chapter close. ಹೀಗಾಗಿ ಯಾರು ತಪ್ಪು ಮಾಡಿರುತ್ತಾರೆ, ಅವರಿಗೆ ಶಿಕ್ಷೆಯೇ ಆಗುವುದಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆ ಎಂದರೆ, ಮಹಿಳೆಯರಿಗೆ ಸಂಬಂಧಪಟ್ಟಂತಹ ಕೋರ್ಟ್‌ಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ:- ಮಾಡಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ಅದನ್ನು ಸ್ವಲ್ಪ active ಮಾಡಬೇಕು ಸರ್. ಅವರಿಗೆ ಎಲ್ಲಾ facilities ಕೊಟ್ಟು, ಪೊಲೀಸ್ ಇಲಾಖೆಯವರಿಗೆ ಮಾನ್ಯ ಮುಖ್ಯಮಂತ್ರಿಗಳು ತಾವು ಆದೇಶ ಮಾಡಬೇಕು. 30 ದಿವಸದೊಳಗಾಗಿ charge sheet ಹಾಕಲೇಬೇಕು. ಈಗ 100ಕ್ಕೆ 90ರಷ್ಟು ಪ್ರಕರಣಗಳಲ್ಲಿ charge sheet ಇಲ್ಲ, ಪೊಲೀಸ್ ಇಲಾಖೆಯವರು ಚಾರ್ಜ್‌ಶೀಟ್ ಹಾಕಿಲ್ಲ. ಇದರ ದೊಡ್ಡ ದುರಂತವೆಂದರೆ, ಇವತ್ತು ಮಾನ-

ಮರ್ಯಾದೆಗೆ ಅಂಜಿ ತಾಯಿ–ತಂದೆಯವರೂ ಸಹ kidnap ಆದ ಆಕೆಯನ್ನು, ಹೊರಗಡೆಗೆ ಹೋದ ಆಕೆಯನ್ನು, ತೆಗೆದುಕೊಂಡು ಹೋದ ಆಕೆಯನ್ನು ಯಾರೂ ಸಹ ಮನೆಗೆ ವಾಪಸ್ಸು ಕರೆದುಕೊಳ್ಳುವುದಿಲ್ಲ. ಅವರಿಗೆ ಬೇರೆ ದಾರಿಯೇ ಇಲ್ಲ. ವೇಶ್ಯಾವಾಟಿಕೆ ಒಂದೇ ದಾರಿ, ಇಲ್ಲವೇ ಆತ್ಮಹತ್ಯೆ ಒಂದೇ ದಾರಿ. ಇದಕ್ಕೆ ನಾವು ಆಲೋಚನೆ ಮಾಡಬೇಕಾಗಿದೆ. ನಾವು ಏನು ಮಾಡಬಹುದು? ಇವತ್ತು ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಹೆಣ್ಣು ಮಕ್ಕಳ ಸಲುವಾಗಿ ಒಂದು ಕೇಂದ್ರವನ್ನು ಸರ್ಕಾರ open ಮಾಡಿದೆ. ಅದು ಮೊದಲಿನಿಂದಲೂ ಇದೆ. ಅದು ಅಲ್ಲಿ ಒಂದು ದೊಡ್ಡ ದುರಂತ. ಅಲ್ಲಿ ಹೆಣ್ಣುಮಕ್ಕಳನ್ನು ಹೊಯ್ದು ಕೊಡುವುದಷ್ಟೇ ತಡ ಅವರಿಗೆ harassment ಎಷ್ಟು ಆಗುತ್ತದೆ ಎಂದು ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆ ಕೇಂದ್ರಕ್ಕೆ ಮಹಿಳಾ ಸಿಬ್ಬಂದಿಯನ್ನೇ ನೇಮಿಸಿರುತ್ತಾರೆ. ನೇಮಿಸಿದ್ದರೂ ಕೂಡ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಆಗುತ್ತದೆ. ಅದಕ್ಕೆ ಕಾರಣವೇನೆಂದರೆ, ಮನುಷ್ಯರಿಂದ ಮನುಷ್ಯರನ್ನು ಕಂಟ್ರೋಲ್ ಮಾಡುವುದಕ್ಕೆ British system ನಲ್ಲಿ ಏನು ಪೊಲೀಸ್ ವ್ಯವಸ್ಥೆ ತಂದರು, ಮನುಷ್ಯರಿಂದ ಮನುಷ್ಯರನ್ನು ಹೊಡೆದು ಯಾರು ಕಾನೂನನ್ನು ಗೌರವಿಸುವುದಿಲ್ಲ, ಅವರನ್ನು ಹದ್ದುಬಸ್ತಿನಲ್ಲಿ ಇಡುವುದಕ್ಕೆ ಪೊಲೀಸ್ ವ್ಯವಸ್ಥೆಯನ್ನು ಏನು ಜಾರಿಗೆ ತಂದರಲ್ಲಾ, ಆ ರೀತಿಯಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಕಾರಜೋಳರವರೆ, ನಾವು ಈಗ ಬಹಳ ಚರ್ಚೆ ಮಾಡುತ್ತಿದ್ದೇವೆ. ಒಂದೇ ನಿಮಿಷದಲ್ಲಿ ಹೇಳುತ್ತೇನೆ. ಇವತ್ತು ಈ ಅತ್ಯಾಚಾರಗಳು ಹಾಗೂ ಕೆಲವೊಂದು ಪ್ರಕರಣಗಳು ಏನು ನಡೆಯುತ್ತಿವೆ, ಇದಕ್ಕೆ ಕಾರಣ ಕೆಲವು ಅಶ್ಲೀಲವಾದಂತಹ ಧಾರಾವಾಹಿಗಳು ಬರುತ್ತಿವೆ. ಆ ಧಾರಾವಾಹಿಗಳಿಂದ ಪ್ರಚೋದನೆಗೊಂಡು ಈ ಪ್ರಕರಣಗಳು ಹೆಚ್ಚುತ್ತವೆ ಎನ್ನುವುದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಜಾಹೀರಾತುಗಳಲ್ಲ. ಈ ಧಾರಾವಾಹಿಗಳು ಕಾರಣ. ಹೆಚ್ಚಿಗೆ ಈ ರೇಪ್ ಪ್ರಕರಣಗಳು ಸೃಷ್ಟಿಯಾಗುವುದಕ್ಕೆ ಸ್ವಲ್ಪ ಅದು ಒಂದು ಮೂಲ ಕಾರಣವಿದೆ.

ಅದರ ಮೇಲೂ ಸರ್ಕಾರ ನಿಬಂಧನೆ ಹಾಕಬೇಕು ಎಂದು ಒಂದು ಒಳ್ಳೆಯ ಯಾಚನೆ ಮಾಡಬೇಕು. ಇದು ಒಂದು solution ಎಂದು ಎಲ್ಲಾ ಕೊಡಲಿ. ಒಳ್ಳೆಯ ಧಾರಾವಾಹಿಗಳು ಕೊಡುತ್ತಾರೆ, ನೋಡುತ್ತೇವೆ. ಆದರೆ, ಕೆಲವೊಂದು ಧಾರಾವಾಹಿಗಳನ್ನು ನಾವು ನೋಡುವುದಕ್ಕೆ ಆಗುವುದಿಲ್ಲ. ಆಮೇಲೆ ರಾತ್ರಿ 12.00 ಗಂಟೆ ಮೇಲೆ ಟಿ.ವಿ. on ಮಾಡಿದರೆ ಬಹಳ ಅಶ್ಲೀಲವಾದಂತಹ, familyಗಳು ನೋಡಲು ಆಗದಂತಹ, ಮಕ್ಕಳು ಮರಿ ಕುಳಿತುಕೊಂಡು ನೋಡುವುದಕ್ಕೆ ಆಗದಂತಹವು ಬರುತ್ತವೆ. ಅದಕ್ಕೆ ಯಾರು ಕಡಿವಾಣ ಹಾಕುವವರು? ಅದಕ್ಕೆ ಯಾರು license ಕೊಟ್ಟಿರುವವರು? ಅವೂ ಕಾರಣವಾಗುತ್ತದೆ. ಅವುಗಳನ್ನು ರಾತ್ರಿ ನೋಡುತ್ತಾರೆ, ಬೆಳಿಗ್ಗೆ ಎದ್ದು ಅದನ್ನು ಶುರು ಮಾಡಿಕೊಳ್ಳುತ್ತಾರೆ. ಅದೂ ಒಂದು ಕಾರಣವಿದೆ. ದಯವಿಟ್ಟು ಮಾನ್ಯ ಛೇರ್ಮನ್‌ರವರೆ, ಇದಕ್ಕೆ ಒಂದು ಕಡಿವಾಣವನ್ನು ಎಲ್ಲೋ ಒಂದು ಕಡೆ ಹಾಕಬೇಕಾಗುತ್ತದೆ ಎನ್ನುವುದು ನನ್ನ ಭಾವನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಬೆಂಗಳೂರಿನಲ್ಲಿ ನನಗೆ ಅನೇಕ ಸಲ ಮಾಹಿತಿ ಕೊಟ್ಟಿದ್ದಾರೆ. ಮಾನ್ಯ ಗೃಹ ಸಚಿವರು ಗಮನಿಸಬೇಕು. ಬೆಂಗಳೂರಿನಲ್ಲಿ Rex Theatre ಎಂದು ಒಂದು ಇದೆಯಂತೆ. Rex Theatre ಎಂದು ಯಾವುದೋ ಒಂದು ಇದೆಯಂತೆ. ಅದರೊಳಗೆ ಒಂದು Hate Story-2 ಎಂದು ಯಾವುದೋ ಒಂದು ಸಿನಿಮಾ ಬಂದಿದೆ. ಅದು ಸಂಪೂರ್ಣವಾಗಿ ಬಹಳ ಅಶ್ಲೀಲವಾಗಿದೆ Sir, ಆ ಸಿನಿಮಾ ಓಡುತ್ತಿರುವುದರಿಂದ ಈ ತರಹದ್ದಾಗುತ್ತಿದೆಯೇನೋ ಎಂದು ಅಷ್ಟರಮಟ್ಟಿಗೆ ಅನುಮಾನ ಹುಟ್ಟಿಸುವಂತಹ ಅಶ್ಲೀಲವಾದಂತಹ ದೃಶ್ಯಗಳಿವೆ, ದಯವಿಟ್ಟು ಅದನ್ನು immediate ಆಗಿ ಅಲ್ಲಿ ಹೋಗಿ ನೋಡಿ ಎಂದು ಹೇಳಿದರು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಿಮ್ಮ ಕೈಯಲ್ಲಿಯೇ ತಾನೇ ಅಧಿಕಾರವಿರುವುದು. ಅದನ್ನೆಲ್ಲಾ ಬಂದ್ ಮಾಡಿ. ಅದರಿಂದ ಪ್ರೇರಿತರಾಗಿ ಇವತ್ತು ಯುವಕರೆಲ್ಲರೂ ಕೆಡುತ್ತಿರುವುದು.

ಶ್ರೀ ವೈ.ಎಸ್.ವಿ. ದತ್ತಾ:- ನಾನು ಹೇಳುವುದೇನೆಂದರೆ ಕೇವಲ ನೋಡುವುದಲ್ಲ. ಮಾನ್ಯ ರೋಷನ್ ಬೇಗ್‌ರವರೆ ಈ ವಿಷಯವನ್ನು ಗೃಹ ಇಲಾಖೆಯ ಗಮನಕ್ಕೆ ತನ್ನಿ immediate ಆಗಿ ಆ ಥಿಯೇಟರ್ ಅನ್ನು ಬಂದ್ ಮಾಡಿಸಿ, ಆ ರೀತಿಯಾದ ಸಿನಿಮಾಗಳನ್ನು ಬಂದ್ ಮಾಡಿಸಿಯೆಂದು ನನಗೆ ಅನೇಕ ಜನ ಫೋನ್ ಮಾಡಿ ಹೇಳಿದ್ದಾರೆ. ಪೊಲೀಸ್‌ನವರಿಗೆ ಯಾವ ಸಿನಿಮಾಗಳಲ್ಲಿ ಯಾವ ದೃಶ್ಯಗಳಿವೆಯೆಂದು ಚೆಕ್ ಮಾಡುವುದಕ್ಕೆ ಅಧಿಕಾರವಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅಧಿಕಾರವಲ್ಲ, ಅವುಗಳನ್ನು ಬಂದ್ ಮಾಡುವುದು ಸೂಕ್ತವಿದೆ.

ಶ್ರೀ ವೈ.ಎಸ್.ವಿ. ದತ್ತಾ:- ದಯವಿಟ್ಟು Hate story-2 ಎಂದು ಇದೆಯಂತೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಟಿ.ವಿ. ಗಳಲ್ಲಿ ಒಳ್ಳೊಳ್ಳೆ ಧಾರವಾಹಿಗಳು ಬಂದರೆ ಒಳ್ಳೆಯದು.

ಛೇರ್ಮನ್:- ಮಾನ್ಯ ಕಾರಜೋಳರವರೆ ಬೇಗ conclude ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಬೇಗ ಮುಗಿಸುತ್ತೇನೆ. ಹೆಚ್ಚು ಮಾತನಾಡುವುದಿಲ್ಲವೆಂದು ತಮಗೆ ಮೊದಲೇ ಮಾತು ಕೊಟ್ಟಿದ್ದೇನೆ. ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವಾದ ನಂತರ ಅವರು ಶಿಕ್ಷಣವನ್ನು ಮುಂದುವರೆಸುವುದಿಲ್ಲ. ಶಿಕ್ಷಣವನ್ನು ನಿಲ್ಲಿಸಿಬಿಡುತ್ತಾರೆ. ಆ ಕಾರಣದಿಂದ ಸರ್ಕಾರ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅವರಿಗಾಗಿ ಒಂದು ವ್ಯವಸ್ಥೆಯನ್ನು ಮಾಡಿ ಶಿಕ್ಷಣ ಕೊಡುವುದು ಮತ್ತು ಪ್ರತಿಯೊಂದು ಶಾಲೆಗಳಲ್ಲಿ ಕಡ್ಡಾಯವಾಗಿ ಅವರನ್ನು admission

ಮಾಡಿಸಿಕೊಳ್ಳುವುದಕ್ಕೆ ಸರ್ಕಾರ ಆದೇಶ ಮಾಡಬೇಕು. ಪೌರ ಕಾರ್ಮಿಕರ ಬಡ ಹೆಣ್ಣುಮಕ್ಕಳ ಮೇಲೆ ದಿನನಿತ್ಯ ಅತ್ಯಾಚಾರ, ಲೈಂಗಿಕ ಕಿರುಕುಳ ಪ್ರಕರಣಗಳಾಗುತ್ತವೆ. ಇದು ಏಕೆ ಆಗುತ್ತದೆಂದರೆ, ಸರ್ಕಾರ ಹಣ ಉಳಿಸುವುದಕ್ಕೋಸ್ಕರ ದೊಡ್ಡ ಪ್ರಯತ್ನವನ್ನು ಮಾಡಿ garbage work ಗೆ ಟೆಂಡರ್ ಅನ್ನು ಕರೆಯುತ್ತದೆ. ಟೆಂಡರ್ ತೆಗೆದುಕೊಂಡವರು ಇವರನ್ನು ಕಡಿಮೆ ಹಣ ಕೊಟ್ಟು ಕೆಲಸಕ್ಕೆ ಇಟ್ಟುಕೊಳ್ಳುವುದಲ್ಲದೆ ಲೈಂಗಿಕ ಕಿರುಕುಳವನ್ನು ಕೊಡುತ್ತಾರೆ. ಇದು ಬಹಳ ದೊಡ್ಡ ದುರಂತವಾಗಿದೆ. ಪ್ರತಿಯೊಂದು ದೊಡ್ಡ ದೊಡ್ಡ ಊರುಗಳಲ್ಲಿ, ಪಟ್ಟಣಗಳಲ್ಲಿ, ನಗರಗಳಲ್ಲಿ ಅವರ ಮೇಲೆ ದಿನನಿತ್ಯ ಲೈಂಗಿಕ ಕಿರುಕುಳವಾಗುತ್ತಿದೆ. ಅದನ್ನು ಯಾರೂ ಕೂಡ ಗಮನಿಸುವುದಿಲ್ಲ, ಏಕೆಂದರೆ ಅವರು ಬಡವರಾಗಿದ್ದು, ಅವರನ್ನು ಕೇಳುವವರೇ ಯಾರೂ ಇಲ್ಲ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಪೌರ ಕಾರ್ಮಿಕರನ್ನು ಗುತ್ತಿಗೆದಾರರ ಕೈಯಲ್ಲಿ ಕೊಡದೆ ಸರ್ಕಾರವೇ ನೇರವಾಗಿ ನೇಮಿಸಿಕೊಳ್ಳಲಿ. ಈ ಕೆಲಸವನ್ನು ಬೇರೆ ಯಾರೂ ಮಾಡುವುದಿಲ್ಲ. ಬಡವರು, SC/ST ಜನಾಂಗದವರು, ಅಸ್ಪೃಶ್ಯರು ಮಾಡುತ್ತಾರೆ. ದೌರ್ಜನ್ಯ ಪ್ರಕರಣಗಳನ್ನು ನಿಲ್ಲಿಸುವುದಕ್ಕೆ ಅವರಿಗೆ ಸರ್ಕಾರವೇ ನೇರವಾಗಿ ಕೆಲಸ ಕೊಡುವಂತಹ ವ್ಯವಸ್ಥೆಯಾಗಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಒಂದು ಕಡೆ ಶಾಲಾ-ಕಾಲೇಜುಗಳವರು ನಮ್ಮ ಜವಾಬ್ದಾರಿಯಿಲ್ಲವೆಂದು ಹೇಳುತ್ತಾರೆ, ಮತ್ತೊಂದು ಕಡೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಾನ್ಯ ಮಂತ್ರಿಗಳು ಸರ್ಕಾರದ ಜವಾಬ್ದಾರಿಯಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಇನ್ಯಾರು ಜವಾಬ್ದಾರಿ? ಇವರನ್ನು ರಕ್ಷಣೆ ಮಾಡುವವರು ಯಾರು? ಸರ್ಕಾರ ಇಂತಹ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುವಲ್ಲಿ ಹಿಂದೇಟು ಹಾಕಬಾರದು, ಯಾರನ್ನು ರಕ್ಷಣೆ ಮಾಡುವಂತಹ ಕೆಲಸ ಮಾಡಬಾರದೆಂದು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):- ಮಾನ್ಯ ಉಪಾಧ್ಯಕ್ಷರೆ, ನಿಯಮ 69 ರ ಅಡಿಯಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಒಂದು ವಾರದಿಂದ ನಡೆದಂತಹ ರೇಪ್ ಕೇಸ್ ಎಷ್ಟರಮಟ್ಟಿಗೆ ರಾಜ್ಯವ್ಯಾಪಿ ಹಬ್ಬುತ್ತಿದೆ ಮತ್ತು ಇಂತಹ ಪ್ರಕರಣಗಳು ಇಡೀ ದೇಶದಲ್ಲಿ ನಡೆಯಬಹುದು, ಇಡೀ ರಾಷ್ಟ್ರದಲ್ಲಿ ನಡೆಯಬಹುದು ಹಾಗೆಂದು ನಮ್ಮ ರಾಜ್ಯದಲ್ಲೂ ಕೂಡ ಅದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಆಗುವುದಿಲ್ಲ. ವಿರೋಧಪಕ್ಷ, ಆಡಳಿತ ಪಕ್ಷ ಎನ್ನುವುದಕ್ಕಿಂತ, ಈ ವಿಚಾರದಲ್ಲಿ serious ಆಗಿ prevent ಮಾಡುವುದಕ್ಕೆ ಸದನ, ಸರ್ಕಾರ ಹಾಗೂ ಇಲಾಖೆ ಯಾವ ಹೆಜ್ಜೆ ಇಡುತ್ತದೆಂಬುದೇ ಬಹಳ ಮುಖ್ಯವಾಗಿದೆ. ಇಲ್ಲಿಯವರೆಗೆ ಮಾನ್ಯ ಕುಮಾರಸ್ವಾಮಿಯವರು ಅಂಕಿ ಸಂಖ್ಯೆಗಳನ್ನೆಲ್ಲಾ ಹೇಳಿದರು. ಆದರೆ ಅವೆಲ್ಲವೂ ಸಹ ಕಾಣದ ರೀತಿ ನಡೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಯಾರೂ ಹೆಚ್ಚಿಗೆ ಗಮನವನ್ನು ಹರಿಸುತ್ತಿರಲಿಲ್ಲ. ಮೊನ್ನೆ ಪುಲಿಕೇಶಿ ನಗರದಲ್ಲಿ ನಡೆದಂತಹ incident ಹಿಡಿದು ಮೊನ್ನೆ, ನಿನ್ನೆ, ಇವತ್ತಿನ ಪತ್ರಿಕೆಯಲ್ಲಿ ನೋಡಿದರೆ ಪೂರ್ಣ ಪ್ರಮಾಣದಲ್ಲಿ ರಾಜ್ಯದಲ್ಲಿ ದಿನನಿತ್ಯ ಎಲ್ಲಾ ಕಡೆ ನಡೆಯುತ್ತಿದೆಯೆಂಬುದನ್ನು ನೋಡಬಹುದು. ಇದು ಇವತ್ತಿಗೆ ಮಾತ್ರ ಸೀಮಿತವಲ್ಲ. ಬಹಳ ವರ್ಷಗಳಿಂದ ಬಹಳ ದಿವಸಗಳಿಂದ ನಡೆದುಕೊಂಡು ಬರುತ್ತಿದೆಯೆಂಬುದನ್ನು ಇವತ್ತು ಮಾಧ್ಯಮದ ಮೂಲಕ ಗಮನಿಸಬಹುದು. ಒಂದು ವರ್ಷದ ಹಿಂದೆ ಒಂದು incident ನಡೆದ ಬಗ್ಗೆ ಹೇಳುತ್ತೇನೆ. ಬಹಳ ಪ್ರತಿಷ್ಠಿತ ಒಬ್ಬ ವ್ಯಕ್ತಿಯ ಪತ್ನಿ ಕಬ್ಬನ್ ಪಾರ್ಕ್‌ನಲ್ಲಿ walk ಹೋಗಬೇಕಾದರೆ ಅವರ ಮೇಲೆ ರೇಪ್ attempt ಆಗಿತ್ತು. ಅವರ ಹೆಸರನ್ನು ಹೇಳುವುದಕ್ಕಾಗುವುದಿಲ್ಲ. ಹೇಳಿದರೆ ಬಹಳ ತಪ್ಪಾಗುತ್ತದೆ. ಈ ಪ್ರತಿಷ್ಠಿತ ವ್ಯಕ್ತಿ ಇಲಾಖೆಯ ಪೋಲಿಸ್ ಅಧಿಕಾರಿಗಳನ್ನು ಕರೆಸಿ ನಡೆದ ವಿಚಾರವನ್ನು ಮತ್ತು ಅವರ ಪತ್ನಿಯ ಪರಿಸ್ಥಿತಿಯನ್ನು ವಿವರಣೆ ಮಾಡಿದಾಗ ಸರ್ಕಾರದ ಹಾಗೂ ರಾಜ್ಯದ ಗೌರವವನ್ನು ಕಾಪಾಡುವುದಕ್ಕೋಸ್ಕರ case complaint ಮಾಡುವುದಿಲ್ಲ ಆದರೆ ಎಡರು ದಿವಸದೊಳಗೆ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದ ನಂತರ. ಅಧಿಕಾರಿಗಳು ತಪ್ಪಿತಸ್ತರನ್ನು ಹಿಡಿದು ಕ್ರಮ

ಕೈಗೊಳ್ಳುತ್ತೇವೆಂದು ಅವರಿಗೆ promise ಮಾಡಿ ನಂತರ ಕ್ರಮವನ್ನು ಕೈಗೊಂಡಿದ್ದಾರೆ. ವಿಕೃತ ಮನೋಭಾವವುಳ್ಳಂತಹ ಕೆಲವು ಯುವಕರು ಮಾಡುವಂತಹ ತಪ್ಪು ಒಂದು ಕಡೆಯಾದರೆ, ಇನ್ನೊಂದಷ್ಟು ಈ ರೌಡಿಗಳ ಕಡೆಯವರಿಂದ ಆಗುವುದು. ಮೊನ್ನೆ ಪುಲಿಕೇಶಿನಗರದಲ್ಲಿ ಒಂದು ಹೆಣ್ಣುಮಗುವನ್ನು ಮನೆಯ ಮುಂದಿನಿಂದ ಕರೆದುಕೊಂಡು ಹೋಗಿ ಕಾರಿನಲ್ಲಿ ಸುತ್ತಾಡಿಸಿ ಈ attempt ಮಾಡಿದ್ದಾರೆ ಅವರಿಗೆ ಒಬ್ಬ ಬಾಸ್ ದೊಡ್ಡ ರೌಡಿ ಇದ್ದಾನೆ. ಇವರೆಲ್ಲರೂ ಅವನ ಶಿಷ್ಯರು. ಹೆಣ್ಣುಮಗಳು ಪೊಲೀಸ್ ಸ್ಟೇಷನ್‌ಗೆ ಬಂದಾಗ SI ಇಲ್ಲ, CPI ಇಲ್ಲ, ASI ಸರಿಯಾದ ರೀತಿಯಲ್ಲಿ complaint ತೆಗೆದುಕೊಂಡು attend ಮಾಡಿದ್ದರೆ ಬಹುಶಃ ಈ ವಿಷಯ ಇಷ್ಟು ಬೆಳಕಿಗೆ ಬರುತ್ತಿರಲಿಲ್ಲ. ಅವರು ಹೆಣ್ಣುಮಗಳ ಬಗ್ಗೆ ತಾತ್ಸಾರವನ್ನು ತೋರಿಸಿದ ಹಿನ್ನೆಲೆಯಲ್ಲಿ ಯಾವ ಅಧಿಕಾರಿಗಳು ಈ ಕೇಸ್‌ನಲ್ಲಿ serious ತೋರಿಸದಿದ್ದಾಗ ಈ ವಿಚಾರ ಇವತ್ತು media ಗೆ ಬಂದು public ಆಯಿತು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಯಾವುದಕ್ಕೆ ಹೆಚ್ಚು concentrate ಮಾಡಬೇಕು ಯಾವುದನ್ನು ಸ್ವಲ್ಪ light ಆಗಿ ತೆಗೆದುಕೊಳ್ಳಬೇಕೆಂಬುದು ಕೂಡ ಬಹಳ ಮುಖ್ಯವಾಗಿದೆ. ಸರ್ಕಾರದ ಬಗ್ಗೆ ನಾವು ಮಾತನಾಡಿದರೆ, ಮಾನ್ಯ ಸಿದ್ಧರಾಮಯ್ಯನವರ leadership ನಲ್ಲಿ ಸರ್ಕಾರ ನಡೆಯುತ್ತಿದೆಯೆಂದು ಹೇಳುತ್ತೇವೆ. ಅವರು ಹೇಗೆ ಹೋಗುತ್ತಾರೆ ಅದರ ಮೇಲೆ ಸರ್ಕಾರ ಹೋಗುತ್ತದೆ. ಇನ್ನುಳಿದ 30 ಜನ ಮಂತ್ರಿಗಳು ಇಲ್ಲಿ ಪ್ರಮುಖವಾಗುವುದಿಲ್ಲ. ಮಾನ್ಯ ಸಿದ್ಧರಾಮಣ್ಣನವರೇ ಪ್ರಮುಖವಾಗುವುದು. ಆ ರೀತಿಯಾದ ಒಂದು leadership ಕೊರತೆ ಕೂಡ ಪೊಲೀಸ್ ಇಲಾಖೆಯಲ್ಲಿ ಎದ್ದು ಕಾಣುತ್ತದೆ. DG ಇರಬಹುದು, Commissioner ಇರಬಹುದು ಅವರನ್ನು tune up ಮಾಡುತ್ತೀರೋ, ಹೆಚ್ಚು ಶಕ್ತಿ ತುಂಬುತ್ತೀರೋ, ಇಂತಹ ವಿಚಾರದಲ್ಲಿ ಆತ್ಮಸ್ಥೈರ್ಯ ತುಂಬುತ್ತೀರೋ ಅದು ನಮಗೆ ಗೊತ್ತಿಲ್ಲ. ಆದರೆ ಪೊಲೀಸ್ ಇಲಾಖೆಯಲ್ಲಿ leadership ಕೊರತೆ, ದಕ್ಷತೆಯ ಕೊರತೆ ಎದ್ದುಕಾಣುತ್ತಿದ್ದು, ಈ ಬಗ್ಗೆ ಹೊರಗಡೆ ಚರ್ಚೆಯಾಗುತ್ತಿದೆ. ಒಬ್ಬ ನಮ್ಮ ಅಧಿಕಾರಿ ಬಂದು ಹೇಳಿದರು ಹಿಂದೆ ಒಬ್ಬ ಕಮಿಷನರ್ ಇದ್ದಂತಹ ಸಂದರ್ಭದಲ್ಲಿ ಸಣ್ಣ incident ಮೇಲೆ ಒಬ್ಬ

ರೌಡಿಯನ್ನು ಸ್ಟೇಷನ್‌ಗೆ ಕರೆದು ಹೋಗಿ ಹೊಡೆದು ಅವನ ಮೇಲೆ ಕ್ರಮ ಕೈಗೊಂಡಾಗ ಆ ರೌಡಿ ಕಡೆಯವರು ಕಮಿಷನರ್ ಬಳಿ ಬಂದು Circle Inspector ಮೇಲೆ complaint ಮಾಡುತ್ತಾರೆ, ಕಮಿಷನರ್ ಅವರ ಮುಂದೆ Circle Inspector ಅನ್ನು ಬೈದು ನಂತರ ಕರೆದು ಇಂತಹ ರೌಡಿಗಳನ್ನು ಒದ್ದು ಒಳಗೆ ಹಾಕಿ ಯಾವ ಕೇಸ್ ಬೇಕಾದರು ಫಿಟ್ ಮಾಡಿ ನಿಮಗೆ support ಮಾಡುತ್ತೇನೆಂದು ಪ್ರೋತ್ಸಾಹಿಸುತ್ತಾರೆ. ಆದರೆ ಕೆಲವೊಮ್ಮೆ ಇಂತಹ ಒಂದು ಮಾನಸಿಕವಾದ ಸ್ಥೈರ್ಯವನ್ನು ತುಂಬುವ ಶಕ್ತಿ Higher Officer ಗಳಲ್ಲಿ ಇಲ್ಲವಾದರೆ ಬಹುಶಃ ಇಂತಹ ಪ್ರಕರಣಗಳು ದಿನನಿತ್ಯ ಹೆಚ್ಚಾಗುತ್ತವೆ. ನಿನ್ನೆ ಮಂಡ್ಯ ಜಿಲ್ಲೆಯಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುವ ಹುಡುಗಿಗೆ ಎಸ್.ಎಂ.ಎಸ್. ಕಳುಹಿಸಿ nuisance ಮಾಡುವಂತಹ ಒಂದು ಘಟನೆ ನಡೆದಿದೆ. ಘಟನೆ ನಡೆದಾಗ ಹುಡುಗಿಯ ಅಣ್ಣ ಬೆಂಗಳೂರಿನಲ್ಲಿದ್ದಾನೆ, ಅವನು ಊರಿಗೆ ಹೋದಾಗ ಎಸ್.ಎಂ.ಎಸ್ ಕಳುಹಿಸಿರುವ ಹುಡುಗನಿಗೂ ಈ ಹುಡುಗಿಯ ಅಣ್ಣನಿಗೂ ಗಲಾಟೆಯಾಗಿದೆ. ಗಲಾಟೆಯಾದಾಗ ಇಬ್ಬರಿಗೂ ಏಟಾಗಿದೆ ಮತ್ತು ಗಾಯ ಕೂಡ ಆಗಿದೆ. ಆದರೆ ಪೊಲೀಸ್‌ನವರು ಎಸ್.ಎಂ.ಎಸ್ ಕಳುಹಿಸಿ ಇಲ್ಲಿಯವರೆಗೆ nuisance ಮಾಡಿರುವ ಹುಡುಗನ್ನು ಬಿಟ್ಟು, ಗಲಾಟೆಯಾಗಿರುವುದನ್ನು major incident ಮಾಡಿ ಹುಡುಗಿಯ ಅಣ್ಣನನ್ನು arrest ಮಾಡಿ ಒಳಗೆ ಕಳುಹಿಸಿದ್ದಾರೆ. ಪೊಲೀಸ್ ಇಲಾಖೆಯವರು ನಾವು ಮನುಷ್ಯರೆಂದು ತಿಳಿದುಕೊಳ್ಳಬೇಕು. ಮಾನವೀಯತೆ ನಿಮಗೆ ಇರಬೇಕು. ತಂಗಿಗೆ ಎಸ್.ಎಂ.ಎಸ್ ಮಾಡಿ ಈ ರೀತಿ ತರ್ಲೆ ಮಾಡಿದಾಗ ಯಾವೊಬ್ಬ ಅಣ್ಣನು ಕೂಡ ಕೈಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕಾನೂನನ್ನು ಮೀರಿರಬಹುದು, ಕಾನೂನನ್ನು ಕೈಗೆ ತೆಗೆದುಕೊಂಡಿರಬಹುದು ಆದರೆ ನೀವು ಅವನಿಗೆ sympathy ತೋರಿಸಬೇಕಾ ಅಥವಾ ಎಸ್.ಎಂ.ಎಸ್ ಕಳುಹಿಸಿದವನಿಗೆ sympathy ತೋರಿಸಬೇಕೆ ಎಂಬುದು ಬಹಳ ಮುಖ್ಯವಾದ ವಿಷಯವಾಗಿದೆ. ಇಂತಹ ಅಧಿಕಾರಿಗಳಲ್ಲಿ ಲ್ಯಾಪ್ಸ್ ಅನ್ನು ನಾವು ಇಟ್ಟುಕೊಂಡು ಬಹುಶಃ ಮಾನ್ಯ ಸಿದ್ಧರಾಮಣ್ಣ ನವರು 10 ಜನ ಗೃಹ ಮಂತ್ರಿಗಳನ್ನು ಬದಲಾವಣೆ

ಮಾಡಿದರೂ ಕೂಡ ಇದು ಸರಿಯಾಗುವುದಿಲ್ಲ. ಅಧಿಕಾರಿಗಳಲ್ಲಿ ಇಂತಹ ಸೂಕ್ಷ್ಮವಾದ ವಿಚಾರಗಳನ್ನು ಹಾಗೂ ಧೈರ್ಯ ತುಂಬುವುದು ಬಹಳ ಮುಖ್ಯ. ಅದರಲ್ಲೂ ಬೆಂಗಳೂರಿನಲ್ಲಿ ಈಗ ನಡೆಯುತ್ತಿರುವಂತಹ ಘಟನೆಯಿಂದ, ಮಾನ್ಯ ಶಿವಲಿಂಗೇಗೌಡರು ಹೇಳಿದರು, ಫಿಲಂನಲ್ಲಿರಬಹುದು, ಧಾರಾವಾಹಿಗಳಲ್ಲಿರಬಹುದು ಇವೆಲ್ಲದರ influence ಇದೆ. ರಾಷ್ಟ್ರ ಮಟ್ಟದಲ್ಲಿ ಇದಕ್ಕೆ ನಿಬಂಧನೆ ಕೊಡುವ ಅವಶ್ಯಕತೆಯಿದೆಯೆಂದು ಅನಿಸುತ್ತದೆ. ರಾಜ್ಯದಲ್ಲಿನ ಟಿ.ವಿ.ಯಲ್ಲಿ ಬರುವ ಧಾರಾವಾಹಿಗಳಿಂದ ಮತ್ತು ಫಿಲಂ ಗಳಿಂದ ಜನರ ಮೇಲೆ ಬೇರೆ ರೀತಿಯ ಪರಿಣಾಮ ಬೀರದ ರೀತಿ ಚಿತ್ರೀಕರಣ ಮಾಡುವುದು ಸೂಕ್ತವಾಗಿದೆ. ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಹೇಗೆ prevent ಮಾಡುವುದಕ್ಕೆ ಸಾಧ್ಯವೆಂಬುದು ಬಹಳ ಮುಖ್ಯವಾದುದು. ಬೆಂಗಳೂರಿನಲ್ಲಿ ಏನೇ ಒಂದು ಸಣ್ಣ ಘಟನೆಯಾದರೂ ಇಡೀ ರಾಜ್ಯಕ್ಕೆ ಇದು ಹಬ್ಬುತ್ತದೆ ಮತ್ತು ಇಡೀ ರಾಜ್ಯದ ಜನರ ಮೇಲೆ ಇದರ effect ಆಗುತ್ತದೆ. ನಾವೆಲ್ಲರೂ ಕೂಡ ತಲೆತಗ್ಗಿಸಬೇಕಾದ ಸನ್ನಿವೇಶ ಬರುತ್ತದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಗೌರವ ಹಾಳಾಗುವುದಕ್ಕೆ ಇದು ಕಾರಣವಾಗುತ್ತದೆ. ಬೆಂಗಳೂರಿನ ಅಭಿವೃದ್ಧಿ ಒಂದರಲ್ಲೇ ಅಲ್ಲದೆ, ಜನರನ್ನು, ಮಹಿಳೆಯರನ್ನು ರಕ್ಷಣೆ ಮಾಡುವುದರಲ್ಲಿ, ಯುವತಿಯರು ಮುಕ್ತವಾಗಿ ಓಡಾಡುವ ವಾತಾವರಣ ಸೃಷ್ಟಿ ಮಾಡುವುದರಲ್ಲಿ ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ. ನಮ್ಮ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ ನಮಗೆ ಹಳೆಯ ಸಿದ್ಧರಾಮಣ್ಣನವರು ಬೇಕೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯನವರು ಮೊದಲು ಮೀಟಿಂಗ್‌ನಲ್ಲಿ ಕುಳಿತು ಅಧಿಕಾರಿಗಳನ್ನು ಅದುರಿಸಿದರೆ ಅವರೆಲ್ಲರೂ ಪ್ಯಾಂಟ್ ಸರಿಮಾಡುವಷ್ಟು ಹೆದರುತ್ತಿದ್ದರು. ಇಂದು ಆ ರೀತಿ ಆಗುತ್ತಿಲ್ಲವೆಂದು ಹೊರಗಡೆ ಎಲ್ಲರೂ ಚರ್ಚೆ ಮಾಡಿಕೊಳ್ಳುತ್ತಿದ್ದಾರೆ. ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾವು ಮಾತ್ರ ಸಿದ್ಧರಾಮಣ್ಣನವರ ಮೇಲೆ ಬಹಳ ಪ್ರೀತಿ ಇಟ್ಟುಕೊಂಡಿರುವಂತಹವರು. ನೀವು

ಮಾತ್ರ ಹಳೆಯ ಸಿದ್ಧರಾಮಣ್ಣನಾಗಿ ಅಧಿಕಾರಿಗಳನ್ನು ಎದುರಿಸಲೇ ಬೇಕಾಗುತ್ತದೆ.

ಶ್ರೀ ಆರ್. ಅಶೋಕ್:– ಹಳೆಯ ಸಿದ್ಧರಾಮಣ್ಣ ಎಂದರೆ ಜೆ.ಡಿ.ಎಸ್.ನಲ್ಲಿದ್ದ ಸಿದ್ಧರಾಮಣ್ಣ ಎಂದು ತಿಳಿದುಕೊಳ್ಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ:– ಜೆ.ಡಿ.ಎಸ್. ನಲ್ಲಿರುವಾಗ ಸಿದ್ಧರಾಮಣ್ಣ ಬೇರೆ. ಈಗ ಇರುವ ಸಿದ್ಧರಾಮಣ್ಣ ಬೇರೆ. ಅದೇನೋ ನಿಜ.

ಶ್ರೀ ಎಂ.ಟಿ. ಕೃಷ್ಣಪ್ಪ:– ಈಗ ನೀವು ಸಪ್ಪೆ ಸಿದ್ಧರಾಮಣ್ಣ ಆಗಿದ್ದೀರಿ. ವಿರೋಧ ಪಕ್ಷದಲ್ಲಿದ್ದ ಸಿದ್ಧರಾಮಣ್ಣನ ರೀತಿ ಇಲ್ಲ. ಮುಂಚೆ ಇರುವ ಹಾಗೆ ಇಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ಆಡಳಿತದಲ್ಲಿ ದಕ್ಷತೆ ಮತ್ತು ನಿಮ್ಮ ಅಧಿಕಾರಿಗಳಿಗೆ ಚುರುಕು ಮುಟ್ಟಿಸುವಲ್ಲಿ ನೀವು ಹೆಚ್ಚಿನ ಗಮನಹರಿಸಬೇಕೆಂದು ನನ್ನ ವಿನಂತಿ. ಸಿಟಿಯಲ್ಲಿ ಅಧಿಕಾರಿಗಳ ವರ್ಗಾವಣೆ ಸಹ ಬಹಳ effect ಆಗುತ್ತಿದೆ. ಅಧಿಕಾರಿಗಳ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಅವರ performance ಮೇಲೆಯೇ ಮಾಡಬೇಕಾಗುತ್ತದೆ. ಪೊಲೀಸ್ ಕಮೀಷನರ್‌ರಿಂದ ಹಿಡಿದು, Sub Inspector, Circle Inspector ವರೆವಿಗೂ ಯಾವುದೋ ಒಂದು ರೂರಲ್ ಸ್ಟೇಷನ್‌ನಲ್ಲಿ 10–20 ಸಣ್ಣ ಪುಟ್ಟ ಕೇಸ್‌ಗಳನ್ನು attend ಮಾಡಿರುವವರನ್ನು ಇಲ್ಲಿ ತಂದು ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಮತ್ತು ದುಡ್ಡು, relative, community ಗೆ ಒಳಗಾಗಿ influence ಮಾಡಿಕೊಂಡು 50 ವರ್ಷಗಳಿಂದ ಇಲ್ಲಿಯೇ ಗೂಟಾ ಹೊಡೆದು ಕೊಂಡು ಇದ್ದರೆ ಅದೂ ಕೂಡ ಸೂಕ್ತವಲ್ಲ. ಇದನ್ನು ಸಹ ಮಾರ್ಪಾಡು ಮಾಡಬೇಕು. ಬೆಂಗಳೂರನ್ನು ಎಷ್ಟು ಭದ್ರವಾಗಿ ಕಾಪಾಡುತ್ತಿರೋ, ಇಡೀ ರಾಜ್ಯವನ್ನು ಕಾಪಾಡಿದಂತಾಗುತ್ತದೆ. ಏಕೆಂದರೆ ಇಲ್ಲಿ ಒಂದು ಕೋಟಿ ಜನರಿರುತ್ತಾರೆ. ಒಂದು ಕೋಟಿ ಜನರಿರುವಂತಹ ಈ ಬೆಂಗಳೂರು ನಗರಕ್ಕೆ ಎಲ್ಲಾ ಇಲಾಖೆಗಳಿಗಿಂತಲೂ ಪೊಲೀಸ್ ಇಲಾಖೆ ಹೆಚ್ಚಿನ ಗಮನ

ಹರಿಸಬೇಕಾಗುತ್ತದೆ. ಜೊತೆಗೆ ಈ ಹಿಂದೆ 2–3 ಘಟನೆಗಳು ಕುರಿತು ಮಾತನಾಡುವ ಸಂದರ್ಭದಲ್ಲಿ ಜಿ.ಪಿ.ಎಸ್. ಪದ್ಧತಿ ಎಲ್ಲಾ vehicle ಗಳಲ್ಲಿಯೂ ಇದೆ. ಎಲ್ಲಾ vehicle ಗಳು ಗಸ್ತು ಮಾಡುವುದಕ್ಕೆ ಅಧಿಕಾರಿಗಳು ಸೂಚನೆಯನ್ನು ಕೊಡುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವ್ಯಾವ ವಾಹನ, ಯಾವ್ಯಾವ ಅಧಿಕಾರಿ ಯಾವ್ಯಾವ ಸಮಯದಲ್ಲಿ ಎಲ್ಲೆಲ್ಲಿ ಇರಬೇಕೆಂಬ ಬಗ್ಗೆ ಒಂದು ಚಾರ್ಟ್ ಮಾಡಿ ಕಮೀಷನರ್ ಆಫೀಸಿನಲ್ಲಿ ಇಟ್ಟಿರುತ್ತೀರಿ. ಬಹುಶಃ ಅದು ಇಲ್ಲವೆನ್ನುವ ಮಾಹಿತಿ ನನಗಿದೆ. ಕಬ್ಬನ್ ಪಾರ್ಕಿನಲ್ಲಿ, ಟೀ ಕಾಫಿ ಅಂಗಡಿಗಳ ಹತ್ತಿರ, ಕಾಫಿ ಡೇ ಹತ್ತಿರ ಇದ್ದರೆ ಉಪಯೋಗವಿಲ್ಲ. ಶಾಲೆಗಳ ಹತ್ತಿರ, ಮಹಿಳಾ ಮತ್ತು ಪಿ.ಜಿ. ಹಾಸ್ಟೆಲ್‌ಗಳ ಹತ್ತಿರ ಅಥವಾ ಎಲ್ಲೆಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಿವೆಯೋ ಅದನ್ನು ಗುರುತಿಸಿರುತ್ತಾರೋ ಅಂತಹ ಕಡೆಗಳಲ್ಲಿ ಹೋಗುವುದಕ್ಕೆ ಮತ್ತು ಗಸ್ತು ಮಾಡುವುದಕ್ಕೆ ಚಾರ್ಟ್ ಮಾಡಿಕೊಟ್ಟರೆ, ಅದು ಕಮೀಷನರ್ ಕಛೇರಿಯಲ್ಲಿ ಮಾಹಿತಿ ಇರುತ್ತದೆ. ಎಷ್ಟೇ ನೇಮಕಾತಿ ಮಾಡಿದರೂ ಈ ಜನಸಂದಣಿಗನುಗುಣವಾಗಿ ನೂರಕ್ಕೆ ನೂರರಷ್ಟು ಪೊಲೀಸ್ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ನಮ್ಮ ನಾಯಕರು ಮಾತನಾಡುವ ಸಂದರ್ಭದಲ್ಲಿ Drink and Driveಗೆ ಕೊಡುವಷ್ಟು concentration, ಹುಡುಗಿಯರನ್ನು ಚುಡಾಯಿಸುವುದಕ್ಕೆ, ಎಸ್.ಎಂ.ಎಸ್. ಮಾಡುವುದಕ್ಕೆ, ರೇಪ್ ಕೇಸ್ ಮಾಡಿದವರಿಗೆ ನಿಮ್ಮ ಪೊಲೀಸ್ ಇಲಾಖೆ ಆಸಕ್ತಿ ತೋರಿಸುತ್ತಿಲ್ಲ. ಯಾವ ರಸ್ತೆಯಲ್ಲಿ ನೋಡಿದರೂ Drink and drive ಗೆ ಸಂಬಂಧಿಸಿದಂತೆ 20 ಜನ ಪೊಲೀಸರು ನಿಂತಿರುತ್ತಾರೆ. ಅದೊಂದು ದೊಡ್ಡ ಅಪರಾಧವಾಗಿ, ಅವರನ್ನು ಹಿಡಿದು ಅವರ ಹತ್ತಿರ 100 ರೂ ದಂಡ ತೆಗೆದುಕೊಳ್ಳುವುದು ಇಲ್ಲವೆಂದು 100 ರೂ.ಗಳ ಕೇಸ್ ಹಾಕುವುದೋ ಗೊತ್ತಿಲ್ಲ. ಈ ರೀತಿ ವಾರಗಟ್ಟಲೆ war footingನಲ್ಲಿ ನಡೆಯುತ್ತದೆ. ಒಂದು ವಾರದಿಂದ ಈ ಕೇಸಿಗೆ ಈ ರೀತಿ ಏಕೆ concentrate ಮಾಡಲಿಲ್ಲ? ಕಳೆದ ಆರು ತಿಂಗಳಿಂದ ಯಾವುದೇ ರೌಡಿಗಳನ್ನು ಆರೆಸ್ಟ್ ಮಾಡಲಿಲ್ಲ, ಫೆರೆಡ್ ಮಾಡಲಿಲ್ಲ. ಮೊದಲೆಲ್ಲಾ ದೊಡ್ಡ ದೊಡ್ಡ ರೌಡಿಗಳನ್ನು ಕರೆದು ಫೆರೇಡ್ ಮಾಡುತ್ತಿದ್ದರು, ರಸ್ತೆಯಲ್ಲಿ ನಿಲ್ಲಿಸುತ್ತಿದ್ದರು. ಈ ರೀತಿ ಮಾಡಿದಾಗ ಅವರಿಗೆ

ಮತ್ತು ಅವರ ಶಿಷ್ಯರಿಗೆ ಭಯ ಭೀತಿ ಬರುತ್ತದೆ. ನಂತರ ಅವರು ಈ ರೀತಿ ಮಾಡುತ್ತಿರಲಿಲ್ಲ. ಆದರೆ ಈ ರೀತಿ ನಡೆಯುತ್ತಿಲ್ಲವೆಂದು ನನಗೆ ಮಾಹಿತಿಯಿದೆ. ಇದರ ಜೊತೆಗೆ ಯಾವ್ಯಾವ ಪೊಲೀಸ್ ಸ್ಟೇಷನ್‌ನಲ್ಲಿ ಯಾವ ಇನ್ಸ್‌ಪೆಕ್ಟರ್ ಎಷ್ಟೊತ್ತಿಗೆ ಬರುತ್ತಾರೆ, ACP ಎಷ್ಟೊತ್ತಿಗೆ ಬರುತ್ತಾರೆ, ಯಾವ್ಯಾವ ಕೇಸಿನಲ್ಲಿ ಯಾವ ರೀತಿ behave ಮಾಡುತ್ತಾರೆ ಎನ್ನುವ ಮಾಹಿತಿಯನ್ನು ತಿಳಿದುಕೊಳ್ಳುವ ಸಲುವಾಗಿ ಸಿ.ಸಿ.ಟಿ.ವಿ.ಯನ್ನು ಪೊಲೀಸ್ ಕಮಿಷನರ್ ಆಫೀಸಿನಲ್ಲಿ ಅಳವಡಿಸಿ ಗಮನಿಸುತ್ತಾ ಇದ್ದರೆ ರೀತಿಯ ಘಟನೆಗಳು ಕಡಿಮೆಯಾಗಬಹುದು. ಮಧ್ಯಾಹ್ನ 12 ಗಂಟೆಗೆ ಸಾಕಷ್ಟು ಇನ್ಸ್‌ಪೆಕ್ಟರ್‌ಗಳು ಬರುವುದನ್ನು ಗಮನಿಸಿದ್ದೇವೆ. ಎಷ್ಟೋ ಎ.ಸಿ.ಪಿ. ಗಳು ಮಧ್ಯಾಹ್ನ 3 ಗಂಟೆಗೆ ಬರುವುದನ್ನು ಸಹ ಗಮನಿಸಿದ್ದೇವೆ. ಇವೆಲ್ಲವನ್ನೂ ತಪ್ಪಿಸಬೇಕಾದರೆ, ಇಂತಹ ಮುಕ್ತವಾದಂತಹ ಆಧುನೀಕರಣ ವಾತಾವರಣದಲ್ಲಿಯೂ ಸಹ ಜನರಿಗೆ ಓಡಾಡಲಿಕ್ಕೆ ಅವಕಾಶವನ್ನು ಕೊಡದೇ ಹೋದರೆ ಎಲ್ಲರೂ ತಲೆತಗ್ಗಿಸುವ ಪರಿಸ್ಥಿತಿಯಾಗುತ್ತದೆ. ಇದರ ಜೊತೆಗೆ ನಾವು Judiciaryಯ ವಿಶ್ವಾಸವನ್ನೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು Chief Justice ಅವರೊಂದಿಗೆ ಮಾತನಾಡುವುದು ತಪ್ಪಲ್ಲ. ಕಾನೂನಿನ ಬಗ್ಗೆ ಅವರಿಂದಲೂ ಸಲಹೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೊನ್ನೆ ಮಾನ್ಯ ಶಾಸಕರಾದ ಅಶೋಕ ರವರು ಗೂಂಡಾ ಕೇಸ್ ಏಕೆ ಮಾಡಬಾರದು ಎಂದು ಹೇಳಿದರು. ಯಾವುದೋ ಒಂದು ಕೇಸ್‌ನಡಿ ಮಾನವೀಯತೆಯ ದೃಷ್ಟಿಯಿಂದ ಜಡ್ಜ್ ಅವರು ಅಪರಾಧಿಯನ್ನು ಒಳಗೆ ಹಾಕಬಹುದು, ಪ್ರಭಾವಿ ವಕೀಲರೊಬ್ಬರು ಇದರ ವಿರುದ್ಧ ನಿಂತು ಕೊಂಡಾಗ ಇದು ಪ್ರಾವಿಷನ್ ಇಲ್ಲವೆಂದು ಇದನ್ನು ತೆಗೆದು ಹಾಕಬಹುದು. ದಯಮಾಡಿ ಗೂಂಡಾ ಕೇಸ್ ಬಗ್ಗೆ ನಿಮ್ಮ ಕಾನೂನಿನಲ್ಲಿ ಮಾರ್ಪಾಡು ಮಾಡಿ.

ಶ್ರೀ ಆರ್. ಅಶೋಕ್:- ಒಂದು ಸಾರಿ ಒಳಗೆ ಹಾಕಿದರೆ ಒಂದು ವರ್ಷ ಹೊರಗೆ ಬರುವ ಹಾಗಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ರೇಪ್ ಕೇಸ್‌ನ್ನು ಗೂಂಡಾ ಕೇಸ್‌ನ್ನಾಗಿ ಪ್ರಾವಿಷನ್ ಮಾಡುವುದಕ್ಕೆ ಬರುವುದಿಲ್ಲವೆಂಬ ಮಾಹಿತಿ ನನಗೆ ಇದೆ. ಅದಕ್ಕೆ ಹಿನ್ನೆಲೆ ಇರಬೇಕು, 4–5 ಕೇಸ್ ಇರಬೇಕು, ಬೇರೆ ಬೇರೆ ಇರಬೇಕೆಂದು ಇದೆ. ಸುಮ್ಮನೆ ದಬ್ಬಾಳಿಕೆಗೆ ಗೂಂಡಾ ಕೇಸ್ ಹಾಕಿಬಿಡಿ ಎಂದು ಹೇಳಿದರೆ ಅದು stand ಆಗಬೇಕಲ್ಲವೇ? ಅದನ್ನು modify ಮಾಡಿ? ಕಾನೂನನ್ನು ಬದಲಾವಣೆಗೆ ತನ್ನಿ? ತಪ್ಪೇನಾಗುತ್ತದೆ? ನಮ್ಮ ರಾಜ್ಯ ಸರ್ಕಾರದಲ್ಲಿ ಆ ರೀತಿ ಮಾಡುವುದಕ್ಕೆ ಅವಕಾಶವಿದೆ. ರೇಪ್ ಕೇಸ್‌ಗಳನ್ನು, ಎಸ್.ಎಂ.ಎಸ್., ಚುಡಾಯಿಸುವುದನ್ನೆಲ್ಲಾವನ್ನು ಗುಂಡಾ ಕೇಸ್ ಅಡಿಯಲ್ಲಿ ಬರುವ ಹಾಗೆ ಒಂದು ಕಾಯಿದೆಯನ್ನೇ ಜಾರಿಗೆ ತನ್ನಿ. ಬಲವಂತವಾಗಿ ಡಿ.ಜಿ.ಗೆ, ಕಮೀಷನರ್‌ಗೆ ಹೇಳಿ ಕೇಸ್ ಬುಕ್ ಮಾಡುವ ಬದಲು, ಕಾನೂನನ್ನು ಮಾರ್ಪಾಟು ಮಾಡಿದರೆ ಆಗ ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಪಬ್ಲಿಕ್ ಇಂಟರೆಸ್ಟ್, ರಾಜ್ಯದ ಹಿತದೃಷ್ಟಿಯಿಂದ, ಸರ್ಕಾರ judiciary ಜೊತೆ ಮಾತನಾಡಿ, ಅವರನ್ನು ವಿಶ್ವಾಸಕ್ಕೆ ತೆಗದುಕೊಂಡು ಇಂತಹ ಕೇಸ್‌ಗಳಿಗೆ ಕೋರ್ಟಿನಲ್ಲಿಯೂ ಸಹ ಹೆಚ್ಚಿನ ಪ್ರೋತ್ಸಾಹ ಸಿಗದೇ, ನಮ್ಮ ಭದ್ರತೆಯನ್ನು ಕಾಪಾಡುವುದರ ಮೂಲಕ ಇದನ್ನು ಸ್ವಲ್ಪ ಮಟ್ಟಗೆ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಪೊಲೀಸ್, judiciary ಮತ್ತು prosecution ಇವರನ್ನೊಳಗೊಂಡಂತೆ ಒಂದು ಕಮಿಟಿ ಮಾಡಿ ಈ ಒಂದು ಕೇಸಿನ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿ ಇದರ ಬಗ್ಗೆ ಕಾನೂನಿನ ಮಾರ್ಪಾಡು ಮಾಡುವುದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಸದನದ ಮುಖಾಂತರ ಹೇಳಬಯಸುತ್ತೇನೆ.

ಇದರ ಜೊತೆಗೆ ಸೆಕ್ಷನ್ 376 ನಲ್ಲಿ ತಿದ್ದುಪಡಿಯನ್ನು ತರದೇ ಹೋದರೆ, ಬಹಳಷ್ಟು effective ಆಗಿ ಈ ಒಂದು ಕೇಸ್‌ಗಳಲ್ಲಿ ಒಂದು punishment ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದಿದೆ. ಈಗಾಗಲೇ ಪ್ರತ್ಯೇಕವಾಗಿ ಮಹಿಳಾ ಕೋರ್ಟುಗಳನ್ನು Fast Track Court ಗಳನ್ನು, ಮಾಡುತ್ತೀರೆಂದು ಹೇಳಿದ್ದೀರಿ. ಲಿಂಗ ಸಂಬಂಧ ಪ್ರಕರಣಗಳಿಗೆ

ಸಂಬಂಧಿಸಿದಂತೆ ರೇಪ್ ಇರಬಹುದು, office ಗಳಲ್ಲಿ ನ್ಯೂಸೆನ್ಸ್ ಮಾಡುವುದಿರಬಹುದು ಮತ್ತು ಎಸ್.ಎಂ.ಎಸ್. ಮಾಡುವುದೆಲ್ಲವನ್ನು ಇದರಲ್ಲಿ ಸೇರಿಸಬೇಕಾಗುತ್ತದೆ. ಇಂತಹ ಒಂದು ಕೆಲಸವನ್ನು ಮಾಡುವುದರ ಜೊತೆಗೆ ಪೊಲೀಸ್ ಇಲಾಖೆಯ ಸೀನಿಯರ್ ಆಫೀಸರ್ ಇರಬಹುದು, ಸಬ್ ಇನ್ಸ್‌ಪೆಕ್ಟರ್ ಇರಬಹುದು, ಇಂತಹ ಪ್ರಕರಣಗಳಲ್ಲಿ ಯಾರು ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದಿಲ್ಲ ಆ ಅಧಿಕಾರಿಗಳು ಎಷ್ಟೇ ಪ್ರಭಾವಿ ಆದರೂ, ಸಂಬಂಧವಿದ್ದರೂ ಮುಲಾಜ್ ಇಲ್ಲದೆ ಅವರ ಮೇಲೆ ಕ್ರಮ ತೆಗೆದುಕೊಂಡು ಬಿಡುವುದಲ್ಲ. ಅಂತಹ ಮಟ್ಟಕ್ಕೆ ಹೋದಾಗ ಮಾತ್ರ ಇವೆಲ್ಲವೂ ಕಂಟ್ರೋಲ್ ಆಗುತ್ತದೆ. ನಿನ್ನೆ ಆಲರ್ಟ್ ಆಗಿ ಯಾರು ದಾರಿಯಲ್ಲಿ ಸಿಗುತ್ತಾರೋ ಅವರೆಲ್ಲರನ್ನು ಅರೆಸ್ಟ್ ಮಾಡಿ ಇಷ್ಟು ಜನರನ್ನು ಹಿಡಿದ್ದೇವೆಂದು ಲೆಕ್ಕ ತೋರಿಸುವುದಲ್ಲ. ನಮ್ಮಲ್ಲಿ ಕೆಲವರು ಹೇಳುವುದೇನೆಂದರೆ, ತಿಂಗಳಿಗೆ ಐದು ಕೇಸ್‌ಗಳನ್ನು ಹಾಕಬೇಕೆಂದು ಎಸ್.ಪಿ. ಅವರು ಹೇಳಿರುವುದರಿಂದ ದಯಮಡಿ ಬಿಟ್ಟುಬಿಡಿ ಎನ್ನುತ್ತಾರೆ. ಈ ರೀತಿಯ ಕೇಸ್‌ಗಳನ್ನು ದಾಖಲೆ ಮಾಡುವುದರಿಂದ ರಾಜ್ಯದ ವ್ಯವಸ್ಥೆ ಸರಿಹೋಗುವುದಿಲ್ಲ. ವ್ಯವಸ್ಥೆ ಸರಿ ಹೋಗಬೇಕಾದರೆ ನಾವು ಪ್ರಾಮಾಣಿಕವಾದ ಅಧಿಕಾರಿಗಳನ್ನು ನೇಮಕ ಮಾಡಬೇಕು. ಯಾವುದೋ ಇಂಜಿನಿಯರಿಂಗ್ ಇಲಾಖೆಯಲ್ಲಿ ವ್ಯವಸ್ಥೆ ಕೆಟ್ಟಿದೆ ಎಂದರೆ ನಾವು ಅದೇ ರೀತಿ ಹೋಗುತ್ತೇವೆಂದರೆ ಬಹಳ ಕಷ್ಟವಾಗುತ್ತದೆ. ಮಿಲ್ಟ್ರಿಯಲ್ಲಿ, SPGಯಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೋ, ಆ ರೀತಿ ಪೊಲೀಸ್ ಇಲಾಖೆಯಲ್ಲಿ honest ಆಗಿ, effective ಆಗಿ ಕೆಲಸ ಮಾಡುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ಒತ್ತಾಯ ಮಾಡಿ ಬೆಂಗಳೂರಿನಲ್ಲಿ ನಡೆದಂತಹ ಘಟನೆಗಳಿಂದ ಇಡೀ ರಾಜ್ಯದಲ್ಲಿ ಇಂದು ಜನ ಆತಂಕಕ್ಕೆ ಒಳಗಾಗಿದ್ದಾರೆ. ಆ ಅಂಕಿ ಅಂಶಗಳು ಬಗ್ಗೆ ನಮ್ಮ ಲಿಂಬಾವಳಿಯವರು ಹೇಳಿದಹಾಗೆ ಎಷ್ಟೋ ಜನ ಮರ್ಯಾದಸ್ಥರು ಯೋಚನೆ ಮಾಡಿ ದಾಖಲೆ ಮಾಡುವುದಕ್ಕೆ ಹೋಗುವುದಿಲ್ಲ. ದಾಖಲೆ ಸಂಖ್ಯೆಯನ್ನು ನೋಡಿ ಹೇಳುವುದಕ್ಕಾಗುವುದಿಲ್ಲ. ಹಾಗಾಗಿ ಈ ರೀತಿಯ ಕೇಸ್‌ಗಳು ಹಳ್ಳಿಯಿಂದ ಹಿಡಿದು ಬೆಂಗಳೂರಿನವರೆಗೂ ಸಾಕಷ್ಟು ನಡೆಯುತ್ತಿವೆ.

ಈ ವಿಕೃತ ಮನೋಭಾವದವರನ್ನು ಸಹ ನೀವು ಅರೆಸ್ಟ್ ಮಾಡಿ ಅವರಲ್ಲಿ ಭಯ ಭೀತಿಯನ್ನು ಹುಟ್ಟಿಸಬೇಕು. ಗೂಂಡಾ ಕಾಯಿದೆ ಅಡಿ ತೆಗೆದುಕೊಂಡು ಅವರನ್ನು ಒಳಗೆ ಹಾಕಬೇಕು. ರೌಡಿಗಳ ಟೀಮ್ ಏನಿದೆ, ಅವರ ಶಿಷ್ಯರೇನಿದ್ದಾರೆ, ಅವರ ಕಡೆಗೂ ಹೆಚ್ಚಿನ ಗಮನಹರಿಸಿ, ಬೆಂಗಳೂರು ಮತ್ತು ಇಡೀ ರಾಜ್ಯಕ್ಕೆ ನಮ್ಮ ಸರ್ಕಾರ ಹೊಸ ಸಂದೇಶವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಕೃಷ್ಣಪ್ಪ ಅವರೇ ಒಂದು ನಿಮಿಷ, ತಮಗೆ ಕಾಲಾವಕಾಶ ಕೊಡುತ್ತೇನೆ. ಒಂದು ಸಣ್ಣ ಪ್ರಕಟಣೆಯಿದೆ.

ಪ್ರಕಟಣೆ

ಮಾನ್ಯ ಲೋಕೋಪಯೋಗಿ ಸಚಿವರಾದ ಡಾ|| ಹೆಚ್.ಸಿ. ಮಹದೇವಪ್ಪ ನವರು ಈ ದಿನ ಮಧ್ಯಾಹ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಶ್ರೀ ಅರವಿಂದ್ ಚಂದ್ರಕಾಂತ ಬೆಲ್ಲದ್ (ಹುಬ್ಬಳ್ಳಿ–ಧಾರವಾಡ (ಕೇಂದ್ರ)):– ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಲಾತ್ಕಾರದ ಬಗ್ಗೆ ಮಾತನಾಡಬೇಕಾದರೆ, ವಿಕೃತ ಕಾಮಿಗಳು ಮತ್ತು ಗೂಂಡಾಗಳ ಬಗ್ಗೆ ಮಾತನಾಡುತ್ತಿದ್ದೇವೆ. ವಿಕೃತ ಕಾಮಿಗಳದ್ದು ಒಂದು ವಿಷಯವೆಂದರೆ, ಈ ಗೂಂಡಾಗಳು ಏತಕ್ಕಾಗಿ ಈ ರೀತಿಯ ಧೈರ್ಯ ಮಾಡುತ್ತಾರೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ವಿಚಾರ ಮಾಡುವುದು ಸೂಕ್ತವಾಗಿದೆ. ಈ ಗೂಂಡಾಗಳು ಹುಟ್ಟುವುದು ಎಲ್ಲಿ ಎಂದರೆ ಪೊಲೀಸ್ ಸ್ಟೇಷನ್ ಸುತ್ತಮುತ್ತ ಹುಟ್ಟುತ್ತಾರೆ. ಇವತ್ತಿನ ದಿವಸ ಒಬ್ಬ ಸಜ್ಜನ ವ್ಯಕ್ತಿ ಪೊಲೀಸ್ ಸ್ಟೇಷನ್‌ಗೆ ಹೋಗಿ complaint ಕೊಡುವಂಥ ಪರಿಸ್ಥಿತಿ ಇಲ್ಲ. ಮೊದಲ ಬಾರಿಗೆ ಎಂ.ಎಲ್.ಎ. ಆದ ನಾವು ಹೇಳಿದರೂ ಸಹ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್

ತೆಗೆದುಕೊಳ್ಳುವುದಿಲ್ಲ. ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ತೆಗೆದುಕೊಳ್ಳಬೇಕಾದರೆ ಆತನು ಒಬ್ಬ ಅತ್ಯಂತ ರಾಜಕೀಯ ಪ್ರಭಾವಿ ವ್ಯಕ್ತಿಯಾಗಿರಬೇಕು ಅಥವಾ ಆತನು ಒಬ್ಬ ದೊಡ್ಡ ಗೂಂಡಾ ಇರಬೇಕು. ಗೂಂಡಾಗಳು, ಸಮಾಜ ಘಾತುಕ ಶಕ್ತಿಗಳ ಕೆಲಸಗಳು ಮಾತ್ರ ಪೊಲೀಸ್ ಸ್ಟೇಷನ್‌ನಲ್ಲಿ ಆಗುತ್ತವೆ. ಒಳ್ಳೆಯ ಸಜ್ಜನರ ಕೆಲಸ ಪೊಲೀಸ್ ಸ್ಟೇಷನ್‌ನಲ್ಲಿ ನಡೆಯುವುದಿಲ್ಲ. ಮೊನ್ನೆ ದಿವಸ ಮಾನ್ಯ ಜಯಚಂದ್ರರವರು ಮಾತನಾಡಬೇಕಾದರೆ, ನಾನು ಸಕಾಲದಲ್ಲಿ ಪೊಲೀಸ್ FIR ಆಗುವಂಥ ವ್ಯವಸ್ಥೆ ಆಗಬೇಕೆಂದು ಅವರಿಗೆ ಹೇಳಿದ್ದೆ. ಇವತ್ತು ಪೊಲೀಸ್ ಸ್ಟೇಷನ್‌ನಲ್ಲಿ ಒಬ್ಬ ಪೊಲೀಸ್ ಠಾಣಾಧಿಕಾರಿಯ performance ಅನ್ನು ಅವನ ಏರಿಯಾದಲ್ಲಿ ಎಷ್ಟು ಕೇಸುಗಳು ರಿಜಿಸ್ಟರ್ ಆಗುತ್ತವೆ ಅದರ ಮೇಲೆ ನೋಡುತ್ತಾರೆ. ಆ ಪರಿಸ್ಥಿತಿ ಇರಬಾರದು. ಎಷ್ಟು ಕೇಸ್ ಬೇಕಾದರೂ ರಿಜಿಸ್ಟರ್ ಆಗಲಿ, ಅವರು ಎಷ್ಟು ಕೇಸ್‌ಗಳನ್ನು solve ಮಾಡಿದ್ದಾರೆ ಅದರ ಮೇಲೆ ಅವರ performance review ಆಗಬೇಕು. ಪೊಲೀಸ್ ಠಾಣಾಧಿಕಾರಿ ಏರಿಯಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೇಸ್ ರಿಜಿಸ್ಟರ್ ಆದರೂ ಕೂಡ ಅವನ performance ಚೆನ್ನಾಗಿಲ್ಲದಿದ್ದರೆ ಆತ ಕೇಸ್ ಅನ್ನು ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲ. ಹಾಗಾಗಿ, ಸಕಾಲದ ಮೂಲಕ ಯಾವುದೇ ಸಾಮಾನ್ಯ ಮನುಷ್ಯ ಪೊಲೀಸ್ ಸ್ಟೇಷನ್‌ನಲ್ಲಿ ತನ್ನದೇ ವಾಕ್ಯದಲ್ಲಿ ಪೊಲೀಸ್ complaint ಕೊಡುವಂಥ ಪರಿಸ್ಥಿತಿ ಬರಬೇಕು. ನಾವೇ ಪೊಲೀಸ್ ಸ್ಟೇಷನ್‌ಗೆ ಹೋಗಿ complaint ಕೊಡಲು ಹೋದರೆ ಅವರ ತನಿಖಾಧಿಕಾರಿ ಯಾರು ಇರುತ್ತಾರೆ ಅವರು ಹೇಳಿದ ಶಬ್ಧದಲ್ಲಿ ನಾವು complaint ಕೊಡಬೇಕಾಗುತ್ತದೆ. ಈ ಪರಿಸ್ಥಿತಿ ಬದಲಾವಣೆಯಾದರೆ ಯಾರು ಗೂಂಡಾಗಳು ಇರುತ್ತಾರೆ, ಯಾವ್ಯಾವುದೋ ಕರ್ನಾಟಕ ಎಂದು ಹೇಳಿಕೊಂಡು ಬ್ಲಾಕ್‌ಮೆಲ್ ರಿಯಲ್ ಎಸ್ಟೇಟ್ ಮಾಡುವಂಥ ಸಂಘಟನೆಗಳು ಇವೆ, ವಿವಿಧ ಸಂಘರ್ಷ ಸಮಿತಿಗಳು ಅಂಬೇಡ್ಕರ್ ಹೆಸರನ್ನು ಬಳಸಿಕೊಂಡು ದಿನನಿತ್ಯ ಬ್ಲಾಕ್‌ಮೆಲ್ ವ್ಯವಹಾರ ಮಾಡುವ ಸಂಘಟನೆಗಳು ಏನಿವೆ ಅವುಗಳ ಮೇಲೆ ಸರ್ಕಾರ ಕಠಿಣವಾದಂಥ ಕ್ರಮವನ್ನು ತೆಗೆದುಕೊಂಡರೆ ಈ ರೀತಿಯ ಜನರ ಮೇಲೆ ಕಡಿವಾಣ ಹಾಕಲು ಆಗುತ್ತದೆ. ಪೊಲೀಸರ ಜೊತೆ ಈ ಗೂಂಡಾಗಳು ಅಡ್ಡಾಡುತ್ತಾರೆ ಹಾಗೂ

ರಿಯಲ್ ಎಸ್ಟೇಟ್ ದಂಧೆ ಮಾಡಿಕೊಳ್ಳುತ್ತಾ ಗೂಂಡಾಗಳು ಹುಟ್ಟುವಂಥ ಜಾಗ ಇವೆ ಇವುಗಳ ಮೇಲೆ ಒಂದು ಕಡಿವಾಣ ಹಾಕಿದ ಹಾಗೆ ಆಗುತ್ತದೆ. Professional ಬ್ಲಾಕ್‌ಮೇಲ್ ಮಾಡುವಂಥ. professional ರಿಯಲ್ ಎಸ್ಟೇಟ್ ದಂಧೆ ಮಾಡುವಂಥ organizations ಇವೆ, ಅವುಗಳನ್ನು ಹದ್ದುಬಸ್ತುಗೆ ತರಬೇಕು. ಒಬ್ಬ ಸಾಮಾನ್ಯ ವ್ಯಕ್ತಿ ಅತ್ಯಂತ ಸರಳ ರೀತಿಯಿಂದ ಯಾರದೇ influence ಇಲ್ಲದೆ ತಾನೇ ಮನೆಯಿಂದ complaint ಕೊಡುವಂಥ ವ್ಯವಸ್ಥೆ ಹಾಗೂ FIR ಆಗುವಂತ ವ್ಯವಸ್ಥೆ ಬಂದರೆ ಇದರಲ್ಲಿ ಸಾಮಾನ್ಯ ಜನರಿಗೆ ಪೊಲೀಸ್ ಇಲಾಖೆ ಮೇಲೆ ಒಂದು ನಂಬಿಕೆ ಬರುತ್ತದೆ. ನಾವು complaint ಕೊಡಬಹುದೆಂದು confidence ಅವರಲ್ಲಿ ಬರುತ್ತದೆ. ಪೊಲೀಸ್ ಸ್ಟೇಷನ್‌ಗೆ ಒಬ್ಬ ಸಜ್ಜನ complaint ಕೊಡುವುದಕ್ಕೆ ಹೋದರೆ ಅವನೇ ಒಂದು ದೊಡ್ಡ ಗುನ್ನ ಮಾಡಿದ್ದಾನೋ, ಕ್ರೈಮ್ ಮಾಡಿದ್ದಾನೋ ಎನ್ನುವಂತಹ ಪರಿಸ್ಥಿತಿ ಇವತ್ತಿನ ದಿವಸ ಬರುತ್ತದೆ. ನಮ್ಮ ತಂದೆಯವರು ಎಂ.ಎಲ್.ಎ ಆಗಿದ್ದರು. ಅವರು ಪೊಲೀಸ್ ಸ್ಟೇಷನ್‌ಗೆ ಒಂದು ಬಾರಿಯೂ ಫೋನ್ ಮಾಡುತ್ತಿರಲಿಲ್ಲ. ಅವರ ಬಾಲ್ಯದ ಮಿತ್ರ ಅವರು ನನಗೆ ಗೊತ್ತು. ಅವರು ನಮ್ಮ ತಂದೆಯವರ ಹತ್ತಿರ ಬಂದು ನಮ್ಮ ಮನೆಯಲ್ಲಿ ಈ ರೀತಿ ಸಮಸ್ಯೆಯಿದ್ದು, complaint ಕೊಡಬೇಕಾಗಿದೆ ಎಂದರು. ಅದಕ್ಕೆ ನಮ್ಮ ತಂದೆಯವರು ನೀವೇ ಪೊಲೀಸ್ ಸ್ಟೇಷನ್‌ಗೆ ಹೋಗಿ complaint ಕೊಡಿ ಎಂದು ಅವರಿಗೆ ಹೇಳಿದರು. ಅವರು ಪೊಲೀಸ್ ಸ್ಟೇಷನ್‌ಗೆ complaint ಕೊಡಲು ಹೋದರೆ 70 ವರ್ಷಗಳಾಗಿದ್ದ ನಮ್ಮ ತಂದೆಯ ಮಿತ್ರರಿಗೆ ಪೊಲೀಸಿನವರು ಹೊಡೆದು ಪೊಲೀಸ್ ಸ್ಟೇಷನ್‌ನಲ್ಲಿ ಕೂರಿಸಿದ್ದರು. ಅಂಥ ಪರಿಸ್ಥಿತಿ ನಮ್ಮ ಪೊಲೀಸ್ ಸ್ಟೇಷನ್‌ನಲ್ಲಿದೆ. ಮಾನ್ಯ ಔರಾದಕರ್‌ರವರು ಇಲ್ಲೇ ಇದ್ದಾರೆ. ನಮ್ಮ ತಂದೆ ಯಾವ ಪೊಲೀಸ್ ಸ್ಟೇಷನ್‌ಗೂ ಸಹ ಫೋನ್ ಮಾಡುತ್ತಿರಲಿಲ್ಲವೆಂದು ಅವರಿಗೆ ಗೊತ್ತಿದೆ. ಸಜ್ಜನರು ಇವತ್ತಿನ ದಿವಸ ಪೊಲೀಸ್ ಸ್ಟೇಷನ್‌ಗೆ ಹೋಗಲಾರದ ಪರಿಸ್ಥಿತಿ ಇದೆ. . . .ಸಜ್ಜನರು ಯಾರು ಪೊಲೀಸ್ ಸ್ಟೇಷನ್‌ಗೆ ಹೋಗುವುದಿಲ್ಲ. FIR register ಮಾಡುವಂಥ ಪದ್ಧತಿಯನ್ನು ತೆಗದುಕೊಂಡು ಬರಬೇಕು. ಪೊಲೀಸ್ ಅಧಿಕಾರಿಗಳ performance ಎಷ್ಟು complaintಗಳಿವೆ ಅದರ ಮೇಲೆ

ಆಗಬಾರದು. ಅವರು ಎಷ್ಟು ಕೇಸ್‌ಗಳನ್ನು solve ಮಾಡಿದ್ದಾರೆ ಅದರ ಮೇಲೆ ಅವರ performance review ಆಗುವಂಥ ಪದ್ಧತಿಯನ್ನು ತೆಗೆದುಕೊಂಡು ಬರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):- ಮಾನ್ಯ ಉಪಾಧ್ಯಕ್ಷರೆ, ರೇಪ್ ಕೇಸ್‌ಗಳು ಪಟ್ಟಣದಲ್ಲಿಯೇ ನಡೆಯುತ್ತವೆ. ನಮ್ಮ ಹಳ್ಳಿಗಳ ಕಡೆ ಇವೆಲ್ಲಾ ನಡೆಯುವುದಿಲ್ಲ. ಇದಕ್ಕೆ ಕಾರಣವೆಂದರೆ, ಅಲ್ಲಿಯ ಜನ ಸ್ವಲ್ಪ ಮಾನ-ಮರ್ಯಾದೆಯಿಂದ ಇದ್ದಾರೆ. ಇಲ್ಲಿ ಬಹಳಷ್ಟು ಕೆಟ್ಟಿದೆ. ನಮ್ಮ ಸರ್ಕಾರದ ಜವಾಬ್ದಾರಿಯನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾತ್ರಿ 10.30 ಗಂಟೆಯವರೆಗೆ ಬಾರ್ ತೆಗೆದರೆ 5 ಪೆಗ್ ಕುಡಿದವನು ಎಲ್ಲಿಗೆ ಹೋಗುತ್ತಾನೆ? ಅವನು ಯಾರ ಮೇಲಾದರೂ ಬೀಳಬೇಕಲ್ಲಾ? ರಾತ್ರಿ 10 ಗಂಟೆಗೆ ಬಾರ್‌ಗಳನ್ನು ಏಕೆ close ಮಾಡಬಾರದು? ಸರ್ಕಾರಕ್ಕೆ ಹಣ ಬರಲಿ ಎಂದು ರಾತ್ರಿ 1 ಗಂಟೆವರೆಗೆ ಬಾರ್‌ಗಳನ್ನು ನಡೆಸಿದರೆ, 3 ರಿಂದ 6 ಪೆಗ್ ಕುಡಿದವನು ಯಾರ ಮೇಲಾದರೂ ಬೀಳಲೇಬೇಕಾಗುತ್ತದೆ. ಆದ್ದರಿಂದ ಸರ್ಕಾರ ರಾತ್ರಿ 10 ಗಂಟೆಗೆ ಬಾರ್‌ಗಳನ್ನು close ಮಾಡಬೇಕು. ಆಗ ಇವುಗಳಿಗೆ ಸ್ವಲ್ಪ ಕಡಿವಾಣ ಹಾಕಿದ ಹಾಗೆ ಆಗುತ್ತದೆ. ಇಲ್ಲವಾದರೆ ಬಹಳ ಕೆಟ್ಟ ಪರಿಣಾಮವಾಗುತ್ತದೆ. ಇತ್ತೀಚೆಗೆ ಕೋರ್ಟಿನ ತೀರ್ಮಾನಗಳು ಎಲ್ಲೋ ಒಂದು ಕಡೆ ಜಾರಿ ಹೋಗುತ್ತಿವೆ. ಮೊನ್ನೆ ದಿವಸ ಸುಪ್ರೀಂಸಕೋರ್ಟ್ ಬಾರ್‌ಗಳಲ್ಲಿ ಡ್ಯಾನ್ಸ್ ಮಾಡಿದರೆ ತಪ್ಪೇನು? ಅದಕ್ಕೆ ಅವಕಾಶ ಕೊಡಿ ಎಂದು ಹೇಳಿತು, ರಾತ್ರಿ 11-00, 12-00 ಗಂಟೆಯಲ್ಲಿ ಡ್ಯಾನ್ಸ್ ಮಾಡಲು ಅವಕಾಶ ಕೊಟ್ಟರೆ ಯಾವ ಹುಡುಗರು ಬಿಡುತ್ತಾರೆ. ಯಾರೋ ಒಬ್ಬ ವಿದ್ಯಾವಂತ ಯೋಚನೆ ಮಾಡಿಕೊಂಡು ಹೋಗುತ್ತಾನೆ. S.S.L.C, P.U.C ಫೇಲಾದ ಹುಡುಗರು ಏನು ಮಾಡಬೇಕು? ಕೋರ್ಟ್ ಸಹ ಎಲ್ಲೋ ಒಂದು ಕಡೆ ಜಾರುತ್ತಿದೆ. ದಯಮಾಡಿ ಸರ್ಕಾರ ಕಠಿಣವಾದಂಥ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲವಾದರೆ ಬಹಳ ಕಷ್ಟವಾಗುತ್ತದೆ. ಸುಪ್ರೀಂಕೋರ್ಟ್ 'living together' ಎಂದು ಒಂದು ಜಡ್ಜ್‌ಮೆಂಟ್ ಕೊಟ್ಟಿದೆ. Living together.

That is also one judgement. ಕೆಲವೊಮ್ಮೆ ಬಹಳ ವಿರಳವಾಗಿ ಒಂದು ಶಕ್ತಿಯನ್ನು ತಾನಾಗಿ ಕಳೆದುಕೊಳ್ಳುತ್ತಿದೆ. ಬೆಂಗಳೂರಿನಲ್ಲಿ ಎಲ್ಲಾ ಪೊಲೀಸ್ ಸ್ಟೇಷನ್‌ನಲ್ಲೂ ಸಣ್ಣ ಸಣ್ಣ ಪುಂಡು ಹುಡುಗರು ರೌಡಿಸಂ ಮಾಡುತ್ತಾರೆ. ಕಾರಣ, ಎಲ್ಲೆಲ್ಲೆ litigation land ಇದೆ ಆ landಗಳನ್ನು ಪೊಲೀಸರ ಮುಖಾಂತರ ಪುಂಡು ಹುಡುಗರು ತೆಗೆದುಕೊಳ್ಳುತ್ತಾರೆ. ಅದು ಒಂದು ದೊಡ್ಡ ದಂಧೆಯಾಗಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪೊಲೀಸಿನವರನ್ನು 2 ವರ್ಷದ ಮೇಲೆ ಬೆಂಗಳೂರಿನಲ್ಲಿ ಇಟ್ಟುಕೊಳ್ಳಬಾರದು. ವರ್ಗಾವಣೆಯನ್ನು ಒಂದು ದಂಧೆಯಾಗಿ ಮಾಡಿಕೊಳ್ಳಬಾರದು. ಪೊಲೀಸ್‌ರು ನ್ಯಾಯಾಂಗವನ್ನು ಒಳ್ಳೆಯ ದೃಷ್ಟಿಯಲ್ಲಿ ನೋಡದೇ ಇರುವುದೇ ಇವುಗಳಿಗೆಲ್ಲಾ ಕಾರಣವಾಗಿದೆ. 10 ಲಕ್ಷ, 20 ಲಕ್ಷ, 50 ಲಕ್ಷ ರೂ.ಗಳಿಗೆ ವರ್ಗಾವಣೆ ಮಾಡುತ್ತಿದ್ದರೆ ಈ ರೀತಿ ಆಗದೆ ಮತ್ತೇನು ಆಗುತ್ತದೆ. ಇದಕ್ಕೆ ಕಡಿವಾಣ ಹಾಕುವವರು ಯಾರು? ಬೇಲಿನೇ ಎದ್ದು ಹೊಲ ಮೇಯ್ದರೆ ಏನಾಗುತ್ತದೆ? ಎಲ್ಲಾ ಪೊಲೀಸ್ ಠಾಣೆ ಸಹ ರಿಯಲ್ ಎಸ್ಟೇಟ್ ಏಜೆನ್ಸಿಯಾಗಿದೆ. ಗೂಂಡಾಗಳು ದಂಧೆ ಇಟ್ಟುಕೊಂಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾರ್‍ಯಾರು 2 ವರ್ಷದ ಮೇಲೆ ಇಲ್ಲಿ ಇದ್ದಾರೆ ಅವರೆಲ್ಲರನ್ನೂ ತೆಗದು ರಾಯಚೂರು, ಗುಲ್ಬರ್ಗ, ಬೀದರ್, ತುಮಕೂರು ಕಡೆಗಳಲ್ಲಿ ಹಾಕಲಿ, ಅಲ್ಲಿರುವವರನ್ನು ಇಲ್ಲಿ ತಂದು ಹಾಕಲಿ. ಅವರು adjust ಆಗಬೇಕಾದರೆ 2 ವರ್ಷ ಬೇಕಾಗುತ್ತದೆ. ಮತ್ತೆ ಅವರನ್ನು ಬದಲಾವಣೆ ಮಾಡಬಹುದು. ಈ ರೀತಿ ಮಾಡಬೇಕು. ಈ ರೀತಿ ಮಾಡದಿದ್ದರೆ ಇದಕ್ಕೆ ಕಡಿವಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ಟಿ.ವಿ ಚಾನಲ್‌ಗಳನ್ನು, ಫಿಲಂಗಳನ್ನು ನೋಡಿ ಎಲ್ಲೋ ಒಂದು ಕಡೆ ದಾರಿ ತಪ್ಪುತ್ತಿದ್ದೇವೆ. ರಾಜ್ಯಕ್ಕೆ ಒಂದು ಒಳ್ಳೆಯ ಹೆಸರು ಇತ್ತು. ನಾವು ದೆಹಲಿ ಕಡೆ ಹೋದಾಗ ಮದ್ರಾಸಿ ನಾ ಎಂದು ಕೇಳುವರು, ಇಲ್ಲ ನಾವು ಕರ್ನಾಟಕದವರು ಎಂದರೆ ಬಹಳ ಗೌರವ ಇರುತ್ತಿತ್ತು. ಆದರೆ, ಇವತ್ತು ಆ ಮೌಲ್ಯಗಳು ಜಾರಿಗುಪ್ಪೆ ತರಹ ಜಾರಿ ಹೋಗುತ್ತಿವೆ. ಕರ್ನಾಟಕ ಈಗ ರೇಪಿಸ್ಟ್ ಎಂದು ಹೇಳುವ ಮಟ್ಟಕ್ಕೆ ಬಂದಿದೆ. ಮಾತು ಎತ್ತಿದ್ದರೆ

ರೇಪಿಸ್ಟ್. ಆ ಪಾರ್ಟಿ, ಈ ಪಾರ್ಟಿ ಅಂಥ ಅಲ್ಲ, ನಮಗೆಲ್ಲಾ ಘನತೆ ತರಬೇಕಾದರೆ ಸರ್ಕಾರ ದಿಟ್ಟ ನಿಲುವು ತೆಗೆದುಕೊಳ್ಳಬೇಕು. ಆಡಳಿತಾತ್ಮಕವಾಗಿ reform ಮಾಡಬೇಕು. ಯಾರೋ ಎಂ.ಎಲ್.ಎ. ಬಂದು ನನಗೆ ಆ sub-Inspector ಕೊಡಿ ಎಂದಾಗ ಅವರನ್ನು ಹಾಕುವ ಅವಶ್ಯಕತೆಯಿಲ್ಲ. ಆಡಳಿತಾತ್ಮಕವಾಗಿ ಸರ್ಕಾರ ತೀರ್ಮಾನ ಮಾಡದಿದ್ದರೆ ಬಹುಶಃ ಈ ರಾಜ್ಯಕ್ಕೆ ಒಳ್ಳೆಯ ಹೆಸರು ಇರುವುದಿಲ್ಲವೆಂದು ಹೇಳಿ, ಸರ್ಕಾರ ಕೂಡಲೇ ಕಾರ್ಯೋನ್ಮುಖವಾಗಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ರಾಜೀವ್ ಪಿ.:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರಕ್ಕೆ ಎರಡು ಸಲಹೆಗಳನ್ನು ಕೊಡುತ್ತೇನೆ. ಹೆಳುವುದನ್ನೇ ಪದೇ ಪದೇ ಹೇಳುವುದು ಬೇಡ.

ಉಪಾಧ್ಯಕ್ಷರು:- ಮಾನ್ಯ ಖೇಣಿಯವರು ಮಾತನಾಡಿದ ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇವೆ.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ):- ಮಾನ್ಯ ಉಪಾಧ್ಯಕ್ಷರೆ, ಬೀದರ್ ಸೌತ್‌ನ ಮಿರ್ಜಾಪುರದಲ್ಲಿ ಶನಿವಾರ ಒಂದು ರೇಪ್ ಆಯಿತು. ಒಂದು ಹುಡುಗಿ ಆಕೆಯ ಫ್ರೆಂಡ್ ಜೊತೆಯಲ್ಲಿ ಬೇರೆ ಫ್ರೆಂಡ್ ಅನ್ನು ಭೇಟಿ ಮಾಡಲು ಹೋದಳು. ಹುಡುಗಿ ಹಳ್ಳಿಖೇಡ್(ಬಿ)ಯವಳು. ಅವಳು ಹೋಗುವಾಗ ನಾಲ್ಕು ಜನ ಅವಳನ್ನು ಹಿಡಿದು, ಕಟ್ಟಿ ಹಾಕಿ ರೇಪ್ ಮಾಡಿದರು. ಆಕೆ ಬಗ್ದಮ್ ಪೊಲೀಸರಿಗೆ complaint ಕೊಡಲು ಹೋದಾಗ ಸಂಬಂಧಪಟ್ಟ PSI complaint ತೆಗೆದುಕೊಳ್ಳಲಿಲ್ಲ. ನಂತರ ಬಹಳ ಸಮಸ್ಯೆಯಾಯಿತು. ಆಕೆ ನನಗೆ ಫೋನ್ ಮಾಡಿದಳು. ನಾನು, ಡಿ.ಸಿಯವರಿಗೆ, ಎಸ್.ಪಿ ಯವರೊಂದಿಗೆ ಮಾತನಾಡಿದಾಗ ತಕ್ಷಣವೇ ಮೂರು ಜನರನ್ನು ಬಂಧಿಸಲಾಯಿತು. ಹೆಣ್ಣುಮಗಳು ರೇಪ್ ಆದಾಗ her modesty is involved. ಯಾರಾದರೂ ಗಂಡಸರು ಹೋಗಿ ಆಕೆಗೆ ಪ್ರಶ್ನೆ ಕೇಳಿದರೆ ಆಕೆ deny ಮಾಡುತ್ತಾಳೆ. ಅದಕ್ಕೆ ನಾನು female police officer ಅನ್ನು ಕರೆದುಕೊಂಡು ಬಂದು ಅವಳ ಜೊತೆ ವಿಚಾರ ಮಾಡಿದಾಗ then she agreed to give the complaint. ಆದ್ದರಿಂದ ನನ್ನದು ಒಂದು suggestion

ಇದೆ. ರೇಪ್ ನಡೆಯುತ್ತಿರುವ ಬಗ್ಗೆ ಎಲ್ಲರಿಗೂ ಗೊತ್ತಿದೆ. ಕೆಟ್ಟದ್ದು ಆಗುತ್ತಿದೆ. But, now I would like to give certain suggestion about how to change this system to some extent. ಬೀದರ್ ಸೌತ್‌ನಲ್ಲಿ ನಾನು ಗೃಹ ಮಂತ್ರಿಗಳಿಗೆ 99 ಎಕರೆಗಳನ್ನು Police Training School ಸಲುವಾಗಿ ಕೊಟ್ಟಿದೆ. ನನ್ನ request ಏನೆಂದರೆ let that be Women Police Training School. ಏಕೆಂದರೆ according to the law 20% of women should be police officers. But, ಕರ್ನಾಟಕದಲ್ಲಿ 11,000 ಮಹಿಳಾ ಪೊಲೀಸ್ ಅಧಿಕಾರಿಗಳ ಕೊರತೆ ಇದೆ. Suppose if we did it as a Police Training Centre for women then you could teach them expertise about how to handle the rape victims, how to handle molestations and things like that. You can bring some decency to the Police Officers. And all the funding comes from the Central Government. ನನ್ನ request ಇದೆ. That request is pending in the Home department. But all that is issue a Government Order. ಅವರ ಹತ್ತಿರ ಲ್ಯಾಂಡ್ ಇದೆ. ಏನು ಆಗುತ್ತಿಲ್ಲ. ಅದನ್ನು ಮಾಡಿದರೆ we can start that and immediate action could be taken. Especially in our Bidar South, Lambani ladies ಇದ್ದಾರೆ, they can make excellent police officers, because they are gutsy, they are strong, they are honest. They make good officers. ಅದು ನನ್ನ request ಇದೆ ಅದನ್ನು ಮಾಡಬೇಕು. ಪೊಲೀಸರನ್ನು ವರ್ಗಾವಣೆ ಮಾಡಿದರೆ, Officer ಹೇಳುತ್ತಾನೆ, ನಾನು ಹಣ ಕೊಟ್ಟು ಬಂದಿದ್ದೇನೆ, ನಾನು ವಾಪಸ್ಸು ತೆಗೆದುಕೊಳ್ಳಬಾರದೇ, shouldn't We get back our investment ಎಂದು ಹೇಳುತ್ತಾರೆ. My request to the Chief Minister and the Home Minister is PSI level onwards, below that, transfer should be done purely on lottery. No MLA, no MP should influence it. Because, this is becoming a perpetual ill. ಏಕೆಂದರೆ, ನಾವು We can take the money and may we spend in Five star hotel with drinking liquor or whatever we want to do and play cards. While our

women, our children are suffering because of the bad habits of some of the PSI's. So, my request is that they should be purely done on lottery system, so we eliminate partiality, eliminate corruption at least at that level. ಏಕೆಂದರೆ ಅವರು ಐದು ಲಕ್ಷ ದುಡ್ಡು ಕೊಟ್ಟು ಬಂದವರು, he has to collect that money. Where will he collect from? Only way he will collect is from the people who are below him, weaker than him. We are able to solve this problem in Bidar south with the co-operation of the police, bureaucrats and the public. ಏನಾಗುತ್ತದೆಂದರೆ public also wants to stay back and don't want to get involved. But, I got them involved. So we are able to solve this within 24 hours. So, I appreciate and I want to thank them. ಅಧ್ಯಕ್ಷರು forest departmentನ discussion ಆಗುವಾಗ ಖೇಣಿಯವರೇ, Americaದಲ್ಲಿ ಗಿಡ ಹಾಕುತ್ತಾರೆ, ಇಲ್ಲಿ ಗಿಡ ಹಾಕುತ್ತೇವೆ, Amerciaದಲ್ಲಿ how do they protect ಎಂದು ಕೇಳಿದರು. It was a very good question, I couldn't answer. I thought over it for last few days. I like to say a simple incidence about the difference happening, what is happening in our anganwadis and what is happening in anganwadis in America. ನನ್ನ ಅವಳಿ ಜವಳಿ ಮಕ್ಕಳು ಒಂದು ದಿವಸ kinder gartenನಿಂದ ಮನೆಗೆ ಬಂದು ನನಗೆ ಡ್ಯಾಡಿ ನೀವು ಯಾವ citizen, Indian or American? ಎಂದು ಕೇಳಿದರು. ನಾನು Indian citizen ಎಂದು ಹೇಳಿದೆ. ಇನ್ನೊಬ್ಬ ಮಗ Daddy, I hope there is no war between India and America ಎಂದು ಹೇಳಿದನು. ಅದಕ್ಕೆ ನಾನು ಏಕೆಂದು ಕೇಳಿದಾಗ if there is war between India and America we will have to kill you ಎಂದು ಹೇಳಿದರು. Look at the patriotism they teach at anganwadi level. ನಮ್ಮ ಅಂಗನವಾಡಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಬಾತರೂಂಗೆ ಹೋಗುವುದಕ್ಕೆ toilets ಇಲ್ಲ, teachers ಇಲ್ಲ, facilities ಇಲ್ಲ. So, I request that we have to start from the ground level. I would like to request the

Hon'ble Chief Minister that lot more funding should be given to our children and also we should have a Rape Prevention Helpline where girls could be trained about that. They could call, understand how to prevent, what things to avoid, that could be done. This is a issue which we should educate our children. Thank you.

ಶ್ರೀ ಪಿ. ರಾಜೀವ್ (ಕುಡಚಿ):- ಸನ್ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಮಹಿಳಾ ಅತ್ಯಾಚಾರ ಪ್ರಕರಣವನ್ನು ಇಷ್ಟೊಂದು ಗಂಭೀರವಾಗಿ ಪರಿಗಣಿಸಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಹೇಳುತ್ತೇನೆ. ಈ ಚರ್ಚೆಯ ಮೂಲಕ ಬಲತ್ಕಾರ ಮುಕ್ತ ಮತ್ತು ಮಹಿಳಾ ದೌರ್ಜನ್ಯ ಮುಕ್ತ ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯವೇ, ಈ ಚರ್ಚೆಯಾದರೆ ಆಗ ಮಾತ್ರ ಅದಕ್ಕೊಂದು ಅರ್ಥ ಬರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು 1 ಲಕ್ಷ ಜನ ಪೊಲೀಸರನ್ನು ನಾವು ಕೆಲಸಕ್ಕೆ ಇಟ್ಟುಕೊಂಡಿದ್ದೇವೆ. 10 ಸಾವಿರ ಜನರಿಗೆ ಒಬ್ಬ ಪೊಲೀಸ್ ಪೇದೆ ಇದ್ದಾನೆ. ಈ ವ್ಯವಸ್ಥೆಯಲ್ಲಿ ನಾವು ಯಾವ ರೀತಿ ಇದನ್ನು ಸರಿಪಡಿಸಬೇಕು ಎನ್ನುವುದನ್ನೇ ನಾವು ಯೋಚನೆ ಮಾಡಬೇಕಾಗಿದೆ.

ಇವತ್ತಿನ ವಾತಾವರಣದಲ್ಲಿ ಮಹಿಳಾ ದೌರ್ಜನ್ಯವನ್ನು ತಡೆಗಟ್ಟುವುದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುವುದೇನೆಂದರೆ ಒಂದು ಮಹಿಳಾ ಸಹಾಯವಾಣಿಯನ್ನು ಪ್ರತಿ ಪೊಲೀಸ್ ಠಾಣೆಯಲ್ಲಿ ತೆರೆದು, 24X7 toll free numberನ್ನು ಈ ಸಮಾಜಕ್ಕೆ ಕೊಟ್ಟರೆ ತಕ್ಷಣ ಕೊಟ್ಟರೆ ಪೊಲೀಸರಿಗೆ ಮಾಹಿತಿಯನ್ನು ಒದಗಿಸುವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡಿದರೆ ತಹಬಂದಿಗೆ ತರುವುದಕ್ಕೆ ಸಹಾಯವಾಗುತ್ತದೆ.

ಎರಡನೆಯದಾಗಿ, 354 IPC, 376 IPC, 498(A)IPC ಮತ್ತು girl missing, women missing ಈ ಪ್ರಕರಣಗಳು ಪೊಲೀಸ್ ಠಾಣೆಗೆ ಬಂದಾಗ ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಮಹಿಳಾ ಮುಖ್ಯಪೇದೆಯನ್ನು ಅದಕ್ಕಾಗಿ ವ್ಯವಹರಿಸುವುದಕ್ಕೆ ಇಟ್ಟರೆ, counseling ಮಾಡಿದಾಗ ಸರಿಯಾದ

ಮಾಹಿತಿ ಬರುತ್ತದೆ. ಇವತ್ತು ಪೊಲೀಸ್ ಸ್ಟೇಷನ್ ವಾತಾವರಣ ಹೇಗಿದೆಯೆಂದರೆ, ನೂರಾರು ಜನ ಬಂದಿರುತ್ತಾರೆ, ಅಲ್ಲಿ ಯಾವುದೋ ಒಂದು ಗೌರವಾನ್ವಿತ ಕುಟುಂಬದಿಂದ ಒಬ್ಬ ಹೆಣ್ಣುಮಗಳು ಬಂದಳೆಂದರೆ, ನನ್ನ ಹತ್ತಿರ ನನ್ನ ಮೇಲೆ ಬಲಾತ್ಕಾರವಾಗಿದೆಯೆಂದು ಹೇಳಿಕೊಳ್ಳುವಂಥ ವಾತಾವರಣ ಇರುವುದಿಲ್ಲ. ನೂರಾರು ಜನ ಕೇಳುತ್ತಿರುತ್ತಾರೆ. ಅದಕ್ಕಾಗಿ ಅವಳು ಮುಜುಗರಕ್ಕೊಳಗಾಗುತ್ತಾಳೆ. ಇಂಥ ಪ್ರಕರಣಗಳು IPC 354ರ ಪ್ರಕಾರ ಮಹಿಳೆಯ ಮೇಲೆ ಅತ್ಯಾಚಾರ ಸಂಬಂಧಿತ ಯಾವುದೇ ಪ್ರಕರಣಗಳು ಬಂದರೆ, ವಿಶೇಷವಾಗಿ counseling ಮಾಡುವುದಕ್ಕೆ ಒಬ್ಬ WPC (Women Plice Constable) levelನಲ್ಲಿ ಒಂದು counseling ಮಾಡಿ ಪೂರ್ಣ ಮಾಹಿತಿಯನ್ನು ತೆಗೆದುಕೊಂಡು ಅದನ್ನು ಠಾಣಾಧಿಕಾರಿಗೆ (SHO)ಗೆ ತಿಳಿಸುವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡಿದರೆ ಎಲ್ಲವನ್ನು ನಾವು ಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ಬಹಳಷ್ಟು ಹೆಣ್ಣುಮಕ್ಕಳು ಠಾಣೆಯಲ್ಲಿ ಮುಕ್ತವಾಗಿ ಹೇಳಿಕೊಳ್ಳುವುದಿಲ್ಲ. ರೇಪ್ ಆಗಿದೆಯೆಂದು ನಾಳೆ ಅಥವಾ ಲೇಟಾಗಿ ಗೊತ್ತಾಗುತ್ತದೆ. ಇದರಿಂದ ಇನ್ನೊಬ್ಬ ಅಧಿಕಾರಿ ಬಲಿಯಾಗುತ್ತಾನೆ. ಅವತ್ತು ಇವನು ಸರಿಯಾಗಿ FIR ಮಾಡಲಿಲ್ಲವೆಂದು ಇನ್ನೊಬ್ಬ ಅಧಿಕಾರಿಯನ್ನು ಬಲಿಯಾಕುತ್ತೇವೆ. Civil DAR, CAR, KSRP ಈ ಪೊಲೀಸ್‌ನವರನ್ನು ನಾವು ವಿಭಜನೆ ಮಾಡಿಟ್ಟಿದ್ದೇವೆ. DAR ಇರುವಂಥದ್ದು, CAR ಇರುವಂಥದ್ದು KSRP ಪೊಲೀಸ್ ಇರುವಂಥದ್ದು ಘಟನೆ ನಡೆದ ಮೇಲೆ ಬಂದೋಬಸ್ತ್ ಕೊಡುವುದಕ್ಕೆ ಮಾತ್ರ ಬರುತ್ತಾರೆ. Preventionಗೆ ಅವರನ್ನು ಬಳಸಿಕೊಳ್ಳುತ್ತಿಲ್ಲ. ಅದಕ್ಕಾಗಿ ಪೊಲೀಸ್ ಇಲಾಖೆಯಲ್ಲಿ ಸುಧಾರಣೆ ಇವೆಲ್ಲವನ್ನೂ ಒಟ್ಟುಗೂಡಿಸಿ ನಾವು ನಮಗೆ ಇವತ್ತು ಸಿಗುತ್ತಿರುವಂಥ 50,000 ಪೊಲೀಸ್ ಮಾತ್ರ station duty ಮಾಡುತ್ತಿದ್ದಾರೆ. ಇನ್ನು 40,000 ಪೊಲೀಸ್‌ರನ್ನು ಸುಮ್ಮನೆ reserve ಆಗಿ ಇಟ್ಟುಕೊಂಡಿದ್ದೇವೆ. ಇವರು ಯಾವುದೇ preventive activitiesಗೆ use ಆಗುತ್ತಿಲ್ಲ. ಅದಕ್ಕೆ CAR, DAR, KSRP ಇವರನ್ನೆಲ್ಲಾ ಪೊಲೀಸ್ ಸ್ಟೇಷನ್‌ನಲ್ಲಿ merge ಮಾಡಿದರೆ ನಿಮಗೆ ಜಾಸ್ತಿ strength ಸಿಗುತ್ತದೆ. ಆಗ preventive activities ಮಾಡುವುದಕ್ಕೆ,

preventive action ತೆಗೆದುಕೊಳ್ಳುವುದಕ್ಕೆ ಪ್ರತಿ ಪೊಲೀಸ್ ಠಾಣೆಯಲ್ಲಿ ಈಗಿರುವಂಥ double ಸಂಖ್ಯೆಯಲ್ಲಿ ಸಿಗುತ್ತದೆ.

ಆನಂತರ, ಮುಕ್ತವಾಗಿ FIR ಮಾಡುವಂಥ ವಾತಾವರಣ, ಸನ್ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಾ ಸಂಖ್ಯೆಗಳನ್ನು ಹೇಳಿದರು. ಕರ್ನಾಟಕದಲ್ಲಿ 2013ರಲ್ಲಿ 1030, 376 rape FIR ಆಗಿದೆ. ಗುಜರಾತ್‌ನಲ್ಲಿ 2013ಕ್ಕೆ 732 ಪ್ರಕರಣಗಳು ಜರುಗಿವೆ ಎಂದು ಹೇಳಿದರು. ನಾನು ಠಾಣಾಧಿಕಾರಿಯಾಗಿ ಕೆಲಸವನ್ನು ನಿರ್ವಹಿಸಿ ಬಂದು, ಇವತ್ತು ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಇದು record ಆಗಿರುವಂಥ ನಂಬರ್‌ಗಳು. Suppress ಆಗಿರುವಂಥವು, burke ಆಗಿರುವಂಥ ಪ್ರಕರಣಗಳೆಷ್ಟು? ಪೊಲೀಸ್ ಠಾಣೆಗೆ ಈ ಮಾಹಿತಿ ಬರದೇ ಇರುವಂಥ ಪ್ರಕರಣಗಳೆಷ್ಟು? ಈ ಸದನ ಇವತ್ತು ಇಷ್ಟು ಗಂಭೀರವಾಗಿ ಚರ್ಚೆ ಮಾಡಿದ ಮೇಲೆ ಈ ಸಮಾಜಕ್ಕೆ ನಾವು ಒಂದು ಸಂದೇಶವನ್ನು ಕೊಡಬೇಕಾಗಿದೆ. ನಾವು ಈ ನಂಬರ್‌ಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಲು ಮುಂದಾಗಬಾರದು, ಸನ್ಮಾನ್ಯ ಅರವಿಂದ ಬೆಲ್ಲದ್‌ರವರು ಮಾತನಾಡಿದರು. ಪೊಲೀಸ್ ಠಾಣೆಯಲ್ಲಿ ಎಷ್ಟು crime register ಆಗುತ್ತದೆಯೋ ಅದರ ಆಧಾರದ ಮೇಲೆ ಆ ಠಾಣಾಧಿಕಾರಿಯ ಸಾಮರ್ಥ್ಯವನ್ನು ನೋಡುವುದಲ್ಲ. Crime register ಆದ ಮೇಲೆ ಎಷ್ಟು crime detection ಆಗುತ್ತದೆ, ಎಷ್ಟು crime disposal ಆಗುತ್ತದೆ ಇದರ ಮೇಲೆ ಸಾಮರ್ಥ್ಯ ಇರಬೇಕು. ಇವತ್ತು ನಾವು ಇಷ್ಟೆಲ್ಲಾ ಗಲಾಟೆಗಳಾಗಿದೆ, ಇಷ್ಟೆಲ್ಲಾ ಜೋರಾಗಿ ಗಹನವಾಗಿ ಚರ್ಚೆ ಮಾಡಿದ್ದೇವೆ. ಇದರಿಂದ ಪೊಲೀಸ್ ಠಾಣೆಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ತಪ್ಪು ಸಂದೇಶ ಹೋಗಬಾರದು. ನಾವು ಪೊಲೀಸ್ ಅಧಿಕಾರಿಗಳಿಗೆ ಯಾವುದೇ 376 IPC ಅಡಿಯಲ್ಲಿ ರೇಪ್ ಪ್ರಕರಣ ಬಂದಾಗ ಅದನ್ನು ಗಂಭೀರವಾಗಿ ತೆಗೆದುಕೊಳ್ಳಿ. ಮೊದಲು ಮೊಕದ್ದಮೆಯನ್ನು ದಾಖಲಿಸಿ, 24 ಗಂಟೆಯೊಳಗಾಗಿ ನೀವು ಆರೋಪಿಗಳನ್ನು ಬಂಧಿಸಿ. ಆಗ ನಾವು ನಿಮ್ಮ ಜೊತೆಗಿದ್ದೇವೆ ಎನ್ನುವಂಥ ಸಂದೇಶ ಹೋಗಬೇಕು. ಇಲ್ಲವೆಂದರೆ ಒಂದು ರೇಪ್ ಕೇಸ್ ರಿಜಿಸ್ಟರ್ ಆಯಿತೆಂದರೆ

ನಾಳೆ ಇದು ಸದನದಲ್ಲಿ ದೊಡ್ಡ ಗಲಾಟೆಯಾಗುತ್ತದೆ. ಇದನ್ನು ರಿಜಿಸ್ಟರ್ ಆಗದಂತೆ ನೋಡಿಕೊಳ್ಳುವುದು, ಈ ಸಂದೇಶ ಪೊಲೀಸ್ ಅಧಿಕಾರಿಗಳಿಗೆ ಹೋಗಬಾರದು. ಜೊತೆಗೆ ಬಹಳಷ್ಟು ಸದಸ್ಯರು ಹೇಳಿದ್ದಾರೆ. ಈ late night activitiesಗಳಿಗೆ ಈಗೇನು ನಾವು ಮಧ್ಯರಾತ್ರಿ 12 ಗಂಟೆಯವರೆಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಬಹುಶಃ 12 ಗಂಟೆಯವರೆಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆಂದರೆ ಆ ವ್ಯವಸ್ಥೆಯನ್ನು ಸುಧಾರಿಸುವ ಮಟ್ಟಕ್ಕೆ, ಕ್ರಿಮಿನಲ್‌ಗಳನ್ನು ನಾವು ಕಂಟ್ರೋಲ್ ಮಾಡುವ ಮಟ್ಟಕ್ಕೆ ನಾವಿದ್ದೇವೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಅದಕ್ಕಾಗಿ, ಈ DAR, CAR ಪೊಲೀಸರನ್ನು ನಾವು ಈ ಕಡೆಗೆ ತೆಗೆದುಕೊಂಡರೆ ಮಾತ್ರ ಆ ಸನ್ನಿವೇಶವನ್ನು ಸಮರ್ಥವಾಗಿ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ಈಗಿರುವಂಥ ಪೊಲೀಸ್ ಸ್ಟೇಷನ್‌ನಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ದಿನಕ್ಕೆ 12 ರಿಂದ 13 ಗಂಟೆ ಕೆಲಸ ಮಾಡುತ್ತಿದ್ದಾನೆ. 10 ಸಾವಿರ ಜನಕ್ಕೆ ಒಬ್ಬ ಕಾನ್‌ಸ್ಟೇಬಲ್ ಇರುವುದರಿಂದ ಈ ರೀತಿ ಮಾಡಲೇಬೇಕೆಂದೇನಿಲ್ಲ. ಆದ್ದರಿಂದ ಸನ್ಮಾನ್ಯ ಗೃಹ ಸಚಿವರು ಈಗಿರುವಂಥ late night 12 ಗಂಟೆಯವರೆಗೆ ಇರುವುದನ್ನು ಪುನಃ 10 ಗಂಟೆ ಅಥವಾ 11 ಗಂಟೆವರೆಗೆ ತರಬೇಕು. ಇಲ್ಲವೆಂದರೆ ಪೊಲೀಸ್ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಹೇಳುತ್ತಾ, ತಾವು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಚರ್ಚೆ ಮುಗಿಯಿತು, ಸಚಿವರಿಂದ ಉತ್ತರ.

ಶ್ರೀ ಎಂ. ಸತೀಶ್ ರೆಡ್ಡಿ:- ಎರಡು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು:- ಉತ್ತರವಾದ ಮೇಲೆ clarification timeನಲ್ಲಿ ಕೇಳಿ. ಅವಕಾಶ ಕೊಡುತ್ತೇವೆ.

ಶ್ರೀ ಎಂ. ಸತೀಶ್ ರೆಡ್ಡಿ:– ಜಾರ್ಜ್ ಸಾಹೆಬರೆ, just clarification ಹೇಳಿಬಿಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:– Clarification timeನಲ್ಲಿ ಕೇಳಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– Clarification ಕೇಳುವುದಕ್ಕೆ ನೀವೇ ಮೊದಲನೆಯವರು.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಮಂತ್ರಿಗಳು):– ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು, ಮಾಜಿ ಗೃಹ ಮಂತ್ರಿಗಳು, ನಮ್ಮ ಕುಮಾರಸ್ವಾಮಿಯವರು ಮತ್ತು ಸಾಕಷ್ಟು ಜನ ಹಿರಿಯ ಸದಸ್ಯರುಗಳು ಸಾಕಷ್ಟು ವಿಚಾರವನ್ನು ಚರ್ಚೆ ಮಾಡಿ ಮಹಿಳೆಯರ ಮೇಲೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಮತ್ತು ಅತ್ಯಾಚಾರ ನಡೆದಿರುವ ಬಗ್ಗೆ ಸದನದ ಗಮನಕ್ಕೆ ತಂದಿದ್ದಾರೆ. ಬಹುಶಃ ಎಲ್ಲಾ ಸಲಹೆಗಳನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಹಲವಾರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ಈ ಸದನದಲ್ಲಿ ಆಗಿದೆ. ಈಗ, ಚರ್ಚೆ ಮಾಡಬೇಕಾಗಿರುವುದು, ಇತ್ತೀಚೆಗೆ 7–8 ದಿವಸಗಳಿಂದ ಏನು ನಡೆಯುತ್ತಿದೆಯೋ ಇದರ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಕುಮಾರಸ್ವಾಮಿ ಇವರೆಲ್ಲಾ ನಿಯಮ 69ರ ಮೇಲೆ ಚರ್ಚೆ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು:– ನಿಯಮ 69ಕ್ಕೆ convert ಆಯಿತು.

ಮಾನ್ಯ ಅಧ್ಯಕ್ಷರೆ, ಇಂತಹ ಘಟನೆಗಳು ನಡೆಯಬಾರದು. ಬಹುಶಃ ನಾನು ಕಳೆದ ಬಾರಿ ಮಾತನಾಡುವಾಗ ಹೇಳಿದ್ದೇನೆ. ಇದು ನಾವೆಲ್ಲರೂ ತಲೆತಗ್ಗಿಸುವಂತಹುದು ಹಾಗೂ ನಾಚಿಕೆಗೇಡು. ಆದರೆ, ಯಾರು ಅಪರಾಧ ಮಾಡುತ್ತಾರೆ, ಅವರಿಗೆ ಕಠಿಣ ಶಿಕ್ಷೆ ಕೊಡಬೇಕು. ಅದು ಏನಾಗಿದೆ ಎಂದು ತಮಗೆ ಗೊತ್ತಿದೆ, ದೆಹಲಿಯಲ್ಲಿ ನಿರ್ಭಯ ಕೇಸ್ ನಡೆದ ನಂತರ IPC Sectionಗೆ ಈಗಾಗಲೇ amendment ತಂದಿದ್ದಾರೆ. 376(ಎ) ಯಲ್ಲಿ ಸಾಕಷ್ಟು ಶಿಕ್ಷೆ ಕೊಡುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ

ಯಾರು officers ಇಂತಹ ಅತ್ಯಾಚಾರ ಪ್ರಕರಣಗಳಲ್ಲಿ ಸರಿಯಾಗಿ ಕ್ರಮ ತೆಗೆದುಕೊಳ್ಳುವುದಿಲ್ಲ, ಯಾರು dilute ಮಾಡುತ್ತಾರೆ ಅವರ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳುವುದಕ್ಕೆ ಅದೇ section ನಲ್ಲಿ 166(ಎ) ಸಮೇತ ಇಂದು ಬಂದಿದೆ. ನಾನು ಮೊದಲೇ ಹೇಳುತ್ತಿದ್ದೇನೆ. ಇಂತಹ ಘಟನೆಗಳು ಯಾವಾಗಲೂ ನಡೆಯುತ್ತಿವೆ, ಆದರೆ, ಇತ್ತೀಚೆಗೆ ಸ್ವಲ್ಪ ಹೆಚ್ಚಾಗಿದೆ. ಏಕೆಂದರೆ, ನಿರ್ಭಯ ಕೇಸ್ ಆದ ಮೇಲೆ ಈ section ಗೆ amendment ತರುವ ಮೂಲಕ ಇದಕ್ಕೆ wider definition ಕೊಟ್ಟಿದ್ದಾರೆ. ದೆಹಲಿಯಲ್ಲಿ ಆದ ರೀತಿ ಮಾಧ್ಯಮಗಳಲ್ಲಿ ಮತ್ತು ಜನಾಂದೋಲನದ ಮೂಲಕ ಎಲ್ಲಾ ಜನಾಭಿಪ್ರಾಯ ಸಮೇತ ಇಂತಹವರ ವಿರುದ್ಧ ಆಗಿದೆ. ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರವೂ ಸಹ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಬಹುಶಃ ಅಂಕಿಅಂಶಗಳನ್ನು ನೋಡಿದರೆ, ಈಗಾಗಲೇ ರಾಜ್ಯ ಸರ್ಕಾರ ಪ್ರತಿಯೊಂದು ವಿಚಾರದಲ್ಲಿಯೂ ಕ್ರಮ ತೆಗೆದುಕೊಂಡಿದೆ. ಯಾರು ತಪ್ಪು ಮಾಡಿದ್ದಾರೆ, ಅವರನ್ನೆಲ್ಲಾ ಬಹುಶಃ 95–96% ಅಷ್ಟು ಈಗಾಗಲೇ ಅವರನ್ನು arrest ಮಾಡಿದ್ದೇವೆ. ಅವರ ಮೇಲೆ Sections ಹಾಕಿದ್ದೇವೆ. ಅವರನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವ ಕೆಲಸ ಮಾಡಿದ್ದೇವೆ. ಆದರೆ ಇದರಲ್ಲಿ ಏನು ತೊಂದರೆಯಾಗುತ್ತಿದೆ ಎಂದರೆ, ನಮಗೆ Fast Tract Court ನಲ್ಲಿ ಇದಕ್ಕೆ ನ್ಯಾಯ ದೊರಕಿಸಕೊಡಬೇಕಾಗಿದೆ. ಮಾನ್ಯ ಅಶೋಕ್ ರವರು ಹೇಳಿದರು. National Law School of India University, Bangalore ವಿಚಾರದಲ್ಲಿ, ಆ ಘಟನೆ ನಡೆದ ಒಂದು ವರ್ಷದಲ್ಲಿಯೇ ಆ ಕೇಸ್ ಇತ್ಯರ್ಥವಾಗಿ ಅಪರಾಧಿಗಳಿಗೆ ಶಿಕ್ಷೆ ಕೊಡುವಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ 10 Fast Track Courts ಮಾಡುವುದಕ್ಕೆ ಈಗಾಗಲೇ ನಾವು ಒಪ್ಪಿಗೆ ಕೊಟ್ಟು ನಮ್ಮ High Court ಮುಂದೆ ಹೋಗಿದೆ. ಅವರೇನು ಮಾಡುತ್ತಾರೆಂದರೆ ಹೈಕೋರ್ಟ್‌ನವರು ಇಲ್ಲ, judges ಸ್ವಲ್ಪ ಕಡಿಮೆ ಇದ್ದಾರೆ. ಅದಕ್ಕೋಸ್ಕರ regular court ಗೆ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ ನಮ್ಮ Law Minister ಮೊನ್ನೆ ಮತ್ತೆ Chief Justice ಬಳಿ ಹೋಗಿ. ಇಲ್ಲ, ಈ ಕೇಸುಗಳಿಗಾಗಿ ಕೆಲವು judge ಗಳನ್ನಾದರೂfast track

Court ಗೆ separate ಕೊಡಬೇಕೆಂದು ಹೇಳಿದ್ದು, ಅವರು ಸಹ ಪರಿಗಣನೆ ಮಾಡುತ್ತಿದ್ದಾರೆ. ಬಹುಶಃ ಪ್ರತಿಯೊಂದು ವಿಚಾರದಲ್ಲಿಯೂ ಅಪರಾಧಿಗಳಿಗೆ ಆದಷ್ಟು ಬೇಗನೆ ಶಿಕ್ಷೆ ಕೊಟ್ಟರೆ ಇಡೀ ರಾಜ್ಯಕ್ಕೆ ಒಳ್ಳೆಯ ಸಂದೇಶ ಹೋಗುತ್ತದೆ. ತಮ್ಮಲ್ಲಿ ಕಳಕಳಿಯಿಂದ ನಾನು ವಿನಂತಿ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಅಂಕಿ-ಅಂಶಗಳನ್ನು ನೋಡಿದರೆ ಅತ್ಯಾಚಾರ ವಿಚಾರದಲ್ಲಿ ಮಾತ್ರ ಹೇಳುವುದಾದರೆ 2011 ರಲ್ಲಿ 630, 2012 ರಲ್ಲಿ 621, 2013 ರಲ್ಲಿ 1030 ಇತ್ತು. ಏಕೆಂದರೆ, 6 ತಿಂಗಳು ನೀವು ಅಧಿಕಾರದಲ್ಲಿದ್ದಿರಿ ಮತ್ತು ಇನ್ನುಳಿದ 6 ತಿಂಗಳು ನಾವು ಅಧಿಕಾರದಲ್ಲಿದ್ದೆವು. ನಾವು-ನೀವು ಎಂಬ ಪ್ರಶ್ನೆ ಬರುವುದಿಲ್ಲ. ನಿರ್ಭಯ ಕೇಸ್ ಆದ ಮೇಲೆ ಜನ ಧೈರ್ಯ ಮಾಡಿದ್ದಾರೆ. ಮೊದಲು ಮಹಿಳೆಯರು ಬರುತ್ತಿರಲಿಲ್ಲ. ಏಕೆಂದರೆ ಇದೊಂದು ರೀತಿಯ ಸಾಮಾಜಿಕ ಪಿಡುಗು. ಮಹಿಳೆ ಅತ್ಯಾಚಾರಕ್ಕೆ ಒಳಗಾದರೆ ಅವಳನ್ನು ಸಮಾಜದಿಂದ ಹೊರ ಹಾಕುವ ಪ್ರಶ್ನೆ ಬರುತ್ತದೆ. ನಾನು ಗೃಹ ಮಂತ್ರಿಯಾದಾಗ ತಮಗೆ ಗೊತ್ತಿರುವಂತೆ ಮಣಿಪಾಲ್‌ನಲ್ಲಿ Medical College Student ಮೇಲೆ ಅತ್ಯಾಚಾರವಾಗಿತ್ತು. ಆ ವಿದ್ಯಾರ್ಥಿನಿ ಮುಂದೆ complaint ಇಲ್ಲವೆಂದು ಹೇಳಿದಳು. ಯಾವುದೇ ಪೊಲೀಸ್ ಅಧಿಕಾರಿಗಳನ್ನು meet ಮಾಡುವುದಕ್ಕೂ ಸಹ ಬಿಡುತ್ತಿಲ್ಲ. ನಾವೇ complaint ಕೊಡುತ್ತಿಲ್ಲ, ಎಂದ ಮೇಲೆ ನೀವು ಏಕೆ ಕೇಸ್ ಮಾಡುತ್ತೀರಿ ಎಂದು ಹೇಳಿದರು. ಮತ್ತೆ ನಾವು ವಿಚಾರಿಸಿದಾಗ ಆ ವಿದ್ಯಾರ್ಥಿನಿಯ parents ಹೇಳಿದರು. ನಾವೇನಾದರೂ complaint ಕೊಟ್ಟರೆ ನಮ್ಮ ಮಗಳ ಭವಿಷ್ಯ ಹಾಳಾಗುತ್ತದೆ. ಅವಳನ್ನು ಯಾರೂ ಮದುವೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳಿ, ನಂತರ ಒತ್ತಡದಿಂದ ನಾವು complaint ಇಲ್ಲದಿದ್ದರೂ ಸಹ suo-moto complaint ಹಾಕಿ ವಿಚಾರಣೆ ಮಾಡಿ ಯಾರು ಆರೋಪಿಗಳಿದ್ದಾರೆಂದು ಪತ್ತೆ ಮಾಡಿದೆವು. ಅದೇ ರೀತಿ ತಾವು ನೋಡಿರಬಹುದು. ಇಡೀ ಕರ್ನಾಟಕದಲ್ಲಿ ಎಲ್ಲಾ ವಿಚಾರದಲ್ಲಿ ಎಲ್ಲೆಲ್ಲಿ ಅತ್ಯಾಚಾರವಾಗಿದೆ, ಬೆಂಗಳೂರಿನಲ್ಲಿ ಸಹ ಅಪರಾಧಿಗಳನ್ನು ಬಂಧಿಸಿದ್ದೇವೆ. ಆದರೆ ಇತ್ತೀಚೆಗೆ ಪುಲಕೇಶಿ ನಗರದಲ್ಲಿ ಈ ಒಂದು ಘಟನೆಯಾಗಿದ್ದು ಮಾತ್ರ ದುರ್ಘಟನೆ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಅದರ ವಿಚಾರವನ್ನು ಹೇಳುವುದಾದರೆ, ಯಾರು ಅತ್ಯಾಚಾರಕ್ಕೆ ಒಳಗಾಗಿದೆ, ಆ ಹುಡುಗಿಯ ಮನೆಯವರು complaint ಕೊಡುವಲ್ಲಿ ಎರಡು ದಿನ ತಡವಾಯಿತು. Complaint ಕೊಟ್ಟ ಕೂಡಲೇ ನಮ್ಮ ಪೊಲೀಸ್ ಅಧಿಕಾರಿಗಳು ಕಾರು ಮತ್ತು ಇದನ್ನು seize ಮಾಡಿದರು. Seize ಮಾಡಿ ನಾನು ಈಗಾಗಲೇ ಹೇಳಿದ್ದೇನೆ. 376 (ಎ) ಹಾಕುವ ಬದಲು 354 ಹಾಕುತ್ತಾರೆ. ಅದಕ್ಕೆ ಮಾಧ್ಯಮದಲ್ಲಿ ಬರುವ ಮೊದಲು ಅಥವಾ ಸದನದಲ್ಲಿ ಚರ್ಚೆಯಾಗುವ ಮೊದಲು ನಮ್ಮ Commissioner ಅಥವಾ ನಮ್ಮ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಬಂದ ಕೂಡಲೇ ಅವರೇನು ಮಾಡುತ್ತಾರೆಂದರೆ, ಆ investigation ಅನ್ನು ಸಂಬಂಧಪಟ್ಟ Circle Inspector ಕಡೆಯಿಂದ ತೆಗೆದು Assistant Commissioner of Policeಗೆ ಕೊಟ್ಟು immediate ಆಗಿ ಅದಕ್ಕೆ amendment ತಂದು ಆ ಒಂದು 376 (ಎ) ಗೆ ಇನ್ನೊಂದು ಸೆಕ್ಷನ್ ಸೇರಿಸಿ amendment ಮಾಡಿ file ಮಾಡುತ್ತಾರೆ. ಇದರಲ್ಲಿ Section 166 ಬಗ್ಗೆ ಅಂದು ಚರ್ಚೆಯಾಯಿತು, ಅಂದು ಮಾನ್ಯ ಜಗದೀಶ್ ಶೆಟ್ಟರ್ ರವರು, ಬೋಪಯ್ಯ ರವರು ಎಲ್ಲರೂ ಹೇಳಿದರು. ಇಲ್ಲ, ಅವರ ಮೇಲೆ action ತೆಗೆದುಕೊಳ್ಳಬೇಕೆಂದು ಹೇಳಿದರು. ನಾನೇನು ಹೇಳಿದೆ. ಸದನದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಕಾನೂನಿನ ಪ್ರಕಾರ Investigation Officer ಕಡೆಯಿಂದ ತನಿಖೆಯಾಗುತ್ತದೆಂದು ಹೇಳಿದೆವು. ಅವರಿಗೆ ನಾವು ಯಾವುದೇ ಒತ್ತಡ ಹಾಕಲಿಲ್ಲ. Immediate ಆಗಿ ಅವರು ತನಿಖೆ ಮಾಡಿ Section 166 (ಎ) ಪ್ರಕಾರ Inspector ಅನ್ನು suspend ಮಾಡಿ ಕೇಸು ಹಾಕಿದ್ದಾರೆ. ಈ ವಿಚಾರದಲ್ಲಿ ಏನಾಗುತ್ತದೆಂದರೆ, Accused number one ಏನು ಮಾಡುತ್ತಾನೆಂದರೆ; ಅವನ ವಿಚಾರಣೆಯ ಸಂದರ್ಭದಲ್ಲಿ ಬೇರೆಯವರ ಹೆಸರು ಕೊಡುತ್ತಾನೆ, ಅವನ ವೈರಿಗಳು, ಅವನಿಗೆ ಆಗದವರು ಯಾರು ಇರುತ್ತಾರೆ, ಅವರ ಹೆಸರನ್ನು ಕೊಡುತ್ತಾನೆ. ಆದರೂ ನಮ್ಮ ಪೊಲೀಸ್ ಅಧಿಕಾರಿಗಳು ಅವರನ್ನು ಕರೆದು ವಿಚಾರಿಸಿದಾಗ ಅವರು

ನಿರಪರಾಧಿಗಳೆಂದು ಗೊತ್ತಾದ ಮೇಲೆ ಸರಿಯಾಗಿ ಮತ್ತೆ ವಿಚಾರಣೆ ಮಾಡಿ ನಿಜವಾದ ಅಪರಾಧಿಗಳನ್ನು ಈಗ 5 ಜನರಲ್ಲಿ 4 ಜನರನ್ನು ಹಿಡಿಯುವ ಕೆಲಸ ಮಾಡಿದ್ದೇವೆ. ಇನ್ನೊಬ್ಬರು ತಲೆ ಮರೆಸಿಕೊಂಡಿದ್ದು, ಅವರನ್ನು ಆದಷ್ಟು ಬೇಗನೆ ಹಿಡಿಯುವ ಕೆಲಸ ಮಾಡುತ್ತೇವೆ. ಅದೇ ರೀತಿಯಲ್ಲಿ ಲಿಂಬಾವಳಿಯವರು ಅಂದು ಅವರು ಕೇಳಿದ ಪ್ರಶ್ನೆಗೆ ಉತ್ತರ ತಯಾರು ಮಾಡಿ ಇಟ್ಟಿದ್ದೆ. ಅಧ್ಯಕ್ಷರಿಗೆ ಶಾಲೆಯಲ್ಲಿ ನಡೆದ ವಿಚಾರವಾಗಿ ಉತ್ತರ ಇರುವುದಾಗಿ ಹೇಳಿದೆ. ಆದರೆ ನೀವು ಅಂದು walk out ಮಾಡಿದ್ದರಿಂದ ಅಧ್ಯಕ್ಷರು ಮತ್ತೆ ತೆಗೆದುಕೊಳ್ಳಲು ಹೇಳಿದ್ದರಿಂದ ನಾವು ಉತ್ತರ ಕೊಡಲಾಗಲಿಲ್ಲ. ಸರ್ಕಾರದವರು ಅಂದೇ ಉತ್ತರ ಕೊಡುವುದಕ್ಕೆ ತಯಾರಿದ್ದೆವು. ಇವತ್ತು ಹೇಳುತ್ತಿದ್ದೇನೆ. ಅದು ಒಂದು ದುರ್ಘಟನೆ. ಘಟನೆ ನಡೆದದ್ದು 2ನೇ ತಾರೀಖು ಎಂದು ಹುಡುಗಿಯ ಪೋಷಕರು complaint ಕೊಡುತ್ತಾರೆ. ಆ ಹುಡುಗಿ ಬುದ್ದಿಮಾಂದ್ಯ ಅಲ್ಲ. ತಪ್ಪಾಗಿ ತಿಳಿದುಕೊಳ್ಳಬೇಡಿ. Hyper active ಇರುವ ಹುಡುಗಿ. ಕೆಲವು ಮಕ್ಕಳು ತುಂಬಾ active ಇರುತ್ತಾರೆ. She is a very clever girl. ಆ ಕ್ಲಾಸಿಗೆ ಅವಳು 5ನೇ rank ನವಳು. ಅವಳು ಕ್ಲಾಸಿನಲ್ಲಿ ಕೂರುವುದಿಲ್ಲ, ಓಡಾಡುವುದು, ತುಂಟತನ ಮಾಡುವುದು ಸ್ವಲ್ಪ ಜಾಸ್ತಿ ಇತ್ತು. ಅದಕ್ಕಾಗಿ ಒಂದು Shadow teacher ಅನ್ನು ಮಾಡುತ್ತಾರೆ. Shadow teacher ಬರುವುದು 08.40 ಗಂಟೆಗೆ ಬರಬಹುದು. ಇವರನ್ನು ಬಸ್‌ನಲ್ಲಿ ಬಂದು ಬಿಡುವುದು 07.00 ಗಂಟೆಗೆ. ಸುಮಾರು 40ನಿಮಿಷ ಆ ಹುಡುಗಿಯ ಜೊತೆ ಯಾರೂ ಇಲ್ಲ. ಆ ಹುಡುಗಿ ಓಡಾಡುತ್ತಿರುತ್ತಾಳೆ. ಆ ಸಂದರ್ಭದಲ್ಲಿ 2ನೇ ತಾರೀಖು ಆಗಿದೆ ಎಂದು ಅವರು ಹೇಳುತ್ತಾರೆ. ಆದರೆ ಪೊಲೀಸ್ ಠಾಣೆಗೆ ದೂರು ಬರುವುದು 14ನೇ ತಾರೀಖಿಗೆ. ಅಲ್ಲಿಯ ತನಕ ಆ Management ನವರು ಅವರಿಗೆ ಗೊತ್ತಿದ್ದರೂ ಸಹ parents ಗೆ ಸಹ ತಿಳಿಸಿರುವುದಿಲ್ಲ. ಮನೆಯಲ್ಲಿ ಪಾಪ ಸಣ್ಣ ಹುಡುಗಿ ನೋವಿದೆ ಎಂದು ಹೇಳಿದ ಕೂಡಲೇ 2–3 ದಿನದ ನಂತರ ಡಾಕ್ಟರ್‌ಗೆ ತೋರಿಸಿದಾಗ ಅವಳ ಮೇಲೆ ಲೈಂಗಿಕ ಕಿರುಕುಳ ಆಗಿದೆ ಎಂದು ಗೊತ್ತಾಗಿದೆ. ಅತ್ಯಾಚಾರ ಎಂದ ಕೂಡಲೇ ತಿಳಿದುಕೊಳ್ಳಬೇಕು, new definition ಪ್ರಕಾರ

376 (ಎ) ಪ್ರಕಾರ ಅತ್ಯಾಚಾರವಾಗಿದೆ. ತಾವು ಹೇಳಿದಂತೆ ಪೊಲೀಸ್ ಅಧಿಕಾರಿಗಳು ವಿಚಾರಣೆ ನಡೆಸಬೇಕಾಗುತ್ತದೆ, ಯಾರನ್ನೋ ಹಿಡಿದುಕೊಂಡು ಬಂದು arrest ಮಾಡಲಾಗುವುದಿಲ್ಲ. ಶಾಲೆಯವರು ಸಹ ತಪ್ಪು ಮಾಡಿದ್ದಾರೆ. ಅವರು ಮೊದಲೇ ಇದನ್ನು report ಮಾಡಬೇಕಿತ್ತು. ಮತ್ತೆ ಅವರು ಸಿ.ಸಿ. ಟಿ.ವಿ. ಎಲ್ಲವನ್ನೂ ಕೊಡಲು ತಡ ಮಾಡಿದ್ದಾರೆ. ಅವರ ವಿರುದ್ಧವೂ ಸಹ ಈಗಾಗಲೇ FIR file ಮಾಡಿ ಕೇಸು ದಾಖಲು ಮಾಡುವುದಕ್ಕೆ special team ಹಾಕಿದ್ದೇವೆ. ಆ ಶಾಲೆಯಲ್ಲಿ ಸುಮಾರು 6,000 ಮಕ್ಕಳು ಓದುತ್ತಿದ್ದಾರೆ. ನಿಜವಾಗಿಯೂ ಶಾಲೆಯವರು, ಈ ಘಟನೆಯನ್ನು ತಡೆಯಬಹುದಾಗಿತ್ತು. ಆ ಶಾಲೆಯವರು ಯಾರು ಆ physical instructers ಅಥವಾ skating trainer ಇದ್ದಾರೆ, ಅವರ ಚರಿತ್ರೆ ನೋಡಿಕೊಂಡಿದ್ದರೆ, ಅವರು ಯಾವ ರೀತಿಯಲ್ಲಿ ಬಂದಿದ್ದಾರೆ? ಅವರು ಇನ್ನೊಂದು ಶಾಲೆಯಿಂದ ಇದೇ ಕಾರಣದ ಮೇಲೆ ಅವರನ್ನು ಹೊರ ಹಾಕಿದ್ದಾರೆ. ಅವರನ್ನು ಇವರು ತಮ್ಮ ಶಾಲೆಗೆ ತೆಗೆದುಕೊಂಡಿದ್ದಾರೆ. ನಾವು ಈಗಾಗಲೇ ಒಬ್ಬರನ್ನು arrest ಮಾಡಿದ್ದು, ಇನ್ನೊಬ್ಬರು ಇದ್ದಾರೆಂದು complaint ಕೊಟ್ಟಿದ್ದಾರೆ. ಅವರನ್ನು ಸಹ arrest ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನೊಂದು ಏನಾಗಿದೆ ಎಂದರೆ, ಜಗದೀಶ್ ಶೆಟ್ಟರ್ ಬೇರೆ ಕೆಲವು ವಿಚಾರಗಳನ್ನು ಕೇಳಿದ್ದಾರೆ. ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ seminar ಯಲ್ಲಿ ಒಂದು ಹುಡುಗಿಯ ಮೇಲೆ ಅತ್ಯಾಚಾರವಾಗಿದ್ದು, ಅದನ್ನು ಇನ್ನೂ ಪತ್ತೆ ಹಚ್ಚಲು ಆಗಿಲ್ಲ. ಒಂದು Special Team ಮಾಡಿದ್ದೇವೆ. ಆಂಧ್ರಪ್ರದೇಶದಿಂದ ಹುಡುಗಿ ಬಂದಿದ್ದು, ಹುಡುಗಿಯ ಸಂಪೂರ್ಣ ವಿವರವನ್ನು ಪಡೆಯುವುದಕ್ಕೆ ಅಲ್ಲಿಗೂ ಸಹ ತಂಡ ಹೋಗಿದೆ. ಇದರ ಅಪರಾಧಿಗಳನ್ನು ಆದಷ್ಟು ಬೇಗನೆ arrest ಮಾಡುವ ಕೆಲಸವನ್ನು ಮಾಡುತ್ತೇವೆ. ಅದೇ ರೀತಿಯಲ್ಲಿ ಬಿಜಾಪುರ ಜಿಲ್ಲೆಯ, ಸಿಂಧಗಿ ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ದಾಖಲಾದ ಒಂದು ಪ್ರಕರಣದಲ್ಲಿ ಈಗಾಗಲೇ ಆರೋಪಿಗಳನ್ನು ಬಂದಿಸಿದ್ದೇವೆ. ಹಾಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ನೆಲೊಗಿ ಪೊಲೀಸ್ ಠಾಣೆಯಲ್ಲಿ ದಾಖಲಾದ ವಿಚಾರದಲ್ಲಿ ಈಗಾಗಲೇ ಆರೋಪಿಯನ್ನು ಬಂದಿಸಿದ್ದೇವೆ, ಬೆಳಗಾವಿ ಜಿಲ್ಲೆಯ ಕುಡಚಿ

ಪೊಲೀಸ್ ಠಾಣೆಯಲ್ಲಿ ದಾಖಲಾದ ಅತ್ಯಾಚಾರಕ್ಕೆ ಸಂಬಂಧಿಸಿದ ಆರೋಪಿಗಳನ್ನು ದಸ್ತಗಿರಿ ಮಾಡಿದ್ದೇವೆ. ಅದೇ ರೀತಿ ಬೀದರ್ ಜಿಲ್ಲೆ ಮದಗಲ್ ಪೊಲೀಸ್ ಠಾಣೆಯಲ್ಲಿ ವರದಿಯಾದ ಅತ್ಯಾಚಾರದ ಪ್ರಕರಣದ ವಿಚಾರದಲ್ಲೂ ಕೂಡ ಆರೋಪಿಯನ್ನು ದಸ್ತಗಿರಿ ಮಾಡಿದ್ದೇವೆ. ಅದೇ ರೀತಿ ಮಾಲೂರಿನಲ್ಲಿ ನಡೆದ ಒಂದು ಅತ್ಯಾಚಾರ ಪ್ರಕರಣದಲ್ಲಿ ಸಮೇತ ಆರೋಪಿಯನ್ನು ಬಂದಿಸಲಾಗಿದೆ. ಈ ರೀತಿಯಾಗಿ ನಾವು ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಬಹುಶಃ ಈ ರೀತಿಯಾಗಿ ನಮ್ಮ ಅಧಿಕಾರಿಗಳು ಸಮೇತ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಬೆಂಗಳೂರು ವಿಚಾರ ಹೇಳುವುದಾದರೆ, ಸುಮಾರು 60 ಪ್ರಕರಣಗಳು ಬೆಂಗಳೂರಿನಲ್ಲಿ ನಡೆದಿವೆ. ಒಂದೊಂದು ತಿಂಗಳಿನಲ್ಲಿ ಯಾವ ಯಾವ ಪ್ರಕರಣಗಳೆನ್ನುವುದನ್ನು ತಾವು ನೋಡಬಹುದು. 45 ಕೇಸ್‌ಗಳು elopement and cheating, ತಮಗೆ ಗೊತ್ತಿರುವಂತೆ ಅವರು friendship ಸ್ನೇಹಿತರೆಂದು ಕರೆದುಕೊಂಡು ಹೋಗಿ ಮಾಡುವುದು, ಇಂಥ 45 ಕೇಸ್ ಗಳು. 9 ಕೇಸ್‌ಗಳಲ್ಲಿ ಗೊತ್ತಿರುವವರೆ ಮಾಡಿದ್ದಾರೆ, ಅಂದರೆ ನೆರೆಹೊರೆಯವರು ಗೊತ್ತಿರುವವರು 9 ಕೇಸ್ ಗಳಲ್ಲಿ ಮಾಡಿದ್ದಾರೆ, 2 ಕೇಸ್ ನಲ್ಲಿ ತಂದೆ ಅಥವಾ step father ಮಾಡಿದ್ದಾರೆ, ಇನ್ನು 4 ಕೇಸ್ ಗಳಲ್ಲಿ ಕ್ರಿಮಿನಲ್ಸ್ ಮಾಡಿದ್ದಾರೆ. ಈವರೆಗೆ ಜೂನ್ ತನಕ ಈ ಎಲ್ಲಾ ಕೇಸ್ ಗಳಲ್ಲಿ ಆರೋಪಿಗಳನ್ನು ಅರೆಸ್ಟ್ ಮಾಡಿದ್ದೇವೆ. ಇನ್ನು ರಾಜ್ಯಮಟ್ಟದಲ್ಲೂ ಕೂಡ ಇದೇ ರೀತಿಯಲ್ಲಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇವತ್ತು ನಡೆದ ಚರ್ಚೆಯಲ್ಲಿ ಸಾಕಷ್ಟು ಒಳ್ಳೆಯ ಸಲಹೆಗಳು ಬಂದಿವೆ. ಈಗ ಇದು ಅಂತರಾಷ್ಟ್ರೀಯ ಮಟ್ಟದಲ್ಲಿ ಸುದ್ಧಿ ಎಂದು ಜಗದೀಶ್ ಶೆಟ್ಟರ್ ಹೇಳಿದರು. ನಾನು ಹೇಳುವುದೇನೆಂದರೆ, ಇದು ವರ್ಷವರ್ಷ ನಡೆಯುತ್ತಿದೆ ನಡೆಯಬಾರದು, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಕರ್ನಾಟಕ ಅಥವಾ ಬೆಂಗಳೂರು ಬರೀ ಅತ್ಯಾಚಾರಿಗಳ ರಾಜ್ಯ, ಬೆಂಗಳೂರು ಅತ್ಯಾಚಾರಿಗಳ ನಗರವೆಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಮ್ಮಲ್ಲಿ ಸುಮಾರು ಆರೂವರೆ ಕೋಟಿ ಜನರಿದ್ದಾರೆ, ಬಹುಶಃ ನಾವು ಅವರನ್ನೆಲ್ಲಾ ಅತ್ಯಾಚಾರಿಗಳೆಂದು ಪಟ್ಟಿ ಕಟ್ಟುವುದಕ್ಕಾಗುವುದಿಲ್ಲ. ನಮ್ಮಲ್ಲಿ

incident ಆಗುವುದು ಸಾವಿರ, ಅದಾಗಬಾರದೆಂಬುದನ್ನು ಒಪ್ಪುತ್ತೇನೆ. ಆದರೆ, ಯಾರು ತಪ್ಪು ಮಾಡುತ್ತಾರೆ ಅವರಿಗೆ ಶಿಕ್ಷೆ ಕೊಡಬೇಕು, ಅವರನ್ನು ಬೇಕಾದರೆ ಸಮಾಜದಿಂದ ಬಹಿಷ್ಕಾರ ಹಾಕಬೇಕೇ ಹೊರತು, ತಪ್ಪು ಮಾಡುವವರನ್ನು ಬಿಟ್ಟು, ಇದು ಸಾಕಷ್ಟು ಏನೆಂದು ಪ್ರಚಾರವಾಗುತ್ತಿದೆ ಎಂದರೆ, ಕರ್ನಾಟಕದಲ್ಲಿ ಈ ರೀತಿ ನಡೆಯುತ್ತಿದೆ ಎಂದು ಹೇಳುವುದು ಬರುತ್ತಿದೆ. ಹಾಗೆ ಬೆಂಗಳೂರು ನಗರದಲ್ಲಿ ಕಾನೂನು ಸುವ್ಯವಸ್ಥೆಯಿಲ್ಲವೆನ್ನುವ ಮಟ್ಟಿಗೆ ನಾವು ಇವತ್ತು ಪ್ರಚಾರ ಕೊಡುತ್ತಿದ್ದೇವೆ, ದಯವಿಟ್ಟು ನಾನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ, ನಮ್ಮ ರಾಜ್ಯದಲ್ಲಿ ಹಾಗೆ ಇಲ್ಲ, ನಮ್ಮ ನಗರದಲ್ಲಿ ಹಾಗೆ ಇಲ್ಲ, ಯಾರು ತಪ್ಪು ಮಾಡುತ್ತಾರೆ, ಯಾರು ಅತ್ಯಾಚಾರಿಗಳಿದ್ದಾರೆ, ಯಾರು ಆರೋಪಿಗಳಿದ್ದಾರೆ ಅವರಿಗೆ ನಾವು ನೀವೆಲ್ಲಾ ಸೇರಿ ಶಿಕ್ಷೆ ಕೊಡಿಸೋಣ, ಮಾಧ್ಯಮದವರು ಕೂಡ ನಮಗೆ ಸಹಕಾರ ಕೊಡಲಿ, ಅದೇ ರೀತಿ ಸಾರ್ವಜನಿಕರೂ ಕೂಡ ನಮಗೆ ಸಹಕಾರ ಕೊಡಲಿ. ಬಹುಶಃ ಆ ಸ್ಕೂಲಿನಲ್ಲಿ ಪೋಷಕರು ಸಾಕಷ್ಟು emotional ಆಗಿ ಪ್ರತಿಭಟನೆ ಮಾಡುತ್ತಿರುವುದನ್ನು ನೋಡಿದ್ದೇವೆ. ನಿಜ, ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ಮಗುವಿನ ವಿಚಾರದಲ್ಲಿ ಈ ರೀತಿಯಾಗಿದೆ ಎಂದರೆ, ನಮಗೂ ನಿಮಗೆಲ್ಲಾ ಬೇಸರವಾಗುತ್ತದೆ, ಆ ರೀತಿಯಾಗಬಾರದಿತ್ತು. ಆದರೆ, ಇವತ್ತು ನಾವೂ ಸಮೇತ ಅವರೊಂದಿಗೆ ಇದ್ದೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು, Educational Institutions ಯಾವ ರೀತಿಯಲ್ಲಿ ಮಾಡಬೇಕೆಂದು ಒಂದು ಸಭೆ ಮಾಡಿದರು. ಇವತ್ತು ಮಧ್ಯಾಹ್ನ ಆ ಪೋಷಕರನ್ನೂ ಕೂಡ ಕರೆದು ಅವರೊಡನೆಯೂ ಕೂಡ ಮಾತನಾಡುತ್ತೇವೆ. ಯಾರು management ತಪ್ಪು ಮಾಡಿದ್ದಾರೆ, ಅವರ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಶಿಕ್ಷಕರ ವಿಚಾರದ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿದರು, ಆತ ಶಿಕ್ಷಕನಲ್ಲ ಒಬ್ಬ ಕೀಚಕ. ಶಿಕ್ಷರೆಂದು ಹೇಳಿದರೆ ಈ ಕರ್ನಾಟಕದಲ್ಲಿ ಲಕ್ಷಾಂತರ ಜನರಿದ್ದಾರೆ, ಅವರಿಗೆಲ್ಲಾ ಕಳಂಕ ತರುವ ರೀತಿಯಲ್ಲಿ ನಾವು ಮಾತನಾಡಬಾರದು. ಯಾರು ತಪ್ಪು ಮಾಡಿದ್ದಾರೆ, ಯಾರು ತಪ್ಪು ಮಾಡಿದ ಟೀಚರ್ ಇದ್ದಾರೆ, ಅವರ ಬಗ್ಗೆ ಮಾತನೋಡೋಣ. ಅದಕ್ಕೋಸ್ಕರ ಇವತ್ತು ಒಳ್ಳೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು

ಈಗ ಪೊಲೀಸ್ ಠಾಣೆಯನ್ನು ಜನಸ್ನೇಹಿ ಪೊಲೀಸ್ ಠಾಣೆಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಅದು ಬರೀ ನಮ್ಮ ಸರ್ಕಾರ ಅಥವಾ ಗೃಹ ಮಂತ್ರಿಯಿಂದಾಗುವುದಿಲ್ಲ. ಇವತ್ತು ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿದರು, ಪ್ರತಿಯೊಂದು ಪೊಲೀಸ್ ಠಾಣೆಯಲ್ಲೂ ಸಾರ್ವಜನಿಕ ಸಮಿತಿಗಳಾಗಬೇಕಾಗಿದೆ, specially police officers ಅನ್ನು ಮಾಡಬೇಕಾಗಿದೆ, ಈಗಾಗಲೇ ಮಾಡಿದ್ದಾರೆ. ಆದರೆ ಹೆಚ್ಚಿಗೆ ಆಕ್ಟೀವ್ ಆಗಿ ಈಗ ಇಲ್ಲ. ಈಗಾಗಲೇ ನಾವು ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಮಟ್ಟದಲ್ಲಿ 3–4 ಜಿಲ್ಲೆಗಳನ್ನು ಕೊಟ್ಟಿದ್ದೇವೆ, ಅವರು ಅಲ್ಲಿಗೆ ಹೋಗಿ ರಿವ್ಯೂ ಮಾಡುವುದಕ್ಕೆ ಹೇಳಿದ್ದೇವೆ. ಬರೀ ಎಡಿಜಿಪಿ ಹೋದರೆ ಸಾಲದು ನಮ್ಮ ಸಿಟಿ ಮಟ್ಟದಲ್ಲಿ Addl.Commissioners and Joint Commissioners ಇದ್ದಾರೆ, DCP & ACP ಗಳಿದ್ದಾರೆ ಎಲ್ಲರೂ ಹೋಗಿ ಸ್ಟೇಷನ್ ನಲ್ಲಿ ಕೂರಬೇಕಾಗುತ್ತದೆ. ಕುಳಿತು ಅಲ್ಲಿನ ಪೊಲೀಸ್ ಸ್ಟೇಷನ್ಸ್ ಅನ್ನು review ಮಾಡಬೇಕಾಗುತ್ತದೆ. ಬಹುಶಃ ಯಾವ ಸ್ಟೇಷನ್ ನಲ್ಲಿ SHO ಇರುತ್ತಾರೆ, ಅವರಿಗೆ ಗೊತ್ತಿಲ್ಲದೆ ಏನು ಮಾಡುವುದಕ್ಕಾಗುವುದಿಲ್ಲ. ನಮ್ಮ ಮುಖ್ಯಮಂತ್ರಿಗಳು ಸಭೆ ಕರೆದಾಗ ಜೋರು ಮಾಡಿದರೆಂದು ಕುಮಾರಸ್ವಾಮಿಯವರು ಹೇಳಿದರು. ಮುಖ್ಯಮಂತ್ರಿಗಳು ಯಾವ ಸಭೆಯಲ್ಲೂ ಜೋರು ಮಾಡಲಿಲ್ಲ, ಮುಖ್ಯಮಂತ್ರಿಗಳು ಎಲ್ಲಾ ಅಧಿಕಾರಿಗಳಿಗೆ ಬಹಳ ಒಳ್ಳೆಯತನದಿಂದ ಹೇಳುತ್ತಿದ್ದಾರೆ, ಅವರು ಕೊಡುವ ಸಲಹೆಗಳನ್ನು ಇವತ್ತು ನಾವು ನಿಜವಾಗಿ ಜಾರಿಗೆ ತಂದರೆ ನಮ್ಮಲ್ಲಿರುವ ಸಾಕಷ್ಟು ಸಮಸ್ಯೆಗಳನ್ನೂ ಕೂಡ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಹಾಗೆ ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಹಾಗಾಗಿ ರಿವ್ಯೂ ಸಭೆಗಳನ್ನು ಮಾಡುತ್ತಿರುತ್ತಾರೆ. ಮಾನ್ಯ ಸದಸ್ಯರಾದ ರಾಜೀವ್ ಅವರನ್ನು ಪ್ರತಿ ಪೊಲೀಸ್ ಠಾಣೆಯಲ್ಲಿ ಲೇಡಿ ಪೊಲೀಸ್ ಮತ್ತು ಅಧಿಕಾರಿಗಳನ್ನು ಹಾಕುವಂಥ ಕೆಲಸವನ್ನು ಮಾಡಿ ಎಂದು ಹೇಳಿದರು. ಈಗಾಗಲೇ ಮಹಿಳಾ ಪೊಲೀಸ್ ಠಾಣೆ 10 ಇವೆ. ಮತ್ತೇ ಇನ್ನು ಹತ್ತನ್ನು ಈ ವರ್ಷ ಮಾಡುತ್ತಿದ್ದೇವೆ, ಒಟ್ಟಿಗೆ 20 ಮಹಿಳಾ ಪೊಲೀಸ್ ಠಾಣೆ ಈ ವರ್ಷವಾಗುತ್ತಿದೆ, ಇನ್ನು 10 ಬರುವ ವರ್ಷ ಮಾಡುವುದಕ್ಕೆ

ಮುಖ್ಯಮಂತ್ರಿಗಳು ಅನುಮತಿಯನ್ನು ಕೊಟ್ಟಿದ್ದಾರೆ, ಬಹುಶಃ ಪ್ರತಿ ಜಿಲ್ಲೆಯಲ್ಲಿ ಒಂದೊಂದು ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಠಾಣೆಯನ್ನು ಮಾಡುತ್ತೇವೆ. ಮತ್ತು ಮಹಿಳಾ ವಾಣಿ 1091 ಏನಿದೆ, ಇದರ ಬಗ್ಗೆ ಎಲ್ಲಾ ಕಡೆಗಳಲ್ಲೂ ಸಾಕಷ್ಟು ಪ್ರಚಾರವನ್ನು ಕೊಡುತ್ತೇವೆ. ಇನ್ನು ಹೊಯ್ಸಳ ಮತ್ತು ಚೀತಾ ಬಗ್ಗೆ ಹೇಳಿದ್ದೀರಿ, ಈಗಾಗಲೇ ಸುಮಾರು 186 ಹೊಯ್ಸಳ ಈ ಬೆಂಗಳೂರು ನಗರದಲ್ಲಿದೆ. ಮೊನ್ನೆ ತಾನೇ ನಮ್ಮ ಮುಖ್ಯಮಂತ್ರಿಗಳು ` 5 ಕೋಟಿ ಕೊಟ್ಟು, ಹೊಸದಾಗಿ ಮಾಡಿದ್ದೇವೆ. ಅದೇ ರೀತಿಯಲ್ಲಿ ಮಹಿಳಾ ಅಭಯ ಸಮೇತ ಕೂಡ ಇದೆ, ಬಹುಶಃ ಅದು ಸಾಕಷ್ಟು ಕಾಣುತ್ತಿಲ್ಲವೆಂದು ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿದರು. ಅದನ್ನು ಕೂಡ ಎಲ್ಲಾ ಕಡೆ ಮಾಡುವುದಕ್ಕೆ ಮತ್ತು ಅದನ್ನು ಕಂಟ್ರೋಲ್ ರೂಂನಿಂದ ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಡಿಸಿಪಿ ಅನ್ನು ಮಾಡಿ ಎಂದು ಮುಖ್ಯಮಂತ್ರಿಗಳು ಮೊನ್ನೆ ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದಾರೆ. ಇನ್ನು ಮುಂದೆ ಹೊಯ್ಸಳವಿರಲಿ, ಅಭಯವಿರಲಿ, ಚೀತವಿರಲಿ, ಕಂಟ್ರೋಲ್ ರೂಂನಿಂದ ಡೈರೆಕ್ಟ್ ಆಗಿ ಮಾಡುತ್ತೇವೆ, ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಮಹಿಳಾ ಅಧಿಕಾರಿಯನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಅದೇ ರೀತಿ ಸ್ಪಂಧನ ಎಂದು ಮಲ್ಲೇಶ್ವರಂ ಮತ್ತು ಬಸವನಗುಡಿ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ, ಅದೇ ರೀತಿ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮೊನ್ನೆ ನಾನು ಯಾವುದೋ ಒಂದು ಟಿವಿಯಲ್ಲಿ Advertisement ನೋಡಿದೆ ಯಾವರೀತಿಯಲ್ಲಿ ಒಬ್ಬ ಮಹಿಳೆಯನ್ನು ದೌರ್ಜನ್ಯ ಮಾಡುವುದಕ್ಕೆ ಹೋದಾಗ ನಮ್ಮ ಯುವಕರು ದೌರ್ಜನ್ಯಕ್ಕೆ ಒಳಗಾಗುವವರನ್ನು ಸುತ್ತುವರೆದು ಯಾವರೀತಿ ರಕ್ಷಣೆ ಮಾಡುತ್ತಾರೆ ಎನ್ನುವ ಒಂದು ಜಾಹೀರಾತನ್ನು ನೋಡಿದೆ ಚೆನ್ನಾಗಿತ್ತು. ಇದು ನಮ್ಮ ಇತಿಹಾಸ ಮತ್ತು ನಮ್ಮ culture. ಏಕೆಂದರೆ, ನಾವು ಪುರುಷರು ಮೊದಲಿನಿಂದಲೂ ಮಹಿಳೆಯರಿಗೆ ರಕ್ಷಣೆ ಕೊಡುತ್ತಾ ಬಂದಿದ್ದೇವೆ, ಇವತ್ತು ಅವರನ್ನು ಅವರ ರಕ್ಷಣೆಗೆ ಬಿಡುವುದಲ್ಲ, ಸಮಾಜ ಎದ್ದೇಳಬೇಕು. ಯಾರು ಈ ರೀತಿ ಮಾಡುತ್ತಾರೆ ಅಂಥ ಮಹಿಳೆಯರಿಗೆ ಸಮಾಜದಿಂದಲೇ ರಕ್ಷಣೆ ಕೊಡುವಂಥ

ಕೆಲಸವನ್ನು ಮಾಡಬೇಕು. ಇದಕ್ಕೆ ಸಮಾಜದ ಎಲ್ಲಾ ಸಂಘ-ಸಂಸ್ಥೆಗಳು, ನಮ್ಮ ರಾಜಕೀಯ ಪಕ್ಷಗಳು ಎಲ್ಲರೂ ಮುಂದೆ ಬಂದು ಬಹುಶಃ ಯಾರು ಈ ರೀತಿಯ ತಪ್ಪನ್ನು ಮಾಡುತ್ತಾರೆ ಅವರನ್ನು isolate ಮಾಡಿ, ಅವರನ್ನು boycott ಮಾಡುವಂಥ ಕೆಲಸವನ್ನು ಮಾಡಿದರೆ ಒಳ್ಳೆಯ ಸಂದೇಶ ಹೋಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಅಶೋಕ್ ಅವರು ಗೂಂಡಾ Act ಬಗ್ಗೆ ಹೇಳಿದರು, ಬಹುಶಃ ನೀವು ಹೇಳಿದಂತೆ ಅದರಲ್ಲಿ History ಇದ್ದರೆ ಸುಲಭವಾಗಿ ಮಾಡಬಹುದು. ಆದರೆ ಈಗ ನಾವೇನು ಹೇಳುತ್ತಿದ್ದೇವೆಂದರೆ, ಯಾರು ಅತ್ಯಾಚಾರ ಮಾಡುತ್ತಾರೆ, ಪ್ರತಿಯೊಬ್ಬ ಅತ್ಯಾಚಾರಿಯ ಮೇಲೆ ಗೂಂಡಾ Act ಅನ್ನು ಜಾರಿ ಮಾಡುವುದಕ್ಕೆ ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅದಕ್ಕೆ amendment ಮಾಡಿ ಈ ಅತ್ಯಾಚಾರ ಕೂಡ ಈ ಗೂಂಡಾ ಆಕ್ಟ್ ಒಳಗಡೆ ಬರುವಂಥ ಕೆಲಸವನ್ನು ಮಾಡುತ್ತಿದ್ದೇವೆ, ಆದಷ್ಟು ಬೇಗ ಈ ಸದನದಲ್ಲಿ ತರುತ್ತಿದ್ದೇವೆ. ಅದೇ ರೀತಿಯಾಗಿ ಮಾನ್ಯ ಸದಸ್ಯರಾದ ಕುಮಾರ ಸ್ವಾಮಿಯವರು politicians ದುರ್ಬಳಕೆಯಾಗಬಾರದೆಂದು ಹೇಳಿದರು. ಆಗ ನಾನು ರಾಮನಗರ ಉಸ್ತುವಾರಿ ಮಂತ್ರಿಯಾಗಿದ್ದಾಗ ಕುಮಾರ ಸ್ವಾಮಿಯವರು ಹೇಳಿದರು, ಆ ಸಮಯದಲ್ಲಿ ನಾನು ವಿಚಾರಿಸಿ ವರದಿಯನ್ನೂ ತರಿಸಿಕೊಂಡಿದ್ದೇನೆ. ಆ ಸಮಯದಲ್ಲಿ ನನಗೆ ವರದಿ ಬಂದ ಪ್ರಕಾರ, ಇದಾಗಿಲ್ಲವೆಂದು ಹೇಳಿದರು, ಬಹುಶಃ ನಾನು ನಿಮಗೆ ಪತ್ರದ ಮೂಲಕ ತಿಳಿಸಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಯಾರು ಸರ್ಕಾರಿ ಅಧಿಕಾರಿ ದೂರನ್ನು ಕೊಟ್ಟಿದ್ದಾನೆ, ಆ ದೂರಿನ ಪ್ರತಿಯನ್ನೂ ನಿಮಗೆ ಕಳುಹಿಸಿಕೊಟ್ಟೆ, ಆದರೂ ಏನು action ತೆಗೆದುಕೊಳ್ಳಲಿಲ್ಲ. ಅಲ್ಲಿ ಯಾರೋ ಒಬ್ಬ ಪೊಲೀಸ್ ಅಧಿಕಾರಿ constable ಕಿವಿ ಹರಿಯುತ್ತಾರೆ. ಅವರಿಗೆ ರಕ್ಷಣೆ ಕೊಡುತ್ತೀರಿ. ಅವರೇ ಕರೆದುಕೊಂಡು ಹೋಗಿ ನಿಮ್ಮ SP ರಕ್ಷಣೆ ಕೊಡುತ್ತಾರೆ. ಮರಳು ದಂಧೆ ಕೆಲಸಕ್ಕೆ ಹೋಗಿ ದುಡ್ಡು ಮಾಡುವುದನ್ನು ನಿಲ್ಲಿಸಿ ಜನರಿಗೆ ರಕ್ಷಣೆ

ಕೊಡುವುದಕ್ಕೆ ಹೇಳಿ. ನಿಮ್ಮ ರಾಮನಗರದ SP ಬಗ್ಗೆ ಬೀದಿ ಬೀದಿಯಲ್ಲಿ ಚರ್ಚೆ ಮಾಡುತ್ತಾರೆ. ಇನ್ನು ಯಂಗ್ ಸ್ಟಾರ್ ಇದ್ದಾರೆ. ಇನ್ನು ಉತ್ತಮವಾದ ಪೊಸಿಷನ್‌ಗೆ ಹೋಗತಕ್ಕಂತಹ ಅವಕಾಶಗಳಿವೆ. ಇಂತಹ ಕೆಟ್ಟ ಹೆಸರು ತೆಗೆದುಕೊಳ್ಳಬೇಡಿ ಎಂದು ಹಲವಾರು ಬಾರಿ ಹೇಳಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್:- ನೀವು ಹೇಳಿದ್ದರ ಬಗ್ಗೆ ನಾನು ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ಹೇಳಿದ ಮೇಲೆ ಮಟ್ಕಾ ಮತ್ತು ಲಾಟರಿ ವಿಚಾರದಲ್ಲಿ ಸಹಿತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಎಲ್ಲಾ ಕಡೆ ಮಾಡುತ್ತಿದ್ದೇವೆ. ಇನ್ನು ಕೆಲವು ಕಡೆ ನಡೆಯುತ್ತಿದೆ ಎಂದು ಗೊತ್ತಾಗಿದೆ. ಈಗ ಮತ್ತೆ ಅವರಿಗೆ ಕಠಿಣವಾದ ಸಂದೇಶವನ್ನು ಕೊಡುತ್ತಿದ್ದೇವೆ. ಯಾರು ಈ ಮಟ್ಕಾ ಮತ್ತು ಲಾಟರಿ ಯಾವುದೇ ಅವ್ಯವಹಾರ ಇರಬಹುದು, ಯಾವುದೇ ಕಾನೂನು ಬಾಹಿರ ವಿಚಾರ ಇರಬಹುದು, ಯಾವುದೇ ಅಧಿಕಾರಿಗಳು ಇದರಲ್ಲಿ ಶಾಮೀಲಾದರೆ ನಾವು ಅದನ್ನು ಒಪ್ಪುವುದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಮಂತ್ರಿಗಳೆ, ಇದು ಆಗಲಿಕ್ಕೆ ಲೂಸ್ ಲಿಕ್ಕರ್ ರ್‍ಯಾಂಪೆಂಟ್ ಆಗಿ ಸೇಲ್ ಆಗುತ್ತಿದೆ. ಅನೇಕ ಜನ ಸದಸ್ಯರು ಅನೇಕ ಸಲ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಹಳ್ಳಿಗಳಲ್ಲಿ ಲೂಸ್ ಲಿಕ್ಕರ್ ಸೇಲ್ ಆಗುತ್ತಿರುವುದರಿಂದ ಬಹಳ ಗಲಾಟೆಗಳಾಗುತ್ತಿವೆ.

ಶ್ರೀ ಕೆ.ಜೆ. ಜಾರ್ಜ್:- ನೀವು ಹೇಳುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಕೆಲವೊಂದು ವಿಚಾರಗಳು ನನ್ನ ಗಮನಕ್ಕೂ ಬಂದಿವೆ. ಲಿಕ್ಕರ್ ಶಾಪ್ ಕೊಡುವುದನ್ನು ನಾವು ನಿಲ್ಲಿಸಿದ್ದೇವೆ. ಎಷ್ಟೋ ವರ್ಷಗಳ ಮೊದಲು ಕೊಟ್ಟಿರುವುದು. ಹಳ್ಳಿಗಳಲ್ಲಿ ಲಿಕ್ಕರ್ ಸಿಗದೆ ಇರುವುದರಿಂದ ಅವರು ಲಿಕ್ಕರ್ ಶಾಪ್‌ಗಳಿಂದ ತೆಗೆದುಕೊಂಡು ಹೋಗಿ ಯಾವುದೋ ಮನೆಗಳಲ್ಲಿ ಇಟ್ಟು ಮಾರಾಟ ಮಾಡುತ್ತಿರುವ ಬಗ್ಗೆ ವರದಿಗಳು ಬಂದಿವೆ. ಬಹುಶಃ ನಮ್ಮ Excise Minister ಅವರ ಇಲಾಖೆ ಬಗ್ಗೆ ಉತ್ತರ ಕೊಡುವಾಗ ಹೇಳುತ್ತಾರೆ. transfer ವಿಚಾರದಲ್ಲಿ ನಾನು ತಮಗೆ ಸಂಪೂರ್ಣವಾದ ಭರವಸೆ

ಕೊಡುತ್ತಿದ್ದೇನೆ. ನಾನು ಮೊದಲೂ ಹೇಳಿದೆ, ಇವತ್ತೂ ಹೇಳುತ್ತಿದ್ದೇನೆ. ನಾನಾಗಲಿ ಮಾನ್ಯ ಮುಖ್ಯ ಮಂತ್ರಿಗಳಾಗಲಿ, ಎಲ್ಲಾ ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದೇವೆ. ನಮಗೆ ಯಾರಿಗೂ ಒಂದು ರೂಪಾಯಿ ಕೊಡಬೇಡಿ. ನೀವು ಹಫ್ತಾ ವಸೂಲಿ ಮಾಡಬೇಡಿ ಎಂದು ಹೇಳಿದ್ದೇವೆ. ಯಾರಾದರೂ ಆ ತರಹ ಕೊಡಬೇಕೆಂದು ಹೇಳಿದರೆ, ದಯವಿಟ್ಟು ನಾನು ಕೈ ಮುಗಿದು ಹೇಳುತ್ತಿದ್ದೇನೆ. ಯಾರಾದರೂ ಅಧಿಕಾರಿಗಳು ಸಾರ್ವಜನಿಕರಿಂದ ದುಡ್ಡು ತೆಗೆದುಕೊಳ್ಳುತ್ತಿದ್ದರೆ ನಮಗೆ ಕಂಪ್ಲೇಂಟ್ ಕೊಡಿ. ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಮೇಲೆ ಕೈ ತೋರಿಸಿ ಅವರು ಕೆಳಗಡೆ ದುಡ್ಡು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎಂಬ ಮಾತನ್ನು ಈ ಸದನದಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಂ. ಸತೀಶ್ ರೆಡ್ಡಿ:– ಬೆಂಗಳೂರಿನಲ್ಲಿ ಬಾರ್‌ಗಳ ಓವರ್ ಟೈಮ್ ಆಗಿದೆ ಅದರ ಬಗ್ಗೆ ತಾವು ಉತ್ತರ ಕೊಡಲಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಸತೀಶ್ ರೆಡ್ಡಿಯವರಿಗೆ ಈಗಲೇ ಉತ್ತರ ಬೇಕೆಂದರೆ ಈಗಲೇ ಉತ್ತರ ಬೇಕೆಂದರೆ ಈಗಲೇ ಉತ್ತರ ಕೊಡುತ್ತೇನೆ. ನಾನು ಮೊನ್ನೆ ಹೇಳಿದೆ. ನಿಮ್ಮ BJPಯವರ manifesto ದಲ್ಲಿ ಬಹುಶಃ ನೀವು ಮ್ಯಾನಿಫೆಸ್ಟೋ ಓದಿರಲಿಕ್ಕಿಲ್ಲ. ಅದರಲ್ಲಿ ಏನಾಗಿದೆ ಎಂದರೆ, ಅದರಲ್ಲಿ ಎಲ್ಲಾ ದಿವಸ . . .

ಶ್ರೀ ಎಂ. ಸತೀಶ್ ರೆಡ್ಡಿ:– ನಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿರುವುದು ಬಾರ್ ಓಪನ್ ಮಾಡಿ ಎಂದು ಅಲ್ಲ, ಊಟ ಕೊಡಿ ಎಂದು. ಬಾರ್ ಓಪನ್ ಮಾಡಿ ಎಂದು ನೀವೇಕೆ ತಪ್ಪು ತಿಳಿದುಕೊಳ್ಳುತ್ತೀರಿ? ನಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿರುವುದು ರಾತ್ರಿ ಒಂದು ಗಂಟೆಯವರೆಗೆ ಬಾರ್ ಓಪನ್ ಮಾಡಿ ಎಂದು ಅಲ್ಲ. ಹೊರಗಡೆಯಿಂದ ಬರುವವರಿಗೆ ಊಟ ಕೊಡಿ ಎಂದು.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಸತೀಶ್ ರೆಡ್ಡಿಯವರೆ ನಾನು ನಿಮ್ಮ ಮ್ಯಾನಿಫೆಸ್ಟೋ ಚೆನ್ನಾಗಿ ಓದಿದ್ದೇನೆ. ನಿಮ್ಮ ಮ್ಯಾನಿಫೆಸ್ಟೋ ನಾನು ಮೊದಲು

ಓದುತ್ತೇನೆ. ನಂತರ ನಮ್ಮ ಮ್ಯಾನಿಫೆಸ್ಟೋ ಓದುವುದು. ನಿಮ್ಮ ಮ್ಯಾನಿಫೆಸ್ಟೋದಲ್ಲಿ ಕೆಲವೊಂದು ಉತ್ತಮವಾದ ಅಂಶಗಳು ಇರುತ್ತವೆ. ಅದನ್ನು ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ:– ನಾವು ಅದರಲ್ಲಿ ಬಾರ್‌ಗಳ ಬಗ್ಗೆ ಹೇಳಲಿಲ್ಲ. ಕಾಂಗ್ರೆಸ್ ಮ್ಯಾನಿಫೆಸ್ಟೋ ಇದೆ, ಆ ದೃಷ್ಟಿಯಿಂದ ಕಾಂಗ್ರೆಸ್‌ನದ್ದು ಬಿಟ್ಟು BJPದು ಕಳುಹಿಸಿ ಕೊಡುತ್ತೇವೆ ಮಾನ್ಯ ಮುಖ್ಯ ಮಂತ್ರಿಗಳು ತಾವು ರೆಕಮಂಡ್ ಮಾಡಿ ಬಿಡಿ.

ಶ್ರೀ ಕೆ.ಜಿ. ಜಾರ್ಜ್:– ಮಾನ್ಯ ಲಿಂಬಾವಳಿಯವರೇ ಇಲ್ಲಿ ಕೇಳಿ. BJP ಬೆಂಗಳೂರು ಮಹಾನಗರ ಅಭಿವೃದ್ಧಿಯ ಪಥ ವಿಕಾಸವೇ ಗುರಿ, BJPಯ ದಾರಿ. ಇದರಲ್ಲಿ ಏನು ಹೇಳಿದ್ದಾರೆಂದರೆ, ನೀವೆಲ್ಲಾ ಇದನ್ನು ಓದುವುದಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಹೋಟೆಲ್‌ಗಳು ಇದೀಗ ನಗರದಲ್ಲಿ ರಾತ್ರಿ 11.30ರ ತನಕ ತೆರೆದಿರಬಹುದಾಗಿದೆ, ಇದನ್ನು ರಾತ್ರಿ ಒಂದು ಗಂಟೆವರೆಗೆ ವಿಸ್ತರಿಸಲು, ಆದರೆ ಬಾರ್‌ಗಳು ರಾತ್ರಿ 12.00 ಗಂಟೆವರೆಗೆ ಮಿತಿ ವಿಧಿಸಲಾಗುವುದು ಎಂದು ಹೇಳಿದ್ದೀರಿ. ಇದೇನು ಬಾರ್ ಅಲ್ಲವಾ? ಇದರಲ್ಲಿ ಬಾರ್ ಎಂದು ಹೇಳಿದ್ದಾರೆ. ಇದು ನಿಮ್ಮ ಚುನಾವಣಾ ಪ್ರಣಾಳಿಕೆ ಅಲ್ಲವಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಯಾವುದನ್ನೂ ಅನುಷ್ಠಾನ ಮಾಡುವಾಗ ಅದರ consequence ಏನಾಗುತ್ತದೆ ಎಂದು ವಿಚಾರ ಮಾಡಬೇಕಾಗುತ್ತದೆ. ನಿಮ್ಮ ಪೊಲೀಸ್ ಕಮಿಷನರ್ ಅದಕ್ಕೆ ವಿರೋಧ ಮಾಡಿದರು. ನಿಮ್ಮ ಪೊಲೀಸ್ ಕಮಿಷನರ್ ವಿರೋಧ ಮಾಡಿ ಸಿಬ್ಬಂದಿ ಕೊರತೆ ಇದೆ ಅಷ್ಟು ನಾವು strengthen ಮಾಡುವುದಕ್ಕಾಗುವುದಿಲ್ಲ, ಒಂದು ಗಂಟೆಯವರೆಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೂ ನೀವು ಒಂದು ಗಂಟೆಯವರೆಗೆ ಮಾಡಿದಿರಿ. ನೀವು ಗೃಹ ಇಲಾಖೆಯನ್ನು ನಿಭಾಯಿಸುವವರು

ನೀವು ಅವರ consequence ಏನಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಅದು ಬಿಟ್ಟು ನೀವು blind ಆಗಿ ಮಾಡುತ್ತೀರೆಂದರೆ ಹೇಗೆ? ನಿಮ್ಮಲ್ಲಿ ಎಷ್ಟು strength ಇದೆ, police ಸಿಬ್ಬಂದಿ ಎಷ್ಟು ಇದೆ ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಬೇರೆ ಎಲ್ಲಾ ವಿಚಾರಗಳಲ್ಲಿ ಇವರು ಜಗಳ ಆಡಿಕೊಳ್ಳಲಿ. ಬಾರ್ ಎಷ್ಟು ಗಂಟೆಯವರೆಗೆ ತೆಗೆದಿಡಬೇಕು, ಊಟ ಎಷ್ಟು ಗಂಟೆಯವರೆಗೆ ಇರಬೇಕು ಇವೆಲ್ಲಾ ಒಪ್ಪಂದದಲ್ಲಿ ಮಾಡಿಕೊಳ್ಳೋಣ. ಏಕೆ ಜಗಳ ಮಾಡುತ್ತೀರಿ, ಸೆಟ್ಲ್ ಮಾಡಿಕೊಳ್ಳೋಣ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಚರ್ಚೆ ಎಲ್ಲೋ ಹೋಗಿ ಕೊನೆಗೆ ಬಾರ್‌ಗೆ ಬಂದು ನಿಂತಿದೆ. ಅತ್ಯಾಚಾರ ಪ್ರಕರಣದ ಬಗ್ಗೆ ಬೆಂಗಳೂರು ಜನ ಭಯಬೀತರಾಗಿದ್ದಾರೆ. ಕರ್ನಾಟಕದ ಜನ ಭಯಭೀತರಾಗಿದ್ದಾರೆ ಎನ್ನುವುದಷ್ಟೇ ಪ್ರಶ್ನೆ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೇ ತಾವು ಏನು ಹೇಳಿದಿರಿ, ಆ ಮನೆಗೆ ಭೇಟಿ ನೀಡಿ ಎಂದು ಹೇಳಿದಿರಿ. ಇದುವರೆಗೆ ಮಾನ್ಯ ಗೃಹ ಸಚಿವರು ಆ ಮನೆಗೆ ಭೇಟಿ ನೀಡಿದರಾ? ಮಾನ್ಯ ಗೃಹ ಸಚಿವರೆ ಇಷ್ಟು ಹೊತ್ತು ಅರ್ಧ ಗಂಟೆ ಮಾತನಾಡಿದಿರಿ ನಾನು ಕೇಳಿದ್ದೇನೆ. ನನ್ನ ಅಭಿಪ್ರಾಯದ ಪ್ರಕಾರ ಸರ್ಕಾರ ಆಗಲಿ, ಗೃಹ ಇಲಾಖೆ ಆಗಲಿ, ನಿಮಗೆ ಈ ವಿಚಾರದ ಬಗ್ಗೆ ಸೀರಿಯಸ್‌ನೆಸ್ ಬಂದಿಲ್ಲ. ಏಕೆಂದರೆ, ಮೊನ್ನೆ ಮಾನ್ಯ ಗೌರವಾನ್ವಿತ ಸಭಾಧ್ಯಕ್ಷರು ಹೇಳಿದರು, ನೀವು ದಯವಿಟ್ಟು ಆ ಘಟನೆ ಆದಂತಹವರ ಮನೆಗೆ ಹೋಗಿ ಭೇಟಿ ನೀಡಿ ಅವರಿಗೆ ಸಾಂತ್ವನ ಹೇಳಿ ಎಂದು ಹೇಳಿದರು. ನೀವು ಮಾಡಲಿಲ್ಲ. ನಾನು ಎಲ್ಲರಿಗೂ ಹೋಗಿ ಎಂದು ಹೇಳುವುದಿಲ್ಲ. 60 ರೇಪ್ ಆಗಿದ್ದರೆ 60 ಜನರ ಮನೆಗೂ ಹೋಗಿ ಎಂದು ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ:– ಶ್ರೀಮತಿ ಉಮಾಶ್ರೀಯವರು ಹೋಗಿದ್ದರು.

ಶ್ರೀ ಆರ್. ಅಶೋಕ್:– ನಾನು ಹೇಳುತ್ತಿರುವುದು ಗೃಹ ಸಚಿವರು ಹೋಗಬೇಕಿತ್ತೆಂದು ಉಮಾಶ್ರೀಯವರಲ್ಲ. ಅಧ್ಯಕ್ಷರೇ ಹೇಳಿದ್ದರು.

ಶ್ರೀ ಸಿದ್ದರಾಮಯ್ಯ:– ಅವರು ಹೋದಂತಹ ಸಂದರ್ಭದಲ್ಲಿ ಅವರು ಮಾತನಾಡುವುದಕ್ಕೆ ಬಿಡಲಿಲ್ಲ.

ಶ್ರೀ ಆರ್. ಅಶೋಕ್:– ನನಗೂ ಅರ್ಥವಾಗುತ್ತದೆ. 60 ಕೇಸ್ ಆಗಿರುವುದು ಎಲ್ಲವೂ 100% ಅವರೆಲ್ಲಾ ಅಪರಾಧಿಗಳು ಎನ್ನುವುದನ್ನು ನಾನೂ ಒಪ್ಪುವುದಿಲ್ಲ. ಕೆಲವರು living together ಇರುತ್ತಾರೆ. ಒಂದು ವರ್ಷ ಆದ ಮೇಲೆ ಏನೋ ಒಂದು ಕಂಪ್ಲೇಂಟ್ ಕೊಡುತ್ತಾರೆ. ಆ ತರಹದ ಘಟನೆ ಅಲ್ಲ ಇದು. ಇದು different. ಶಾಲಾ ಮಕ್ಕಳ ಮೇಲೆ ಆಗಿರುವಂಥದ್ದು. ಶಾಲೆಗೆ ಹೋಗುತ್ತಿದ್ದ ಬಾಲಕಿ ಮೇಲೆ ಆಗಿರುವಂಥದ್ದು. ಇದಕ್ಕೂ ಅದಕ್ಕೂ ಹೋಲಿಕೆ ಬೇಡ. ಇದನ್ನು ನೀವು generalize ಮಾಡದೆ, particular ಶಾಲಾ ಮಕ್ಕಳಿಗೆ ಸಂಬಂಧಪಟ್ಟಂತೆ ಆಗಿರುವಂತಹ ಘಟನೆ. ಒಬ್ಬರು ಕಾಲೇಜಿಗೆ ಹೋಗುವವರು ಇನ್ನೊಬ್ಬರು ಶಾಲೆಗೆ ಹೋಗುವವರು. Particular ಆಗಿ ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದರ ಬಗ್ಗೆ ಹೇಳಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಬಾರ್ ವಿಚಾರ ನಾನು ಹೇಳಲಿಲ್ಲ. ನಮ್ಮ ಮಾನ್ಯ ಸತೀಶ್ ರೆಡ್ಡಿಯವರು ಆ ವಿಚಾರ ಕೇಳಿದ್ದರಿಂದ ನಾನು ಉತ್ತರ ಕೊಟ್ಟೆ. ನಾನಾಗಿ ಹೇಳಲಿಲ್ಲ ದಯಮಾಡಿ ಕ್ಷಮಿಸಿ. ನಾನು ಅತ್ಯಾಚಾರ ಹಾಗೂ ದೌರ್ಜನ್ಯದ ವಿಚಾರವಾಗಿ ಮಾತನಾಡುತ್ತಿದ್ದೇನೆ. ತಾವು ಒಂದು ಹೇಳಿದಿರಿ ಅಧ್ಯಕ್ಷರು ಅವರ ಮನೆಗೆ ಭೇಟಿ ಕೊಡಿ ಎಂದು ಹೇಳಿದ್ದರು. ನಾನು ಅವರ ಮನೆಗೆ ಹೋಗುವುದಕ್ಕೆ 9.30 ಗಂಟೆಗೆ ಟೈಮ್ ಫಿಕ್ಸ್ ಮಾಡಿ ನಾನು ಬರುತ್ತಿದ್ದೇನೆಂದು ಹೇಳಿದೆ. ಅವರು ದಯವಿಟ್ಟು ನಮ್ಮ ಮನೆಗೆ ಬರಬೇಡಿ, ನಾವು ಬೇಕಾದರೆ ನಿಮ್ಮ ಮನೆಗೆ ಬರುತ್ತೇವೆಂದು ಹೇಳಿದರು. ಅವರು ಅವರ ತಾಯಿ ಎಲ್ಲ ಬಂದು ಮಾತನಾಡಿಕೊಂಡು

ಹೋಗಿದ್ದಾರೆ. ಸುಪ್ರೀಂ ಕೋರ್ಟ್‌ನಿಂದ ಒಂದು ಡೈರೆಕ್ಷನ್ ಇದೆ. ಯಾವುದೇ ರೇಪ್ ವಿಕ್ಟಿಮ್ ಮನೆಗೆ ಹೋಗಿ ಪ್ರಚಾರ ಕೊಟ್ಟು ಮನೆ identify ಮಾಡಬಾರದು. ಅದೇ ರೀತಿಯಲ್ಲಿ ಯಾರು rape victim ಇದ್ದಾರೆ ಅವರನ್ನೂ ಸಹಿತ identify ಮಾಡಬಾರದು ಎಂದು ಇದೆ. ಆದರೆ ದುರಾದೃಷ್ಟವಶಾತ್ ಏನಾಗಿದೆ ಮೊನ್ನೆ ತಾವು ನೋಡಿರಬಹುದು, ಕೆಲವು ಮಾಧ್ಯಮದವರು ಅವರ ಫೋಟೋ ಹಾಕಿ ಪ್ರಚಾರ ಮಾಡಿದ್ದಾರೆ. ಇದು ಕಾನೂನು ಬಾಹಿರವಾದ ವಿಚಾರ. ನಾನು ಮಾಧ್ಯಮದವರಿಗೂ ಸಹಿತ ಕೇಳಿಕೊಳ್ಳುತ್ತೇನೆ. ಇಂತಹ ವಿಚಾರದಲ್ಲಿ ದಯವಿಟ್ಟು ಅವರ ಗೋಪ್ಯತೆಯನ್ನು ಕಾಪಾಡುವಂತಹ ಕೆಲಸವನ್ನು ತಾವು ಮಾಡಬೇಕೆಂದು ಮಾಧ್ಯಮದವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಯಾವುದೇ ಸಮಾಜಘಾತಕ ಶಕ್ತಿಗಳಿಗೆ ರಕ್ಷಣೆ ಕೊಡಲಿಕ್ಕೆ ಈ ಸರ್ಕಾರ ನಾನು ಗೃಹ ಮಂತ್ರಿಯಾಗಿ ಆಗಲಿ, ಮಾನ್ಯ ಮುಖ್ಯ ಮಂತ್ರಿಗಳಾಗಲಿ ಇಲ್ಲಿಯತನಕ ಒಂದೇ ಒಂದು ರೀತಿ ಹಸ್ತಕ್ಷೇಪ ಮಾಡಲಿಲ್ಲ. ಮಾನ್ಯ ಕುಮಾರಸ್ವಾಮಿಯವರು ನಿಮ್ಮ ಕಾಲದಲ್ಲಿ ಮಾಡಲಿಲ್ಲವೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಹುಶಃ ಮಾಡಿರಲಿಕ್ಕಿಲ್ಲ. ನಮ್ಮ ಕಾಲದಲ್ಲಿ ಸಹ ಯಾವುದೇ ವಿಚಾರದಲ್ಲಿ ಯಾವುದೇ ಅಧಿಕಾರಿಗಳಿಗೆ ಈ ರೀತಿ ಕೆಲಸ ಮಾಡಿ ಆ ರೀತಿ ಕೆಲಸ ಮಾಡಿ ಎಂದು ಹೇಳಲಿಲ್ಲ. ಆ ರೀತಿ ಏನಾದರೂ ಹೇಳಿದ್ದರೆ, ಈಗ ಇನ್ನಷ್ಟು ಚುರುಕುಗೊಳಿಸಬಹುದಾಗಿತ್ತು. ಆದರೆ ನಾವು ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಮಹಿಳೆಯರ ರಾಕೆಟ್ ವಿಚಾರ ಹೇಳಿದರು ಅದನ್ನು ನಾವು ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು ಮಹಿಳೆಯರು ನಾಪತ್ತೆಯಾಗುತ್ತಿದ್ದಾರೆ. ಆ ವಿಚಾರದಲ್ಲಿ ಸಹಿತ ನಾವು ಯಶಸ್ವಿಯಾಗಿ ಮಾಡುತ್ತಿದ್ದೇವೆ. station house officersಗೆ ಅದರ ಜವಾಬ್ದಾರಿ ಕೊಡಿಸುವ ಕೆಲಸ ಮಾಡುತ್ತೇವೆ. ಎಲ್ಲಾ ಸ್ಟೇಷನ್‌ಗಳು ರಿಯಲ್ ಎಸ್ಟೇಟ್‌ಗಳಾಗಿದೆಯೆಂದರು. ಬಹುಶಃ ನಾವು ಬಂದ ಕೂಡಲೇ ಅದಕ್ಕಾಗಿಯೇ ಅವರಿಗೆ ಹೇಳಿದ್ದೇವೆ, ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಯಾವುದೇ ಪ್ರೊಟೆಕ್ಷನ್ ಕೊಡುವುದನ್ನು ಶುರು ಮಾಡಬಾರದೆಂದು ಹೇಳಿದ್ದೇವೆ. ಆದರೆ

ಕೆಲವೊಂದು ವಿಚಾರದಲ್ಲಿ ತಮಗೆ ಗೊತ್ತಿದೆ, ರಿಯಲ್ ಎಸ್ಟೇಟ್ ಎಲ್ಲಿ ಬರುತ್ತದೆ, ಕೆಲವೊಂದಕ್ಕೆ ಕೋರ್ಟ್‌ನಿಂದ ಆರ್ಡರ್ ಬರುತ್ತದೆ, ಅದರಲ್ಲಿ ಅವರಿಗೆ ಪ್ರೊಟೆಕ್ಷನ್ ಕೊಡಿ ಎಂದು ಹೇಳುತ್ತಾರೆ. ಇನ್ನೊಂದು ಯಾರೋ ಒಬ್ಬರು ಕೂತಿರುತ್ತಾರೆ, ಅವರ ಆಸ್ತಿಯ ಮೇಲೆ ಕೂತಿರುತ್ತಾರೆ, ಯಾರಾದರೂ ಹೋಗಿ forcibly vacate ಮಾಡುವುದಕ್ಕೆ, ಬಹುಶಃ ಪುಲಿಕೇಶಿ ನಗರದಲ್ಲಿ ಒಂದು incident ಆಯಿತು, ನಮ್ಮ ಅಖಂಡ ಶ್ರೀನಿವಾಸಮೂರ್ತಿಯವರ constituency ಯಲ್ಲಿ 8 ಗಂಟೆಯಲ್ಲಿ ಆ ಮನೆಯನ್ನೇ ನಿರ್ನಾಮ ಮಾಡಿಬಿಟ್ಟರು, ಆ ಮನೆಯೇ ಅಲ್ಲಿ ಇರಲಿಲ್ಲ. ಆ ರೀತಿಯಲ್ಲಿ ಒಂದು ಘಟನೆಯಾಗಿದೆ. ಅಂಥ ವಿಚಾರದಲ್ಲಿ ಪೊಲೀಸರು ಮಧ್ಯ ಪ್ರವೇಶ ಮಾಡಬೇಕಾಗುತ್ತದೆ. ಆದರೆ ಬೇರೆ ವ್ಯವಹಾರಗಳಲ್ಲಿ, ಲ್ಯಾಂಡ್ ವಿಚಾರಗಳಲ್ಲಿ ಅವರು ಈ ರೀತಿ ಮಾಡುವುದಕ್ಕಾಗುವುದಿಲ್ಲ. ಇನ್ನು ಯಾವುದೇ ಆಫೀಸರ್ ಮೇಲೆ ಕಂಪ್ಲೆಂಟ್ ಬಂದರೂ ಸಹಿತ ನಮ್ಮ ಇಲಾಖೆಯಿಂದ ತನಿಖೆಯನ್ನು ಮಾಡಲಾಗಿದೆ. ಈಗಾಗಲೇ ಸಾಕಷ್ಟು ಆಫೀಸರ್‌ಗಳನ್ನು ಅಮಾನತ್ತು ಮಾಡುವಂಥ ಕೆಲಸವನ್ನು ಮಾಡಿದ್ದೇವೆ. ಅಮಾನತ್ತು ಮಾಡಿರುವ ಪ್ರಕರಣಗಳಲ್ಲಿ ಒಂದೇ ಒಂದು ಕೇಸ್‌ನಲ್ಲಿಯೂ ಕೂಡ ಅಮಾನತ್ತು ವಾಪಸ್ಸು ತೆಗೆದುಕೊಳ್ಳಲು ಮತ್ತು reinstate ಮಾಡಲು ಸರ್ಕಾರದಿಂದ ಮತ್ತು ಗೃಹ ಮಂತ್ರಿಯಾದ ನಾನು ಕೂಡ ಒಂದು ದಿವಸವೂ ಕೂಡ ಹೇಳಲಿಲ್ಲ. ಇವತ್ತು ಸಾಕಷ್ಟು ವಿಚಾರದಲ್ಲಿ ಸಲಹೆಗಳು ಬಂದಿದೆ. ನಮಗೆ ನೈತಿಕ ಹಕ್ಕು, ಪ್ರತಿಯೊಬ್ಬರಿಗೂ ರಕ್ಷಣೆ ಕೊಡುವಂಥ ವಿಚಾರದಲ್ಲಿ ನಮ್ಮ ಪೊಲೀಸರು ಇದನ್ನು ಆದ್ಯತೆಯ ಮೇಲೆ ಮಾಡಲೇಬೇಕಾಗುತ್ತದೆ. ಯಾರು ಈ ವಿಚಾರದಲ್ಲಿ ತಪ್ಪು ಮಾಡುತ್ತಾರೆ ಅವರಿಗೆ ಶಿಕ್ಷ ಕೊಡುವಂಥ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ನಾನು ಇನ್ನೂ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ವಾತಾವರಣ ಚೆನ್ನಾಗಿದೆ. ನಾನು ಬೇರೆ ಸ್ಟೇಟ್‌ಗಳಲ್ಲಿ ಏನಾಗಿದೆ, ನಮ್ಮ ಸ್ಟೇಟ್‌ನಲ್ಲಿ ಏನಾಗಿದೆ, ಕೇವಲ ನಮ್ಮ ಸ್ಟೇಟ್‌ನಲ್ಲಿಯೇ ನಡೆಯುತ್ತಿದೆಯೆ, ಬೇರೆ ಸ್ಟೇಟ್‌ಗಳಲ್ಲಿ ಇಲ್ಲವೆ? ಇವೆಲ್ಲಾ ಅಂಕಿ ಅಂಶಗಳು ನನ್ನ ಹತ್ತಿರವಿದೆ. ಬಹುಶಃ ಈಗ ನಾನು ಅದನ್ನೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರು

ನನಗೆ ಇವತ್ತು ಹೇಳಿದರು, ಸ್ವಲ್ಪ ಶಾಂತ ರೀತಿಯಿಂದ ಇರಬೇಕೆಂದು ಹೇಳಿದರು. ನಾನು ನಿಜವಾಗಿಯೂ ನಗುತ್ತಿದ್ದೇನೆಂದರೆ ಕೇವಲ ನಗಬೇಕು ಎನ್ನುವ ದೃಷ್ಟಿಯಿಂದಲ್ಲ. ನನ್ನ ಹೃದಯದಾಳದಿಂದ ಬಂದಿರುವುದನ್ನು ಈ ಮೂಲಕ ತೋರಿಸುತ್ತಿದ್ದೇನೆಯೇ ಹೊರತು ಹಲವಾರು ವಿಚಾರಗಳಲ್ಲಿ ಕೂಡ ನನಗೆ ಅಳಬೇಕೋ ನಗಬೇಕೋ ಎನ್ನುವಂಥ ಸನ್ನಿವೇಶದಲ್ಲಿ ಅಳುವ ಬದಲು ನಗುತ್ತಿದ್ದೇನೆಯೇ ಹೊರತು, ಆದರೆ ನೀವು ಯಾರೂ ತಪ್ಪು ತಿಳಿದುಕೊಳ್ಳಬೇಡಿ, ನಾನು ಪ್ರಾಮಾಣಿಕವಾಗಿ ಈ ಒಂದು ಇಲಾಖೆಯಲ್ಲಿ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿಮ್ಮ ಸಹಕಾರವಿಲ್ಲದಿದ್ದರೆ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನನಗೆ ತುಂಬಾ ಸಂತಸವಾಗಿದೆ. ಇಲ್ಲಿ ಮಾತನಾಡಿದವರ್‍ಯಾರೂ ಕೂಡ ರಾಜಕೀಯವಾಗಿ ಮಾತನಾಡಲಿಲ್ಲ. ನಾವು ಮತ್ತು ನೀವು ಒಂದೇ ದೃಷ್ಟಿಕೋನದಿಂದ ಮಾತನಾಡಿದ್ದೇವೆ. ಇದುವರೆಗೆ ಈ ವಿಚಾರದಲ್ಲಿ ತಾವುಗಳೆಲ್ಲರೂ ಕೊಟ್ಟಿರುವ ಸಲಹೆಗಳನ್ನು ಗಂಭೀರವಾಗಿ ತೆಗೆದುಕೊಂಡು ಇನ್ನು ಮುಂದೆ ಬರುವ ದಿವಸಗಳಲ್ಲಿ ನಾವು ಮತ್ತು ನೀವು ಜೊತೆ ಸೇರಿಕೊಂಡು ಈ ಜನರಿಗೆ, ಅದರಲ್ಲಿಯೂ ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ಮಾಡೋಣವೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಚಿವರೆ, Fast track court ಗಳನ್ನು ನೀವು ಆದಷ್ಟು ಬೇಗನೆ ಮಾಡಬೇಕು. Trial cases ಏನಿವೆ ಅಂದರೆ, ಮಹಿಳೆಯರ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯ ಪ್ರಕರಣಗಳ ಮೇಲಿನ ಕೇಸ್‌ಗಳು ಆದಷ್ಟು ಬೇಗನೆ disposal ಆಗುವಂಥದ್ದಾಗಬೇಕು. ಇಂಥ ಪ್ರಕರಣಗಳಲ್ಲಿ ಬೇಗ ತೀರ್ಮಾನಗಳನ್ನು ಮಾಡಿ ಆರೋಪಿಗಳಿಗೆ ಶಿಕ್ಷೆಯಾಗಬೇಕು. Conviction rate ಜಾಸ್ತಿಯಾದರೆ ಮಾತ್ರ ಇಂಥ ಆರೋಪಿಗಳಿಗೆ ಹೆದರಿಕೆ ಬರಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ

ಹೆದರಿಕೆ ಬರಲು ಸಾಧ್ಯವೇ ಇಲ್ಲ. ಆದುದರಿಂದ ಅಂಥದ್ದನ್ನು ನೀವು ಮಾಡಬೇಕು.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಮಾನ್ಯ ಜಗದೀಶ್ ಶೆಟ್ಟರ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಹೈಕೋರ್ಟ್‌ನವರ ಜೊತೆ ಮಾತನಾಡಿ ಆದಷ್ಟು ಬೇಗನೆ ಈ ಪ್ರಕರಣಗಳ ಇತ್ಯರ್ಥ ಮಾಡುವಂಥ ನಿಟ್ಟಿನಲ್ಲಿ ಕೆಲಸವನ್ನು ಮಾಡುತ್ತೇನೆ.

ಶ್ರೀ ಆರ್. ಅಶೋಕ್:– ಮಾನ್ಯ ಸಚಿವರೆ, Goonda Act ಅನ್ನು ಹಾಕುವಂಥದ್ದನ್ನು ತನ್ನಿ. ಇದರಲ್ಲಿ ಸ್ವಲ್ಪ ಲೋಪದೋಷಗಳಿವೆ. ಇದನ್ನು amend ಮಾಡಿ ಈ Goonda Act ಅನ್ನು ಜಾರಿಗೆ ತರುವಂಥ ಪ್ರಯತ್ನ ಮಾಡಿ.

ಅಧ್ಯಕ್ಷರು:– ಮಾಡುತ್ತಾರೆ ಬಿಡಿ.

ಶ್ರೀ ಆರ್. ಅಶೋಕ್:– ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಮಾತ್ರ ಅದನ್ನು ಮಾಡುವುದು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಶೋಕ್‌ರವರೆ, ಈಗ ನೀವು Goonda Act ಮೇಲೆ ಕೇಸ್ ಹಾಕಬೇಕೆಂದು ಹೇಳಿದ್ದೀರಿ. ನಾನು ಕೂಡ ಈಗಾಗಲೇ ಹೇಳಿದ್ದೇನೆ, ಪೊಲೀಸ್‌ನವರಿಗೆ ಈಗಾಗಲೇ instructions ಕೊಟ್ಟಿದ್ದೇನೆ, ಎಲ್ಲೆಲ್ಲಿ Goonda Act ಮೇಲೆ ಕೇಸ್ ಹಾಕುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಹಾಕಬೇಕೆಂದು ಹೇಳಿದ್ದೇನೆ. ಯುನಿವರ್ಸಿಟಿಯ ಪ್ರಕರಣದಲ್ಲಿ ನಾನು ಆ ರೀತಿಯ ಕ್ರಮ ತೆಗೆದುಕೊಂಡಿದ್ದೆನೆಂದು ನೀವು ಹೇಳಿದಿರಿ. ಅದರಲ್ಲಿ ಶಿಕ್ಷೆ ಆಗಿದೆ. ಬಹಳ ಸಂತೋಷ. Goonda Act ಅನ್ನು first offender ಮೇಲೆ ಹಾಕುವುದಕ್ಕೆ ಬರುವುದಿಲ್ಲ. ಈಗ 6 ವರ್ಷದ ಹೆಣ್ಣು ಮಗುವಿನ ಪ್ರಕರಣದಲ್ಲಿ Goonda Act ಅನ್ನು ಹಾಕುವುದಕ್ಕೆ ಸಾಧ್ಯವಿದೆ. ಏಕೆಂದರೆ ಈಗ ಯಾರು accused ಇದ್ದಾನೋ ಅವನ ಮೇಲೆ ಹಿಂದೆಯೂ ಕೂಡ ಪ್ರಕರಣಗಳು ದಾಖಲಾಗಿವೆ. ಆದುದರಿಂದ ಖಂಡಿತವಾಗಿ ಆ

ಪ್ರಕರಣದಲ್ಲಿ Goonda Act ಹಾಕುತ್ತೇವೆ. ಇದಿಷ್ಟೇ ಅಲ್ಲ ನಾವು Goonda Act ಗೆ ತಿದ್ದುಪಡಿಯನ್ನು ತರುವುದಕ್ಕೂ ಕೂಡ ಆಲೋಚನೆಯನ್ನು ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ್:- ಛಾರ್ಜ್‌ಶೀಟ್ ಬೇಗ ಹಾಕಬೇಕು.

ಶ್ರೀ ಸಿದ್ದರಾಮಯ್ಯ:- ಈ ಬಗ್ಗೆ ಈಗಾಗಲೇ Strict instructions ಕೊಟ್ಟಿದ್ದೇವೆ. ಛಾರ್ಜ್‌ಶೀಟ್‌ನ್ನು ಎಷ್ಟು ಜಾಗ್ರತೆಯಾಗಿ ಹಾಕುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಜಾಗ್ರತೆ ಹಾಕಬೇಕು. ಮತ್ತೆ trial ಕೂಡ ಈಗ fast track court ಗಳಲ್ಲಿ ಜಾಸ್ತಿ ಮಾಡಿ ನಾನು Law Minister ಜೊತೆಯಲ್ಲಿ ಮಾತನಾಡಿದ್ದೇನೆ, ಅವರು Chief Justice ಜೊತೆ ಮಾತನಾಡಿ ಜಡ್ಜ್‌ಗಳನ್ನು ಕೊಡುವುದಕ್ಕೆ ಹೇಳಿ fast track court ಗಳನ್ನು ಹೆಚ್ಚು ಮಾಡಿ ಆದಷ್ಟು ಜಾಗ್ರತೆ trial ಮುಗಿಸಿ ಆರೋಪಿಗೆ ಶಿಕ್ಷೆಯಾಗುವಂಥ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡತಕ್ಕಂಥದ್ದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಏನೇನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಆ ಎಲ್ಲಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮಾಡಬೇಕು ಎನ್ನುವುದನ್ನು ಈಗಾಗಲೇ ನಮ್ಮ ಪೊಲೀಸ್ ಇಲಾಖೆಯವರ ಜೊತೆ ಕೂಡ ಮಾತನಾಡಿದ್ದೇನೆ, Law Department ಅಧಿಕಾರಿಗಳ ಜೊತೆ ಕೂಡ ನಾನು ಮಾತನಾಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮುಖ್ಯವಾಗಿ ಭಯದ ವಾತಾವರಣ ಬರದೇ ಹೋದರೆ, ಬೇರೆಯವರಿಗೆ ಭಯ ಬರದೇ ಹೋದರೆ, ಏಕೆಂದರೆ ಇದು mental attitude, ಈಗ ಹಾವೇರಿ ಜಿಲ್ಲೆಯ ಅಗಡಿಯಲ್ಲಿ ಯಾವನೋ ಒಬ್ಬ 55 ರಿಂದ 60 ವರ್ಷದ ಮುದುಕನೊಬ್ಬ ನಾಲ್ಕು ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ ಮಾಡಿದ್ದಾನೆ, ಇದಕ್ಕಿಂತ ಅಮಾನುಷವಾದ ಪೈಶಾಚಿಕವಾದಂಥ ಕೃತ್ಯ ಇನ್ನೊಂದಿಲ್ಲ. ನಾಚಿಕೆಯಾಗಬೇಕು, ನಾವೆಲ್ಲಾ ತಲೆ ತಗ್ಗಿಸಬೇಕಾಗುತ್ತದೆ. ಹೀಗೆ ನಾಲ್ಕು ವರ್ಷದ ಮಗುವಿನ ಮೇಲೆ, ಆರು ವರ್ಷದ ಮಗುವಿನ ಮೇಲೆ ಈ ರೀತಿ ಮಾಡುತ್ತಿದ್ದಾರಲ್ಲ, ಇವರಿಗೆ

ಕಠಿಣವಾದಂಥ ಶಿಕ್ಷೆಯಾಗಲೇಬೇಕು, ಈ ಕಠಿಣ ಶಿಕ್ಷೆಯನ್ನು ಕೊಡುವುದಕ್ಕೆ ಏನೇನು ಕಾನೂನುಗಳನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಾಗುತ್ತದೋ, ಇದಕ್ಕಾಗಿ ಕೋರ್ಟ್‌ಗಳಲ್ಲಿ ಏನೇನು ಬದಲಾವಣೆಗಳನ್ನು ತರುವುದಕ್ಕೆ ಸಾಧ್ಯವಾಗುತ್ತದೆ, ಇವೆಲ್ಲವನ್ನೂ ಕೂಡ ಮಾಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ದತ್ತಾರವರು, ರೆಕ್ಸ್ ಥಿಯೇಟರ್‌ನಲ್ಲಿ Hate Story-2 ಎನ್ನುವ ಚಿತ್ರ ನಡೆಯುತ್ತಿದೆಯೆಂದು ಹೇಳಿದರು. ಈ ಸಿನಿಮಾದಲ್ಲಿ ಇಂಥದ್ದೆಲ್ಲ ಇದೆಯೆನ್ನುವುದನ್ನು ಹೇಳಿದರು. ನಾನು ಪೊಲೀಸ್ ಕಮಿಷನರ್‌ರವರಿಗೆ ಹೇಳಿ inspection ಮಾಡಿಸಿ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೋ ಆ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಇಲ್ಲಿಗೆ ಚರ್ಚೆಯ ಮೇಲಿನ ಉತ್ತರ ಮತ್ತು ಸ್ಪಷ್ಟೀಕರಣ ಮುಕ್ತಾಯವಾಯಿತು. ಈಗ ಕಾವೇರಿ ಕಣಿವೆ ಜಲಾಶಯಗಳಿಂದ ನೀರಿನ ಹೊರಹರಿವಿನ ಬಗ್ಗೆ ಜಲ ಸಂಪನ್ಮೂಲ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):- ಮಾನ್ಯ ಅಧ್ಯಕ್ಷರೆ,

ಕಾವೇರಿ ನ್ಯಾಯಮಂಡಳಿಯ ದಿನಾಂಕ: 05-02-2007ರ ಆದೇಶದಲ್ಲಿ ಕರ್ನಾಟಕ ರಾಜ್ಯವು ಸಾಮಾನ್ಯ ಜಲವರ್ಷದ ಜೂನ್ ತಿಂಗಳಲ್ಲಿ 10 ಟಿಎಂಸಿ ಮತ್ತು ಜುಲೈ ತಿಂಗಳಲ್ಲಿ 34 ಟಿಎಂಸಿ ಹಾಗೂ ಆಗಸ್ಟ್ ಮಾಹೆಯಲ್ಲಿ 50 ಟಿ.ಎಂ.ಸಿ ಪ್ರಮಾಣದ ನೀರನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ಕಳೆದ 40 ವರ್ಷಗಳ ಸರಾಸರಿ ಒಳಹರಿವಿನ ಪ್ರಮಾಣಕ್ಕೆ ಎದುರಾಗಿ ದಿನಾಂಕ:16-07-2014 ರಂದು ಒಳಹರಿವಿನ ಪ್ರಮಾಣದಲ್ಲಿ 52% ಕೊರತೆ ಇರುತ್ತದೆ. ದಿನಾಂಕ:16-07-2014